ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-07 • ಏಪ್ರಿಲ್ 2023




## ವ್ಯರ್ಥವಾಗದಿರಲಿ ನಿಮ್ಮ ಮತದಾನದ ಹಕ್ಕು

Downloaded From:www.kpscvaani.com




ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಅವರು ಮುಂಬರುವ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ಮಾರ್ಚ್ 9 ರಂದು ವಿಕಾಸಸೌಧದಲ್ಲಿ ಜಿಲ್ಲಾ ಮಟ್ಟದ ಪೂರ್ವಭಾವಿ ತಯಾರಿ ಕುರಿತು ಸಭೆ ನಡೆಸಿದ ಸಂದರ್ಭ. ಈ ಸಂದರ್ಭದಲ್ಲಿ ಆಯೋಗದ ಚುನಾವಣಾ ಆಯುಕ್ತರುಗಳಾದ ಅನೂಪ್ ಚಂದ್ರ ಪಾಂಡೆ, ಅರುಣ್ ಗೋಯೆಲ್ ಸೇರಿದಂತೆ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಹಾಗೂ ಮತ್ತಿತ್ತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದಾರೆ.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/–

# ವಾರ್ತಾ ಜನಪದ

ಸಂಪುಟ–06 • ಸಂಚಿಕೆ–07 • ಏಪ್ರಿಲ್ 2023




**06** ಉಗುರ ತುದಿಯ ಕಲೆಗಿದೆ ಕಿಮ್ಮತ್ತು
• ಮಂಜುನಾಥ್ ಚಾಂದ್

**09** ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲ
• ರಾಘವೇಂದ್ರ. ವಿ

**16** ಅಮೃತ ಮಹೋತ್ಸವದ ಸಂಭ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
• ಡಿ.ಪಿ.ಮುರಳೀಧರ್

**22** ಪರೀಕ್ಷಾ ಫಲಿತಾಂಶ ಎದುರಿಸುವುದು ಹೇಗೆ
• ಡಾ॥ ಮೋಹನ್ ಕುಮಾರ್ ಆರ್


ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru International Film Festival
23-30 | ಮಾರ್ಚ್ MARCH · 2023


**24** 14 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
• ಗಂಗಾಧರ ಮೊದಲಿಯಾರ್

**26** ಜೀವಿಗಳ ಉಳಿವಿಗೊಂದು ಜಾಗೃತಿಯ ಅಭಿಯಾನ
• ಡಾ.ಕೆ. ಪುಟ್ಟಸ್ವಾಮಿ

**29** ಮಕ್ಕಳಿಗೆ ಪರಿಸರ ಕಾಳಜಿ ಕಲಿಸುವ ಗುರು
• ಚಂದ್ರಮುಖಿ





**32** ಬಾನಾಡಿಗಳ ಜೀವನಾಡಿ ಸಲ್ಲಾವುದ್ದೀನ್
• ಈರಣ್ಣ ಬೆಂಗಾಲಿ

**34** ಬಸವಳಿಯದಿರಿ ಈ ಬೇಸಿಗೆಯಲಿ
• ಮಾನಸಿ ಮಂಜುನಾಥ್

**37** ಖಾಕಿ ಮೇಲಿನ ಪ್ರೀತಿಯಿಂದ ಚಾಲಕಿ ಆದ ಅಂಬಿಕಾ
• ಸಂಧ್ಯಾ ಸೊರಬ

**39** ಉನ್ನತ ಶಿಕ್ಷಣದ ಆಕಾಂಕ್ಷೆಗೆ ನೀರೆರೆವ ಮುಕ್ತ ವಿವಿ
• ಶುಭಾ

**41** ಸಿಹಿ ದ್ರಾಕ್ಷಿಯ ಕಣಜ ವಿಜಯಪುರ
• ಜಿ.ಬಿ. ಸಾಲಕ್ಕಿ

**43** ಸಿರಿಧಾನ್ಯಗಳಿಗೆ ಈಗ ಶುಕ್ರದೆಸೆ
• ಆನಂದತೀರ್ಥ ಪ್ಯಾಟಿ

**48** ಮಕ್ಕಳ ಹಿತ ಕಾಪಾಡುವ ಪೋಕ್ಸೋ ಕಾಯ್ದೆ
• ಎನ್. ನಾಗರತ್ನಮ್ಮ

**50** ಪದಬಂಧ-41



**ಪ್ರಧಾನ ಸಂಪಾದಕರು**
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು–50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಕಟಪಡಿಸುವ ಜನಪದ ಪತ್ರಿಕೆಯನ್ನು ನಾನು ಸುಮಾರು ಇಪ್ಪತ್ತು ವರ್ಷಗಳಿಂದಲೂ ಓದುತ್ತಾ ಬಂದಿದ್ದೇನೆ. ಪತ್ರಿಕೆಯು ಅಂದಿನಿಂದಲೂ ತನ್ನ ಘನತೆಯನ್ನು ಕಾಪಾಡಿಕೊಂಡು ಬಂದಿದೆ.

ಆದರೆ ನನಗೆ ಮಾರ್ಚ್ ಸಂಚಿಕೆಯ ವಾರ್ತಾ ಜನಪದಲ್ಲಿ ಬಹುಪಾಲು ಸರ್ಕಾರದ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿತ್ತು ಎನಿಸಿತು. ಈ ಸಂಚಿಕೆಯಲ್ಲಿ ಕೃಷಿ, ಆರೋಗ್ಯ ಮತ್ತು ಪ್ರವಾಸಕ್ಕೆ ಸಂಬಂಧಿಸಿದಂತಹ ಲೇಖನಗಳಾಗಲಿ, ಅರಿವು ಮೂಡಿಸುವಂತಹ ಲೇಖನಗಳಾಗಲಿ ಕಣ್ಮರೆಯಾಗಿತ್ತು.

ಇದು ಸರ್ಕಾರದ ಪುಸ್ತಕ ವಾಗಿರಬಹುದು. ಆದರೆ ಓದುಗರ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ವಿಷಯದಲ್ಲೂ ಲೇಖನಗಳನ್ನು ಪ್ರಕಟಿಸಿದರೆ ಒಳಿತು. ಅರ್ಧ ಭಾಗವನ್ನಾದರು ಇತರೆ ವಿಚಾರಗಳಿಗೆ ಮೀಸಲಿರಲಿ ಎಂಬುದು ನನ್ನ ಅಭಿಪ್ರಾಯ.

**– ಮಂಗಳ, ಕೃಷ್ಣರಾಜ ನಗರ**

* * *

ಕರ್ನಾಟಕದ ಹೆಮ್ಮೆಯ ಸಂಸ್ಥೆಯಾದ ಹೆಚ್‌ಎಎಲ್ ತುಮಕೂರಿನಲ್ಲಿ ಆರಂಭಿಸಿರುವ ಹೆಲಿಕಾಪ್ಟರ್ ತಯಾರಿಕ ಘಟಕದಿಂದಾಗಿ ಭಾರತ ಭೂಪಟದಲ್ಲಿ ತುಮಕೂರು ಉನ್ನತ ಸ್ಥಾನ ಪಡೆದುಕೊಂಡಿದೆ.

ಇದರಿಂದ ಮುಂದಿನ ದಿನಗಳಲ್ಲಿ ಮುಖ್ಯವಾಗಿ ತುಮಕೂರಿನ ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗ ದೊರಕುವ ಅವಕಾಶಗಳು ಹೆಚ್ಚಿವೆ. ಭಾರತದ ರಕ್ಷಣೆಗೆ ತುಮಕೂರಿನಲ್ಲಿ ಹೆಲಿಕಾಪ್ಟರ್ ಸಿದ್ಧಗೊಳ್ಳುತ್ತದೆ ಎಂಬುದೇ ನಮಗೆ ಹೆಮ್ಮೆ.

ವಾಣಿ ಜಯರಾಂ ಅವರ ಕುರಿತ ಲೇಖನ ಓದಿ ಅವರ ಸಾಧನೆ ತಿಳಿದಾಗ ಅಚ್ಚರಿ ಆಯಿತು. ಅವರು ಹದಿನೆಂಟು ಭಾಷೆಗಳಲ್ಲಿ ಹತ್ತು ಸಾವಿರ ಹಾಡುಗಳನ್ನು ಹಾಡಿದ್ದಾರೆ. ಅಲ್ಲದೆ ಅವರ ಸಾಧನೆಗೆ ಅವರ ಪತಿ ಬೆನ್ನೆಲುಬಾಗಿದ್ದರು ಎಂದು ತಿಳಿದು ಇನ್ನೂ ಸಂತೋಷವಾಯಿತು. ಪತ್ನಿಯ ಸಾಧನೆ ಹಿಂದೆ ಪತಿ ಇರುವುದು ಅತ್ಯಂತ ವಿರಾಳಾತಿ ವಿರಳ.

**–ನಾಗರಾಜು, ಕೊರಟಗೆರೆ**

* * *


ಸಿರಿಧಾನ್ಯಗಳ ಬಳಕೆಯ ಬಗ್ಗೆ ಎಲ್ಲೆಲ್ಲೂ ಕೇಳುತ್ತಿದ್ದೇವೆ ಮತ್ತು ಓದುತ್ತಿರುತ್ತೇವೆ. ಆದರೆ ಈ ಬಾರಿ ನಾನು ನಿಮ್ಮ ಪತ್ರಿಕೆಯಿಂದ ಮಿಲೆಟ್ ಮ್ಯಾನ್ ಎಂದೇ ಖ್ಯಾತಿ ಪಡೆದಿರುವ ಕೃಷಿ ಡಾ. ಖಾದರ್ ವಲಿ ಅವರ ಬಗ್ಗೆ ತಿಳಿದುಕೊಳ್ಳುವಂತಾಯಿತು.

ಮೈಸೂರಿನ ಸಿ ಎಫ್ ಟಿ ಆರ್ ಐ ನಲ್ಲಿ ಆಹಾರ ವಿಜ್ಞಾನಿಗಳಾಗಿ ವೃತ್ತಿ ಆರಂಭಿಸಿ, ವಿದೇಶಗಳಲ್ಲೂ ಕೆಲಕಾಲ ಸೇವೆ ಸಲ್ಲಿಸಿರುವ ಅವರು ಸಿರಿಧಾನ್ಯಗಳನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿರುವ ಜೊತೆಗೆ ಮಿದುಳು ಮತ್ತು ರಕ್ತ ಸಂಬಂಧಿ ರೋಗಗಳಿಗೆ ಸಿರಿಧಾನ್ಯ ರಾಮಬಾಣ ಎಂದು ಪ್ರತಿಪಾದಿಸುತ್ತಲೇ ಬಂದಿದ್ದಾರೆ ಎಂದು ತಿಳಿದು ಹೆಮ್ಮೆ ಅನಿಸಿತು.

**– ಈಶ್ವರ್, ಚನ್ನರಾಯಪಟ್ಟಣ**

* * *

ವಾರ್ತಾ ಜನಪದ ಮಾರ್ಚ್ ಸಂಚಿಕೆಯಲ್ಲಿ ನಾಡಿನ 23–24 ರ ಬಜೆಟ್ ಮಾಹಿತಿ ಒಳಗೊಂಡಂತೆ ಎಲ್ಲಾ ಲೇಖನಗಳು ಅತ್ಯಂತ ಅರ್ಥ ಪೂರ್ಣವಾಗಿ ಮೂಡಿ ಬಂದಿದೆ. ಖ್ಯಾತ ಹಿನ್ನೆಲೆ ಗಾಯಕಿ ವಾಣಿ ಜಯರಾಂ ಅವರ ಲೇಖನ ಸಮಗ್ರ ಚಿತ್ರಣವನ್ನು ನೀಡಿದೆ. ಪದ್ಮ ಪ್ರಶಸ್ತಿ ಪುರಸ್ಕೃತರ ಬಗೆಗಿನ ಸಂಪೂರ್ಣ ಮಾಹಿತಿಯೂ ಚೆನ್ನಾಗಿದೆ. ಭಾರತದ ಮುಂದಾಳತ್ವದಲ್ಲಿ ಅಂತಾರಾಷ್ಟ್ರೀಯ ಸರಿಧಾನ್ಯಗಳ ವರ್ಷ ಎಂಬ ಘೋಷಣೆ ಭಾರತಕ್ಕೆ ಹೆಮ್ಮೆ ತಂದಿದೆ.




ಅದರಲ್ಲೂ ಕರ್ನಾಟಕದಲ್ಲಿ ಈ ಸಿರಿಧಾನ್ಯಗಳ ಮೇಳ ನಡೆದದ್ದು ನಮ್ಮ ಕರುನಾಡಿನಲ್ಲಿ ಎಂಬುದು ಹೆಮ್ಮೆಯ ವಿಚಾರ. ರಾಸಾಯನಿಕದಿಂದ ನಲುಗುತ್ತಿರುವ ಆಹಾರ ಪದಾರ್ಥಗಳಿಂದ ಮುಕ್ತವಾಗಿ ಹೊರ ಬಂದು ಸಿರಿಧಾನ್ಯಗಳ ಕಡೆ ಗಮನಹರಿಸುವುದು ಈಗ ಸಮಯೋಚಿತವಾಗಿದೆ.

**–ದಿವಾಕರ್ ಡಿ.ಆರ್, ದಾವಣಗೆರೆ**

* * *

ಬೆಂಗಳೂರಿನಲ್ಲಿ ಸತತವಾಗಿ 14 ಬಾರಿ ಜರುಗಿದ ಏರ್ ಶೋನಲ್ಲಿ ಈ ಬಾರಿ ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ವೀಕ್ಷ ವಿವರಣೆ ನೀಡಿದರು ಎಂಬ ವಿಚಾರವನ್ನು ತಮ್ಮ ಪತ್ರಿಕೆ ಓದಿ ತಿಳಿದು ತುಂಬಾ ಸಂತೋಷವಾಯಿತು. ಈ ಹಿಂದಿನ ಏರ್ ಶೋಗಳಲ್ಲಿ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಸಂಭಾಷಣೆಯನ್ನು ಹೇಳಲಾಗುತಿತ್ತು. ಆದರೆ ಈ ಬಾರಿ ಕನ್ನಡದಲ್ಲಿ ವಿವರಣೆ ನೀಡಿರುವುದು ಶ್ಲಾಘನೀಯವಾದುದು.

**–ಸಂಗಮೇಶ, ಸವದತ್ತಿ**

* * *

2023 ನೇ ಸಾಲಿನಲ್ಲಿ ನಮ್ಮ ರಾಜ್ಯಕ್ಕೆ ಒಂದು ಪದ್ಮವಿಭೂಷಣ, ಎರಡು ಪದ್ಮಭೂಷಣ ಮತ್ತು ಐದು ಜನರಿಗೆ ಪದ್ಮಶ್ರೀ ಪ್ರಶಸ್ತಿ ದೊರಕಿರುವುದು ಹೆಮ್ಮೆಯ ವಿಚಾರ. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಇವರ ಕುರಿತು ತಮ್ಮ ಪತ್ರಿಕೆಯಲ್ಲಿ ಮಾಹಿತಿ ಒದಗಿಸಿರುವುದರಿಂದ ಪತ್ರಿಕೆಯ ಘನತೆ ಹೆಚ್ಚಿದೆಯಲ್ಲದೆ, ನಮಗೆ ಅವರೆಲ್ಲರ ಕುರಿತು ತಿಳಿದುಕೊಳ್ಳಲು ಸಾಧ್ಯವಾಯಿತು. ಲೇಖನ ಸಂಗ್ರಹ ಯೋಗ್ಯವಾಗಿದೆ.

**–ಅನುಪಮ, ಹೊಸಪೇಟೆ**

ಡಾ. ಸಿಬಂತಿ ಪದ್ಮನಾಭ ಅವರು ಬರೆದಿದ್ದ 2023–24 ನೇ ಸಾಲಿನ ಆಯವ್ಯಯ ಕುರಿತ ಲೇಖನ ಓದುಗರಿಗೆ ಆಯವ್ಯಯದಲ್ಲಿ ಇರುವ ಪ್ರಮುಖ ಅಂಶಗಳನ್ನೊಳಗೊಂಡಂತೆ ಉತ್ತಮ ಮಾಹಿತಿಯನ್ನು ಒದಗಿಸಿದೆ. ಹಾಗೆಯೇ ಡಿ.ಪಿ.ಮುರಳೀಧರ್ ಅವರು ಬರೆದಿರುವ 'ಮಾಧುರ್ಯ ಲೋಕದ ರಾಣಿ ವಾಣಿ ಜಯರಾಂ ಇನ್ನಿಲ್ಲ' ಲೇಖನ ಕೂಡ ವಾಣಿ ಜಯರಾಂ ಅವರ ಸಂಪೂರ್ಣ ಸಾಧನೆಯನ್ನು ಬಿಂಬಿಸಿದೆ. ಉತ್ತಮ ಲೇಖನವನ್ನು ನೀಡಿರುವ ಈ ಇಬ್ಬರು ಲೇಖಕರಿಗೆ ಅಭಿನಂದನೆಗಳು.

**– ಅಶೋಕ್ ಕುಮಾರ್, ಮೈಸೂರು**


'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ವಿಧಾನಸಭಾ ಚುನಾವಣೆಯು ಸಮೀಪಿಸುತ್ತಿರುವುದರಿಂದ ಏಪ್ರಿಲ್ ಸಂಚಿಕೆಯ ವಾರ್ತಾ ಜನಪದ ಸಂಚಿಕೆಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಹಾಗೂ ಇತರೆ ವಿಚಾರಗಳಲ್ಲಿ ಅರಿವು ಮೂಡಿಸುವಂತಹ ಲೇಖನಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಮತದಾನ ನಮ್ಮ ಮೂಲಭೂತ ಹಕ್ಕು. ಅಲ್ಲದೆ ಮತದಾನ ಮಾಡುವುದು ನಮ್ಮ ಜವಾಬ್ದಾರಿ ಕೂಡ ಆಗಿರುತ್ತದೆ. ಆದ್ದರಿಂದ ಅತ್ಯಂತ ಮಹತ್ವ ಪೂರ್ಣವಾದ ಮತದಾನದ ಹಕ್ಕನ್ನು ವ್ಯರ್ಥಗೊಳಿಸಬಾರದು. ಪ್ರತಿ ಒಂದೊಂದು ಮತವು ಪ್ರಜಾಪ್ರಭುತ್ವವನ್ನು ಬಲಪಡಿಸಲು ನೆರವಾಗಲಿದೆ. ಕಳೆದ ಬಾರಿಯ ಚುನಾವಣೆಯಲ್ಲಿ ನಗರ ಪ್ರದೇಶಗಳಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಅತ್ಯಂತ ಕಡಿಮೆ ಮತದಾನವಾಗಿತ್ತು. ಹೆಚ್ಚು ವಿದ್ಯಾವಂತರನ್ನು ಹೊಂದಿರುವ ನಗರದಲ್ಲೇ ಹೀಗೆ ಆದರೆ ಅದು ನಮ್ಮೆಲ್ಲರಿಗೂ ಆದ ಅವಮಾನ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ ರಾಜೀವ್ ಕುಮಾರ್ ಅವರು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅತ್ಯಂತ ಕಡಿಮೆ ಮತದಾನವಾಗಿದ್ದ ಮತಗಟ್ಟೆಯ ಮತದಾರರಿಗೆ ಮತದಾನದ ಮಹತ್ವ ಕುರಿತು ಜಾಗೃತಿ ಮೂಡಿಸುವಂತೆ ಸೂಚನೆ ನೀಡಿದ್ದಾರೆ. ಹಾಗಾಗಿ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯು ಮತದಾನ ಪ್ರಮಾಣವನ್ನು ಹೆಚ್ಚಳ ಮಾಡುವ ನಿಟ್ಟಿನಲ್ಲಿ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳುತ್ತಿದೆ.

ಹದಿನೆಂಟು ವರ್ಷ ತುಂಬಿರುವ ಯುವಕ–ಯುವತಿಯರು ತಪ್ಪದೇ ಮತದಾನದ ಗುರುತಿನ ಚೀಟಿಯನ್ನು ಮಾಡಿಸಿಕೊಂಡು, ತಮ್ಮ ಅಮೂಲ್ಯ ಮತವನ್ನು ಚಲಾಯಿಸುವ ಮೂಲಕ ರಾಜ್ಯದ ಅಭಿವೃದ್ಧಿಯ ದೃಷ್ಟಿಯಲ್ಲಿ ತಮ್ಮ ಜನಪ್ರತಿನಿಧಿಯನ್ನು ಆಯ್ಕೆ ಮಾಡಬೇಕು. ಆಗಲೇ ನಾವು ನಮ್ಮ ಸಂವಿಧಾನಕ್ಕೆ ಗೌರವ ಸಲ್ಲಿಸಿದಂತೆ.

ರಾಜ್ಯ ವಿಧಾನಸಭೆಗಳಿಗೆ 2000 ಇಸವಿಯಿಂದಲೇ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲಾಗುತ್ತಿದ್ದರೂ ವಿದ್ಯುನ್ಮಾನ ಮತಯಂತ್ರದ ಮೇಲೆ ನಾಗರಿಕರಿಗೆ ಇನ್ನೂ ನಂಬಿಕೆ ಬರುತ್ತಿಲ್ಲ. ವಿದ್ಯುನ್ಮಾನ ಮತ ಯಂತ್ರವನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಬಹುದು ಎಂದು ಕೆಲವರು ತಪ್ಪು ತಿಳಿದಿದ್ದಾರೆ. ಹಾಗಾಗಿ ಈ ಸಂಚಿಕೆಯಲ್ಲಿ ಜಂಟಿ ಮುಖ್ಯ ಚುನಾವಣಾಧಿಕಾರಿಗಳಾದ ರಾಘವೇಂದ್ರ. ವಿ ಅವರೇ ಸ್ವತಃ ವಿದ್ಯುನ್ಮಾನ ಮತಯಂತ್ರದ ಮೇಲೆ ನಾಗರಿಕರಿಗೆ ಇರುವ ಅಪನಂಬಿಕೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಲೇಖನವನ್ನು ಪ್ರಸ್ತುತ ಪಡಿಸಿದ್ದಾರೆ.

ಇನ್ನೊಂದು ಮಹತ್ವದ ವಿಷಯವೆಂದರೆ, ನಮ್ಮ ಇಲಾಖೆಯು ಅಸ್ತಿತ್ವಕ್ಕೆ ಬಂದು ಎಪ್ಪತ್ತೈದು ವರ್ಷ ತುಂಬಲಿದೆ. ಈ ಹಿನ್ನೆಲೆಯಲ್ಲಿ ಇಲಾಖೆಯ ಇತಿಹಾಸ ಮತ್ತು ಕಾರ್ಯವೈಖರಿಯ ಮೇಲೆ ಬೆಳಕು ಚೆಲ್ಲುವ ಲೇಖನವೂ ಸೇರಿದಂತೆ ಇತರೆ ವಿಷಯಗಳಲ್ಲಿ ಅರಿವು ಮೂಡಿಸುವಂತಹ ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ವಿಶ್ವದಾದ್ಯಂತ ಏಪ್ರಿಲ್ 22 ರಂದು ವಿಶ್ವ ಭೂ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಭೂಮಿ ಉಳಿದರೆ ಮಾತ್ರವೇ ನಾವು ಸೇರಿದಂತೆ ಸಕಲ ಜೀವರಾಶಿಯು ಉಳಿಯಲು ಸಾಧ್ಯ. ಹಾಗಾಗಿ ಭೂಮಿಯ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವುದು ಮತ್ತು ಭೂತಾಯಿ ಕಲುಷಿತಗೊಳ್ಳದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ ಎಂಬುದನ್ನು ಮರೆಯಬಾರದು. ಭೂ ದಿನವನ್ನು ಕೇವಲ ದಿನಾಚರಣೆಗೆ ಸೀಮಿತಗೊಳಿಸದೆ, ಪ್ರತಿ ದಿನವೂ ಭೂಮಿಯ ಸಂರಕ್ಷಣೆಯಲ್ಲಿ ನಾವು ತೊಡಗಿದರೆ ಮಾತ್ರವೇ ನಮ್ಮ ಮುಂದಿನ ಪೀಳಿಗೆಯವರಿಗೆ ಸುಸ್ಥಿರ ಭೂಮಿಯನ್ನು ನೀಡಬಹುದು. ಈ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸೋಣ.

ಡಾ|| ಪಿ. ಎಸ್. ಹರ್ಷ, ಐಪಿಎಸ್
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



# ಉಗುರ ತುದಿಯ ಕಲೆಗಿದೆ ಕಿಮ್ಮತ್ತು

ಮಂಜುನಾಥ್ ಚಾಂದ್

ನಿಮ್ಮ ಎಡಗೈನ ತೋರು ಬೆರಳಿನ ಉಗುರಿನ ಮೇಲೆ ಬೀಳುವ ಸಣ್ಣದೊಂದು ಕಲೆಗೆ ತಾಕತ್ತನ್ನು ಒಮ್ಮೆ ಕಲ್ಪಿಸಿಕೊಳ್ಳಿ. ಅದಕ್ಕೇ ಎಷ್ಟೋ ಮಂದಿ ಮತ ಚಲಾವಣೆ ಮುಗಿಸಿ ಹೊರಗೆ ಬಂದ ಬಳಿಕ ಹೆಮ್ಮೆಯಿಂದ ಈ ತೋರು ಬೆರಳನ್ನು ತೋರಿಸಿ ಬೀಗುವುದು. ನಿಜಕ್ಕೂ ಅದು ಎಂತಹ ಹೆಮ್ಮೆಯ, ಭರವಸೆಯ ಕ್ಷಣವಲ್ಲವೇ? ಅಂತಹುದೊಂದು ಸಣ್ಣ ಶಾಯಿಯ ಕಲೆ ಬೀಳುವುದಕ್ಕಾಗಿ ನಾವು ಕಾತರದಿಂದ ಕಾಯುತ್ತಿರುತ್ತೇವೆ. ಕೆಲವೊಮ್ಮೆ ವರ್ಷಗಳಿಂದ ಕಾದಿರುತ್ತೇವೆ. ಅದು ನಮ್ಮನ್ನು ಆಳುವ, ನಾಡಿಗೊಂದು ಉತ್ತಮ ಆಡಳಿತ ನೀಡುವ ಪ್ರತಿನಿಧಿಯನ್ನು ಆಯ್ಕೆ ಮಾಡಿ ಕಳುಹಿಸುವ ಕ್ಷಣ. ಅದು ನಮ್ಮ ಪಾಲಿಗೆ ದಕ್ಕಿದ ಹಕ್ಕು. ನಮ್ಮ ದೇಶದ ಪ್ರಜಾಪ್ರಭುತ್ವ, ಸಂವಿಧಾನ ನಮಗೆ ಕೊಟ್ಟ ಹಕ್ಕು. ಇದು ನಮ್ಮ ಪ್ರಜಾಪ್ರಭುತ್ವದ ನಿಜವಾದ ಬ್ಯೂಟಿ.

ಇಂತಹ ಕಾತರದ ಕ್ಷಣ ಈಗ ಮತ್ತೆ ಬಂದಿದೆ. ರಾಜ್ಯದ ವಿಧಾನಸಭೆ ಚುನಾವಣೆ ದಿನಾಂಕ ನಿಗದಿಯಾಗಿದೆ. ನಾವು ನಮ್ಮ ಹಕ್ಕನ್ನು ಚಲಾಯಿಸುವ ನಿರ್ಣಾಯಕ ಕಾಲಘಟ್ಟವಿದು. ಸಂವಿಧಾನದತ್ತವಾಗಿ ನಮಗೆ ದೊರೆತಿರುವ ಮತದಾನದ ಹಕ್ಕನ್ನು ನಾವು ಸಂವೇದನಾರಹಿತರಾಗಿ, ಆಮಿಷಗಳ ದಾಸರಾಗಿ ಬಳಸಿದ್ದೇ ಆದರೆ ಅದರ ಪೂರ್ಣ ಫಲವನ್ನು ನಾವೇ ತಿನ್ನುತ್ತೇವೆ ಎನ್ನುವ ಪ್ರಜ್ಞೆ ಇರಬೇಕು. ಮತಪೆಟ್ಟಿಗೆಯಲ್ಲಿ ಅಭ್ಯರ್ಥಿಗಳ ದೊಡ್ಡ ಪಟ್ಟಿಯೇ ಕಣ್ಣ ಮುಂದೆ ಇರುತ್ತದೆ. ಆ ಹೆಸರ ಮುಂದಿನ ಬಟನ್ ಒತ್ತುವ ನಿಮ್ಮ ಬೆರಳ ತುದಿಗೆ ಇರುವ ಶಕ್ತಿ ಇದೆಯಲ್ಲ, ಅದು ಯಾವ ಶಾಸಕ, ಮಂತ್ರಿ, ಅಧಿಕಾರಿಗೂ ಇರುವುದಿಲ್ಲ. ಆ ಶಕ್ತಿಯನ್ನು ಪ್ರಯೋಗ ಮಾಡುವ ಕ್ಷಣ ಅತ್ಯಂತ ಅಮೂಲ್ಯ. ಅದರ ಫಲಾನುಭವಿ ಯಾವುದೋ ಅಭ್ಯರ್ಥಿಯಾಗಿದ್ದರೂ ನಿಜವಾದ ಫಲ ಸಿಗುವುದು ಮಾತ್ರ ಮತದಾರನಿಗೆ. ಇದು ಸಾರ್ವಕಾಲಿಕ ಸತ್ಯ.

ಕಳೆದ ಐದು ವರ್ಷಗಳ ಕಾಲ ಅಧಿಕಾರ ನಡೆಸಿದವರು ಹಾಗೂ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತವರ ಕಾರ್ಯನಿರ್ವಹಣೆಯನ್ನು ಅತ್ಯಂತ ಎಚ್ಚರಿಕೆಯಿಂದ ಅಳೆಯುವ ಸಮಯವಿದು. ಹಾಗೆ ನೋಡಿದರೆ ಇದು ಪಕ್ಷಗಳ ಪಾಲಿನ ಅಥವಾ ಅಭ್ಯರ್ಥಿಯ ಪಾಲಿನ ಅಗ್ನಿ ಪರೀಕ್ಷೆಯಲ್ಲ. ಜನರ ಪಾಲಿನ ಅಗ್ನಿ ಪರೀಕ್ಷೆ. ಯಾರನ್ನು ಆಯ್ಕೆ ಮಾಡಬೇಕು, ನಮ್ಮನ್ನು ಪ್ರತಿನಿಧಿಸುವ ಅರ್ಹತೆ ಯಾರಿಗಿದೆ? ಎಂಬ ಮೂಲಭೂತ ಪ್ರಶ್ನೆಯನ್ನು ಮುಂದಿಟ್ಟುಕೊಂಡು ನಿರ್ಧಾರ ಕೈಗೊಳ್ಳಬೇಕಾದವರು ನಾವು. ಹಾಗಾಗಿ ಈ ಚುನಾವಣೆ ನಮ್ಮ ಮುಂದಿರುವ ಸವಾಲು. ಬೆರಳ ತುದಿ ಯಾವುದೇ ಗುಂಡಿಯನ್ನು ಒತ್ತಬಹುದಾದರೂ ಅಂತಹ ಸಂದರ್ಭದಲ್ಲಿ ಮತದಾರನ ಮನಸ್ಸಿಗೆ ಮಬ್ಬು ಕವಿದಿರಬಾರದು. ಕಣ್ಣಿಗೆ ಪಟ್ಟಿ ಕಟ್ಟಿಕೊಂಡಿರಬಾರದು.

ಒಮ್ಮೆ ಚುನಾವಣೆ ಘೋಷಣೆಯಾಯಿತೆಂದರೆ ಸಾಕು ಅದು



Downloaded From:www.kpscvaani.com



ಅಕ್ಷರಶಃ ಪ್ರಜಾಪ್ರಭುತ್ವದ ಹಬ್ಬ. ಇಂತಹ ಹಬ್ಬದ ಸಂಭ್ರಮ-ಸಡಗರದ ಹೊತ್ತಿನಲ್ಲಿ 'ಪ್ರಜೆಗಳೇ ಪ್ರಭುಗಳು' ಎಂಬುದನ್ನು ಮತದಾರ ಮರೆಯಬಾರದು. ಆತನಿಗೆ ತನ್ನ ನಾಡಿನ ಇತಿಹಾಸದ ಬಗ್ಗೆ ಅರಿವಿರಬೇಕು. ಕನಿಷ್ಠ ಕಳೆದ ಐದು ಹತ್ತು ವರ್ಷಗಳಲ್ಲಿ ಆಗಿ ಹೋಗಿರುವ ರಾಜಕೀಯ ವಿದ್ಯಮಾನಗಳು, ಅಭಿವೃದ್ಧಿ ಕಾರ್ಯಗಳು, ರಾಜ್ಯದ ಒಟ್ಟಾರೆ ಪ್ರಗತಿ ಚಿತ್ರಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಹೊಂದಿರುವುದು ಅಗತ್ಯ. ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಕೊಟ್ಟ ಭರವಸೆಗಳಲ್ಲಿ ಕಾರ್ಯರೂಪಕ್ಕೆ ಬಂದಿದ್ದಾರೂ ಎಷ್ಟು ಎಂಬುದರ ಪ್ರಜ್ಞೆ ಇರಬೇಕು. ಇಷ್ಟು ಮಾಹಿತಿಗಳು ಮತದಾರನ ಬಳಿ ಇದ್ದರೆ ತನ್ನ ಹಕ್ಕನ್ನು ಚಲಾಯಿಸುವ ಸಂದರ್ಭದಲ್ಲಿ ಆತ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಆಗಬೇಕಾದ ಅಭಿವೃದ್ಧಿಯ ಚಿತ್ರವೂ ಕಣ್ಣ ಮುಂದೆ ಇರಬೇಕು.



ನಾವು ಚಲಾಯಿಸುವ ಹಕ್ಕು ನಮಗೆ ಮಾತ್ರ ಅನ್ವಯಿಸಿದ್ದಲ್ಲ. ಅದು ನಮ್ಮ ಮುಂದಿನ ತಲೆಮಾರಿಗೂ ಅನ್ವಯಿಸಿದ್ದಾಗಿದೆ. ನಾವು ಆಯ್ಕೆ ಮಾಡುವ ನಾಯಕ ಕೈಗೊಳ್ಳುವ ನಿರ್ಧಾರಗಳು ನಮ್ಮ ಮಕ್ಕಳ ಭವಿಷ್ಯವನ್ನೂ ನಿರ್ಧರಿಸಬಹುದು. ಹಾಗಾಗಿ ಈ ಓಟಿನಲ್ಲಿ ನಮ್ಮ ಮಕ್ಕಳ ಭವಿಷ್ಯ ಕೂಡ ಅಡಗಿದೆ. ಅವುಗಳಲ್ಲಿ ನಮ್ಮ ಮಕ್ಕಳಿಗೆ ಬೇಕಾದ ಶಿಕ್ಷಣ, ಮೂಲಸೌಕರ್ಯಗಳು, ಉತ್ತಮ ಬದುಕುವ ವಾತಾವರಣ ಮುಂತಾದವು ಸೇರಿವೆ. ಈ ಹಿನ್ನೆಲೆಯಲ್ಲಿ ಮತದಾರನಿಗೆ ನೈತಿಕ ಜವಾಬ್ದಾರಿ ಕೂಡ ಇದೆ.

"ಮತ ಚಲಾಯಿಸುವುದು ಪ್ರತಿಯೊಬ್ಬ ನಾಗರಿಕನಿಗೂ ಅತ್ಯವಶ್ಯ. ಯಾಕೆಂದರೆ ಚಾರಿತ್ರಿಕವಾಗಿ ತುಳಿತಕ್ಕೆ ಒಳಗಾದ ವರ್ಗಗಳಿಗೆ ಇದರಿಂದ ಒಂದಷ್ಟಾದರೂ ರಾಜಕೀಯ ಶಿಕ್ಷಣ ದೊರೆಯುತ್ತದೆ. ಹಾಗಾಗಿ ಭಾರತದ ಮತದಾನದ ಹಕ್ಕು ಅತ್ಯಂತ ಮಹತ್ವದ್ದು" ಎಂಬ ಅರ್ಥಪೂರ್ಣ ಮಾತನ್ನು ಹೇಳಿದವರು ನಮ್ಮ ಸಂವಿಧಾನದ ನಿರ್ಮಾತೃ ಡಾ.ಬಿ.ಆರ್.ಅಂಬೇಡ್ಕರ್ ಅವರು. ನಾವು ಚಲಾಯಿಸುವ ಪ್ರತಿಯೊಂದು ಮತವೂ ಕೂಡ ಎಷ್ಟೊಂದು ಮೌಲ್ಯಯುತ ಹಾಗೂ ಜವಾಬ್ದಾರಿಯುತವಾದುದು ಎಂಬುದು ಇದರಿಂದ ವೇದ್ಯವಾಗುತ್ತದೆ. ಒಂದು ಸಮುದಾಯದ ಅಭ್ಯುದಯದ ದೃಷ್ಟಿಯಿಂದ ರಾಜಕೀಯ ಶಿಕ್ಷಣ ತೀರಾ ಮುಖ್ಯ. ಇಲ್ಲಿ ಆಡಳಿತ ನಡೆಸಿದ ರಾಜಕೀಯ ಪಕ್ಷದ ಬಗ್ಗೆ, ಅದು ತನ್ನ

## ಕಳಂಕದಿಂದ ಪಾರಾಗಲಿ ಬೆಂಗಳೂರ ಮತದಾರರು

ಕಳೆದ ಬಾರಿ, ಅಂದರೆ 2018ರಲ್ಲಿ ಕರ್ನಾಟಕ ವಿಧಾನಸಭೆಯ 222 ಸ್ಥಾನಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆದಾಗ ಒಟ್ಟು ಚಲಾವಣೆಯಾದ ಮತಗಳ ಪ್ರಮಾಣ ಶೇ. 72.13. ಅದು 1952 ರಿಂದೀಚೆಗೆ ಚಲಾವಣೆಯಾದ ಅತ್ಯಂತ ಹೆಚ್ಚಿನ ಮತ ಪ್ರಮಾಣ ಎಂದು ದಾಖಲಾಗಿದೆ. ಆದರೆ ರಾಜಧಾನಿ ಬೆಂಗಳೂರಿನ ಜನ ಮಾತ್ರ ಸಾಕಷ್ಟು ಹಿಂದೆಯೇ ಉಳಿಯುವ ಮೂಲಕ ತಮ್ಮ ಜವಾಬ್ದಾರಿಯನ್ನು ಮರೆತರು. ಬೆಂಗಳೂರಿನಲ್ಲಿ ದಾಖಲಾದ ಒಟ್ಟು ಮತಚಲಾವಣೆಯ ಪ್ರಮಾಣ ಕೇವಲ ಶೇ.54. ಅದು ಕಳೆದ (2013ರ) ಚುನಾವಣೆಗೆ ಹೋಲಿಸಿದರೆ ಶೇ.2ರಷ್ಟು ಜಾಸ್ತಿ. ಈ ಮೂಲಕ ಬೆಂಗಳೂರಿನ ಜನ ಚುನಾವಣೆಯ ಸಂದರ್ಭದಲ್ಲಿ ತಮ್ಮ ಹಕ್ಕನ್ನು ಚಲಾಯಿಸದೆ ಮನೆಯಲ್ಲಿಯೇ ಕುಳಿತು ಕರ್ತವ್ಯವನ್ನು ಮರೆತರು ಎಂಬ ಟೀಕೆಗೆ ಗುರಿಯಾದರು. ಈ ಬಾರಿ ಬೆಂಗಳೂರಿನ ಮತದಾರರು ಆ ಟೀಕೆಯಿಂದ ಪಾರಾಗುತ್ತಾರೆ ಎಂಬ ನಿರೀಕ್ಷೆ ಹೊಂದಲಾಗಿದೆ.

ಈ ವರ್ಷದ ಜನವರಿ ತಿಂಗಳಲ್ಲಿ ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿದ ಪಟ್ಟಿಯ ಪ್ರಕಾರ ಕರ್ನಾಟಕದಲ್ಲಿರುವ ಒಟ್ಟು ಮತದಾರರ ಸಂಖ್ಯೆ 5.05 ಕೋಟಿ. ಇವರಲ್ಲಿ ಮಹಿಳಾ ಮತದಾರರ ಸಂಖ್ಯೆ 2.50 ಕೋಟಿ. ಈ ಪಟ್ಟಿಯಲ್ಲಿ ಮತದಾರರ ಪಟ್ಟಿ ಕಳವು ಪ್ರಕರಣ ದಾಖಲಾಗಿರುವ ಮೂರು ಕ್ಷೇತ್ರಗಳನ್ನು ಹೊರತು ಪಡಿಸಲಾಗಿದೆ.



Downloaded From:www.kpscvaani.com



ಅಧಿಕಾರದ ಅವಧಿಯಲ್ಲಿ ಕಾಯ್ದುಕೊಂಡ ಸಾಮಾಜಿಕ ನ್ಯಾಯದ ಬಗ್ಗೆ, ತಳಸಮುದಾಯವನ್ನು ಸಮಾಜದ ಮುಂಚೂಣಿಗೆ ತರುವಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಸೂಕ್ತ ಮಾಹಿತಿ ಇಲ್ಲದೇ ಇದ್ದರೆ 'ಪ್ರಜಾತಂತ್ರ'ದ ಸ್ವಯಂಘೋಷಿತ ಬ್ಯಾನರ್ ಅಡಿಯಲ್ಲಿ ನಾವು ಮತ್ತೆ ಮತ್ತೆ ಮೋಸ ಹೋಗುತ್ತಲೇ ಇರುತ್ತೇವೆ.

ಚುನಾವಣೆ ಬಂದಾಗ ನಮ್ಮಲ್ಲಿ ಮಾಹಿತಿಯ ಕೊರತೆ ಇದ್ದರೆ ತಪ್ಪು ಆಯ್ಕೆ ಮಾಡುವುದನ್ನು ಮುಂದುವರಿಸುತ್ತಲೇ ಇರುತ್ತೇವೆ. ನಮ್ಮಲ್ಲಿ ನಿಖರವಾದ ಮಾಹಿತಿ ಇದ್ದರೆ ನಾವು ಕೈಗೊಂಡ ನಿರ್ಧಾರಕ್ಕೆ ಅರ್ಥ ಬರುತ್ತದೆ. ಹಾಗಿದ್ದರೆ ಮಾತ್ರ ಒಬ್ಬ ನಿಷ್ಠಾವಂತ ಜನಪ್ರತಿನಿಧಿಯನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತದೆ ಎಂಬುದು ಅಂಬೇಡ್ಕರ್ ಅವರ ಮಾತಿನ ಅರ್ಥ. ಇಂತಹ ಜನಪ್ರತಿನಿಧಿಗಳು ಶಕ್ತಿಕೇಂದ್ರವಾದ ವಿಧಾನಸೌಧವನ್ನು ಪ್ರವೇಶ ಮಾಡುತ್ತಾರೆ. ಅಲ್ಲೊಂದು ಸಶಕ್ತವಾದ ಸರ್ಕಾರದ ರಚನೆ ಸಾಧ್ಯವಾಗುತ್ತದೆ. ಹೀಗೆ ರೂಪುಗೊಂಡ ಸರ್ಕಾರ ಪ್ರಜೆಗಳೇ ನಿಜವಾದ ಪ್ರಭುಗಳು ಎಂಬ ತತ್ವದಲ್ಲಿ ನಂಬಿಕೆಯನ್ನಿಟ್ಟು ಜನಪರವಾದ ಯೋಜನೆಗಳನ್ನು ರೂಪಿಸುತ್ತದೆ. ಇದು ಚುನಾವಣೆಯಿಂದ ಸಾಧ್ಯವಾಗುವ ನಿಜವಾದ ಪರಿವರ್ತನೆ. ಮತದಾನ ಮಾಡುವ ಸಂದರ್ಭದಲ್ಲಿ ವ್ಯಕ್ತಿನಿಷ್ಠವಾಗಿ ಯೋಚನೆ ಮಾಡದೇ ವಸ್ತುನಿಷ್ಠವಾಗಿ, ಸಮುದಾಯನಿಷ್ಠವಾಗಿ ಚಿಂತಿಸಿದಾಗ ಮಾತ್ರ ಇಂತಹ ರೂಪಾಂತರ ಸಾಧ್ಯವಾಗುತ್ತದೆ.

ಆದರೆ ಪರಿಸ್ಥಿತಿ ನಾವು ಅಂದುಕೊಂಡಷ್ಟು ಸುಲಭವಿಲ್ಲ. ಇಂದಿನ ಡಿಜಿಟಲ್ ಯುಗದಲ್ಲಿ, ಸಾಮಾಜಿಕ ಜಾಲತಾಣಗಳ ಒಡ್ಡೋಲಗದಲ್ಲಿ ಹರಿದು ಬರುತ್ತಿರುವ ಮಾಹಿತಿ ಪ್ರವಾಹವನ್ನು ಕಡಿವಾಣ ಹಾಕುವ ಸ್ಥಿತಿಯಲ್ಲಂತೂ ನಾವಿಲ್ಲ. ಹೀಗೆ ಬರುವ ಮಾಹಿತಿಗಳ ಸತ್ಯಾಸತ್ಯತೆಗೆ ಜರಡಿ ಹಿಡಿಯುವ ಕೆಲಸ ಇಂದಿನ ನಿಜವಾದ ಅಗತ್ಯ. ಒಬ್ಬ ವ್ಯಕ್ತಿಗೆ ಕಳಂಕ ತರುವ ಮತ್ತು ಆತನನ್ನು ಅಗತ್ಯಕ್ಕಿಂತ ಹೆಚ್ಚು ವೈಭವೀಕರಣ ಮಾಡುವ ಪ್ರಯತ್ನಗಳು ಸಾಮಾಜಿಕ ಜಾಲತಾಣಗಳಲ್ಲಿ ಭರಪೂರವಾಗಿ ನಡೆಯುತ್ತಿರುತ್ತವೆ. ಇವುಗಳ ವಸ್ತುನಿಷ್ಠತೆಯನ್ನು ಅರ್ಥ ಮಾಡಿಕೊಳ್ಳುವಂತಹ ನಿರ್ಣಾಯಕ ಕಾಲಘಟ್ಟದಲ್ಲಿ ನಾವಿದ್ದೇವೆ. ಈ ಹಿನ್ನೆಲೆಯಲ್ಲಿ ನಾವು ಎದುರುಗೊಳ್ಳುತ್ತಿರುವ ಚುನಾವಣೆ ಹಿಂದೆಂದಿಗಿಂತಲೂ ಭಿನ್ನವಾದುದು. ಮಾಹಿತಿ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ನಮಗೆ ನಾವು ಕಡಿವಾಣ ಹಾಕಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಮುಂದೆ ಇದೆ.

"ಈ ದೇಶ ಅಂದ್ರೆ ಏನ್ ಅನ್ಕೊಂಡ್ ಬಿಟ್ಟಿದ್ದೀರಯ್ಯಾ? ಅದೇನು ಮಣ್ಣಾ, ಕಲ್ಲಾ? ಮರ–ಗಿಡಗಳಾ? ಜನ, ದೇಶ ಅಂತಂದ್ರೆ ಜನ ಕಣಯ್ಯ" ಎಂದು ಕವಿ ಪು.ತಿ.ನ ಅವರು ಹೇಳುತ್ತಾರೆ. ಚುನಾವಣೆ ಹೊತ್ತಿನಲ್ಲಿಯೂ ಅದೇ ಮಾತನ್ನು ಹೇಳಬೇಕಾಗುತ್ತದೆ. ಈ ದೇಶವನ್ನು ರೂಪಿಸ ಬೇಕಾದವರು ಜನ. ಪಕ್ಷವನ್ನು ಆಡಳಿತ ಚುಕ್ಕಾಣಿಗೆ ತಂದು ನಿಲ್ಲಿಸುವವರು ಜನ. ಒಬ್ಬ ಪ್ರತಿನಿಧಿಯನ್ನು ನಾಯಕನನ್ನಾಗಿ ಮಾಡುವವರು ಜನ. ಆಡಳಿತ ನಡೆಸುವವರನ್ನು ಪ್ರಶ್ನೆಗಳ ಕಟಕಟೆಗೆ ತಂದು ನಿಲ್ಲಿಸುವವರು, ಚುಕ್ಕಾಣಿಯಿಂದ ಕೆಳಗಿಳಿಸುವವರೂ ಜನರೇ. ಅವರ ಮೇಲೆ ಇರುವ ಜವಾಬ್ದಾರಿ ದೊಡ್ಡದು. ಇದು ನಮ್ಮ ಪ್ರಜಾಪ್ರಭುತ್ವದ ಅದ್ಭುತವಾದ ಶಕ್ತಿ. 'ಕೋಟೆ ಕಟ್ಟಿ ಮೆರೆದೋರೆಲ್ಲ' ಜನತಾ ನ್ಯಾಯಾಲಯದ ಮುಂದೆ ಯಕಶ್ಚಿತ್. ಅಧಿಕಾರದ ರುಚಿಕಂಡ ಎಂತಹ ನಾಯಕನೂ ಇಲ್ಲಿ ಬಾಗಲೇಬೇಕು. ಅಂತಹ ಸಮಯ ಈಗ ಬಂದಿದೆ. ಜವಾಬ್ದಾರಿಯುತ ಮತದಾರನ ಬೆರಳ ತುದಿಯಲ್ಲಿ ಎಲ್ಲವೂ ನಿರ್ಧಾರವಾಗಲಿದೆ. ಹಾಗಾಗಿ ಗುಂಡಿ ಒತ್ತುವ ಮುನ್ನ ಕ್ಷಣ ಯೋಚಿಸಿ. ನಿರ್ವಿಕಾರ ಮನಸ್ಸಿನಿಂದ ನಿರ್ಧಾರ ಕೈಗೊಳ್ಳಿ. ಮತದಾನ ಮತದಾರನ ವರದಾನ. ಈ ವರದಾನ ವ್ಯರ್ಥವಾಗದಿರಲಿ. ಅದರಿಂದ ಉಜ್ವಲ ಭವಿಷ್ಯ ರೂಪುಗೊಳ್ಳಲಿ. ■




Downloaded From:www.kpscvaani.com




# ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲ...

ರಾಘವೇಂದ್ರ. ವಿ

**ನಾಗರಿಕರಿಗೆ ವಿದ್ಯುನ್ಮಾನ ಮತಯಂತ್ರದ ಮೇಲಿರುವ ಅನುಮಾನಗಳನ್ನು ಹೋಗಲಾಡಿಸುವ ಸಲುವಾಗಿ ಜಂಟಿ ಮುಖ್ಯ ಚುನಾವಣಾಧಿಕಾರಿಗಳಾದ ರಾಘವೇಂದ್ರ. ವಿ ಅವರು ಈ ಲೇಖನದಲ್ಲಿ ಚುನಾವಣೆಗೆ ಬಳಸುವ ವಿದ್ಯುನ್ಮಾನ ಮತಯಂತ್ರದ ಕುರಿತಂತೆ ಕೂಲಂಕುಷ ಮಾಹಿತಿಯನ್ನು ಒದಗಿಸಿದ್ದಾರೆ.**

ಕೇಂದ್ರ ಸರ್ಕಾರವು, 1990ರ ಜನವರಿ ತಿಂಗಳಿನಲ್ಲಿ, ಮಾನ್ಯತೆ ಪಡೆದಿರುವ ಹಲವಾರು ರಾಷ್ಟ್ರೀಯ ಮತ್ತು ರಾಜ್ಯ ಪಕ್ಷಗಳ (National and state parties) ಪ್ರತಿನಿಧಿಗಳನ್ನು ಒಳಗೊಂಡ ಒಂದು ಚುನಾವಣಾ ಸುಧಾರಣಾ ಸಮಿತಿಯನ್ನು ನೇಮಕ ಮಾಡಿತು. ಅಲ್ಲದೆ, ಈ ಚುನಾವಣಾ ಸುಧಾರಣಾ ಸಮಿತಿಯು, ವಿದ್ಯುನ್ಮಾನ ಮತಯಂತ್ರಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಪರಿಣಿತರ ಒಂದು ಸಮಿತಿಯನ್ನು ರಚಿಸಿತು. ಸಮಿತಿಯು, ವಿದ್ಯುನ್ಮಾನ ಮತಯಂತ್ರವು ಒಂದು ಸುರಕ್ಷಿತ ವ್ಯವಸ್ಥೆಯಾಗಿದೆ ಎಂಬ ನಿರ್ಣಯಕ್ಕೆ ಬಂದಿತು. ಆದುದರಿಂದ, ತಜ್ಞರ ಸಮಿತಿಯು ಹೆಚ್ಚು ಸಮಯವನ್ನು ವ್ಯರ್ಥಮಾಡದೆ, 1990ರ ಏಪ್ರಿಲ್ ತಿಂಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬಳಕೆಗೆ ಸರ್ವಾನುಮತದಿಂದ ಶಿಫಾರಸ್ಸು ಮಾಡಿತು. ಇದು ವಿದ್ಯುನ್ಮಾನ ಮತಯಂತ್ರದ ಹಿನ್ನೆಲೆ.

2000ನೇ ಇಸವಿಯಿಂದಲೂ ರಾಜ್ಯ ವಿಧಾನಸಭೆಗಳಿಗೆ ನಡೆಸಲಾದ 107 ಸಾರ್ವತ್ರಿಕ ಚುನಾವಣೆಗಳಲ್ಲಿ ಹಾಗೂ 2004, 2009 ಮತ್ತು 2014ರಲ್ಲಿ ಲೋಕಸಭೆಗೆ ನಡೆಸಲಾದ 3 ಸಾರ್ವತ್ರಿಕ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲಾಗಿದೆ.

**ವಿದ್ಯುನ್ಮಾನ ಮತಯಂತ್ರಗಳ ಬಳಕೆ ಕುರಿತು ನ್ಯಾಯಾಲಯದ ತೀರ್ಪುಗಳು:**

ವಿದ್ಯುನ್ಮಾನ ಮತಯಂತ್ರವನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸುವ ಸಾಧ್ಯತೆಯ ವಿವಾದವನ್ನು 2001 ರಿಂದ ಮದ್ರಾಸ್, ದೆಹಲಿ, ಕರ್ನಾಟಕ, ಕೇರಳ ಮತ್ತು ಬಾಂಬೆ ಉಚ್ಚ ನ್ಯಾಯಾಲಯಗಳ ಮುಂದೆ ಎತ್ತಲಾಗಿತ್ತು.

ಭಾರತದಲ್ಲಿ ನಡೆಯುವ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬಳಕೆಯಲ್ಲಿ ಒಳಗೊಂಡಿರುವ ತಾಂತ್ರಿಕ ಸುರಕ್ಷತೆ ಮತ್ತು ಆಡಳಿತಾತ್ಮಕ ಕ್ರಮಗಳ ಎಲ್ಲಾ ಅಂಶಗಳನ್ನು ಅವಲೋಕಿಸಿದ ನಂತರ ಎಲ್ಲಾ ಉಚ್ಚ ನ್ಯಾಯಾಲಯಗಳು, ಭಾರತದಲ್ಲಿ ವಿದ್ಯುನ್ಮಾನ ಮತಯಂತ್ರಗಳು, ವಿಶ್ವಾಸಾರ್ಹವಾದಂಥವು, ನಂಬಿಕೆಗೆ ಅರ್ಹವಾದಂಥವು ಹಾಗೂ ಒಟ್ಟಾರೆಯಾಗಿ ಅಕ್ರಮವಾಗಿ ವ್ಯತ್ಯಸ್ತಗೊಳಿಸಲು



Downloaded From:www.kpscvaani.com

ಸಾಧ್ಯವಿಲ್ಲದಂಥವುಗಳಾಗಿವೆ ಎಂದು ತೀರ್ಪು ನೀಡಿವೆ. ಈ ಕೆಲವೊಂದು ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯದ ಆದೇಶಗಳ ವಿರುದ್ಧ ಕೆಲವು ಅರ್ಜಿದಾರರು ಸಲ್ಲಿಸಿದ ಮೇಲ್ಮನವಿಗಳನ್ನು ಸರ್ವೋಚ್ಚ ನ್ಯಾಯಾಲಯವು ಸಹ ತಳ್ಳಿಹಾಕಿದೆ.

"ಈ ಆವಿಷ್ಕಾರವು ವಿದ್ಯುನ್ಮಾನ ಮತ್ತು ಗಣಕಯಂತ್ರ ತಂತ್ರಜ್ಞಾನದಲ್ಲಿ ನಿಸ್ಸಂದೇಹವಾಗಿಯೂ ಬಹು ದೊಡ್ಡ ಸಾಧನೆಯಾಗಿದ್ದು, ರಾಷ್ಟ್ರವು ಹೆಮ್ಮೆ ಪಡುವ ವಿಷಯವಾಗಿದೆ" ಎಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಮದರಾಸ್ ಉಚ್ಚ ನ್ಯಾಯಾಲಯಗಳೆರಡೂ, ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬಳಕೆಯು, ಮತಪತ್ರ/ಮತಪೆಟ್ಟಿಗೆ ಆಧಾರಿತ ಚುನಾವಣಾ ವ್ಯವಸ್ಥೆಗಿಂತ ಹಲವಾರು ರೀತಿಯಲ್ಲಿ ಅನುಕೂಲಕರವಾಗಿದೆ ಎಂದು ಅಭಿಪ್ರಾಯಪಟ್ಟಿವೆ. ಮಾನ್ಯ ಮದ್ರಾಸ್ ಉಚ್ಚ ನ್ಯಾಯಾಲಯವು ಸಹ ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸುವ ಯಾವುದೇ ಪ್ರಶ್ನೆಯನ್ನು ಸ್ಪಷ್ಟವಾಗಿ ತಳ್ಳಿಹಾಕಿದೆ.

"ಯಾವುದೇ 'ವೈರಸ್' ಅಥವಾ 'ಬಗ್'ಗಳನ್ನು ಸೇರಿಸುವ ಯಾವ ಪ್ರಶ್ನೆಯೂ ಸಹ ಉದ್ಭವಿಸುವುದಿಲ್ಲವಾದ್ದರಿಂದ, ವಿದ್ಯುನ್ಮಾನ ಮತಯಂತ್ರಗಳನ್ನು ವೈಯಕ್ತಿಕ ಗಣಕಯಂತ್ರಗಳಿಗೆ ಹೋಲಿಸಲು ಸಾಧ್ಯವಿಲ್ಲ. ಈಗಾಗಲೇ ಸೂಚಿಸಿದಂತೆ, ಗಣಕಯಂತ್ರಗಳಲ್ಲಿನ ಪ್ರೋಗ್ರಾಮಿಂಗ್‌ಗೂ ವಿದ್ಯುನ್ಮಾನ ಮತಯಂತ್ರಗಳ ಪ್ರೋಗ್ರಾಮಿಂಗ್‌ಗೂ ಯಾವುದೇ ಸಂಬಂಧ ಇಲ್ಲ. ಗಣಕಯಂತ್ರವು ಅಂತರ್ಜಾಲದ ಮೂಲಕ ಸಂಪರ್ಕಗಳನ್ನು ಹೊಂದಿದ್ದು, ಕೇವಲ ಅವುಗಳ ವಿನ್ಯಾಸದಿಂದಾಗಿಯೇ ಅಂತರ್ನಿಹಿತ ಮಿತಿಗಳನ್ನು ಹೊಂದಿರುತ್ತದೆ ಮತ್ತು ಅವುಗಳಲ್ಲಿ ಪ್ರೋಗ್ರಾಮ್‌ನ ಮಾರ್ಪಾಡಿಗೆ ಅವಕಾಶವಿದೆ. ಆದರೆ, ವಿದ್ಯುನ್ಮಾನ ಮತಯಂತ್ರಗಳು ಸ್ವತಂತ್ರ ಘಟಕಗಳಾಗಿದ್ದು, ವಿದ್ಯುನ್ಮಾನ ಮತಯಂತ್ರದಲ್ಲಿನ ಪ್ರೋಗ್ರಾಮ್ ಸಂಪೂರ್ಣವಾಗಿ ಒಂದು ವಿಭಿನ್ನ ವ್ಯವಸ್ಥೆಯಾಗಿದೆ."

ಕೇರಳದ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಹೂಡಲಾದ ಮೊಕದ್ದಮೆಗಳ ಪೈಕಿ ಒಂದು ಮೊಕದ್ದಮೆಗೆ ಸಂಬಂಧಿಸಿದಂತೆ, ದಿನಾಂಕ 06.02.2002 ರಂದು, ಆ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ, ಇವಿಎಂನ ಯಾಂತ್ರಿಕ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಕುರಿತು ತನ್ನ ಪ್ರಶಂಸೆಯನ್ನು ದಾಖಲಿಸಿದೆ.

ವಿದ್ಯುನ್ಮಾನ ಮತಯಂತ್ರಗಳಲ್ಲಿರುವ ಯಾವುದೇ ರೀತಿಯ ಒಳಾಂಶಗಳ (contents) ಬಗ್ಗೆ ಯಾರೊಬ್ಬರಿಗೂ ಗೊತ್ತಿಲ್ಲದೇ ಇರುವುದರಿಂದ ಅಥವಾ ಅವುಗಳಲ್ಲಿ ಯಾರೊಬ್ಬರೂ ಅನಧಿಕೃತವಾಗಿ ಅಥವಾ ಮುಕ್ತವಾಗಿ ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ, ಭಾರತದ ವಿದ್ಯುನ್ಮಾನ ಮತಯಂತ್ರಗಳಲ್ಲಿ ಬಳಕೆಗೆ ತಂದಿರುವ ದತ್ತಾಂಶ ಅಥವಾ ತಂತ್ರವು ಪೈರಸಿಗೆ ಒಳಗಾಗಿಲ್ಲ ಎಂಬ ವಿಷಯವನ್ನು ವಿವಿಧ ನ್ಯಾಯಾಲಯಗಳ ಮುಂದೆ ಒಪ್ಪಿಕೊಳ್ಳಲಾಗಿದೆ.

ತದನಂತರ, ವಿದ್ಯುನ್ಮಾನ ಮತಯಂತ್ರಗಳು ತಪ್ಪು ಮಾಡಲು ಆಸ್ಪದವಿಲ್ಲದವುಗಳಲ್ಲವೆಂದು ಹಾಗೂ ಅವುಗಳನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ಹೇಳಿ, 2009ರಲ್ಲಿ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗಳ ನಂತರ ಮತ್ತೊಮ್ಮೆ ರಾಜಕೀಯ ಪಕ್ಷಗಳು ವಿವಾದವನ್ನು ಎತ್ತಿದವು. ಆದರೂ, ನಿರ್ದಿಷ್ಟವಾಗಿ ಯಾವುದೇ ಆರೋಪವನ್ನು ಮಾಡಲಿಲ್ಲ ಅಥವಾ ಯಾವುದೇ ನ್ಯಾಯಾಲಯದ ಮುಂದೆ ಅದನ್ನು ಸಾಬೀತು ಪಡಿಸಲು ಸಾಧ್ಯವಾಗಲಿಲ್ಲ.

ಕೆಲವು ಕಾರ್ಯಕರ್ತರು ಈ ಕುರಿತು 2009ರಲ್ಲಿ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲನ್ನೇರಿದರು, ಆಗ ಅದು ಭಾರತದ ಚುನಾವಣಾ ಆಯೋಗಕ್ಕೆ ಹೋಗಲು ಅವರಿಗೆ ಸಲಹೆ ನೀಡಿತು. ಆಗ, ಈ ಕಾರ್ಯಕರ್ತರು ಸಂವಾದ ಪ್ರಾರಂಭಿಸಿದರು ಹಾಗೂ ಭಾರತ ಚುನಾವಣಾ ಆಯೋಗದ ಸ್ವಾಮ್ಯದಲ್ಲಿರುವ ಮತಯಂತ್ರವನ್ನು ಹೇಗೆ ಅಕ್ರಮವಾಗಿ ವ್ಯತ್ಯಸ್ತಗೊಳಿಸಬಹುದು ಎಂಬುದನ್ನು ಯಾರು ಬೇಕಾದರೂ ತೋರಿಸಿಕೊಡಬಹುದೆಂದು ಭಾರತ ಚುನಾವಣಾ ಆಯೋಗವು ಬಹಿರಂಗವಾಗಿ ಸವಾಲನ್ನು ಹಾಕಿತು. ಆದರೆ, ಭಾರತದ ಚುನಾವಣಾ ಆಯೋಗವು ಅವಕಾಶಗಳನ್ನು ನೀಡಿದರೂ, ಯಂತ್ರಗಳನ್ನು ತೆರೆದು ಆಂತರಿಕ ಘಟಕಾಂಶಗಳನ್ನು ತೋರಿಸಿದಾಗ್ಯೂ, ಭಾರತದ ಚುನಾವಣಾ ಆಯೋಗದ ಕೇಂದ್ರ ಕಚೇರಿಯಲ್ಲಿ, ಯಾರೊಬ್ಬರಿಗೂ, ಮತಯಂತ್ರವನ್ನು ತಮಗೆ ಬೇಕಾದಂತೆ ಅಕ್ರಮವಾಗಿ ವ್ಯತ್ಯಸ್ತಗೊಳಿಸಬಹುದು ಎಂಬುದನ್ನು ತೋರಿಸಿಕೊಡಲು ಸಾಧ್ಯವಾಗಲಿಲ್ಲ. ಅಲ್ಲಿ ನಡೆದ ಎಲ್ಲಾ ಕಾರ್ಯಕಲಾಪಗಳ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಯಿತು.

ಒಂದು ವಿಶೇಷ ಕ್ರಮವಾಗಿ, ಆಯೋಗವು ವಿದ್ಯುನ್ಮಾನ ಮತಯಂತ್ರದ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದಂಥವರಿಗೆ, 2009ರ ಆಗಸ್ಟ್ 3ರಿಂದ 8ರವರೆಗೆ, ಆಯೋಗದ ಕಚೇರಿಗೆ ಬಂದು ತಮ್ಮ ಆಪಾದನೆಗಳಲ್ಲಿ ಎತ್ತಿದ ಅಂಶಗಳನ್ನು ಕುರಿತು ತೋರಿಸಿಕೊಡಲು ಆಹ್ವಾನಿಸಿತು. ಹೀಗೆ ಆಹ್ವಾನಿತರಾದವರಲ್ಲಿ ರಾಜಕೀಯ ಪಕ್ಷಗಳು, ವಿವಿಧ ನ್ಯಾಯಾಲಯಗಳ ಮುಂದೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಹಾಗೂ ಈ ವಿಷಯ ಕುರಿತು ಆಯೋಗಕ್ಕೆ ಲಿಖಿತದಲ್ಲಿ ತಿಳಿಸಿದ ಕೆಲವು ವ್ಯಕ್ತಿಗಳು ಇದ್ದರು. ಆಂಧ್ರಪ್ರದೇಶ, ದೆಹಲಿ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಪಂಜಾಬ್, ರಾಜಾಸ್ಥಾನ, ತಮಿಳುನಾಡು ಮತ್ತು ಉತ್ತರ ಪ್ರದೇಶಗಳಿಂದ ಒಂದು ನೂರು ವಿದ್ಯುನ್ಮಾನ ಮತಯಂತ್ರಗಳನ್ನು ತರಿಸಿ, ಅವುಗಳನ್ನು ಪರಿಶೀಲಿಸಲು ಮತ್ತು ಆರೋಪಿಸಿರುವ ದೋಷವನ್ನು ಯಾವುದೇ ಅಪ್ಲಿಕೇಷನ್‌ಗೆ ಬಳಸಿ ಸಾಬೀತುಪಡಿಸಲು ಆ ಮತಯಂತ್ರಗಳನ್ನು ಸಿದ್ಧಸ್ಥಿತಿಯಲ್ಲಿ ಆಯೋಗದ ಕಚೇರಿಯಲ್ಲಿ ಇರಿಸಲಾಗಿತ್ತು. ತಾಂತ್ರಿಕ ಪರಿಣಿತರ ತಂಡ, ಹಾಗೆಯೇ ವಿದ್ಯುನ್ಮಾನ ಮತಯಂತ್ರಗಳ ತಯಾರಕರು, ಬಿ.ಇ.ಎಲ್. ಮತ್ತು ಇ.ಸಿ.ಐ.ಎಲ್.ಗಳನ್ನು ಪ್ರತಿನಿಧಿಸುವ ಇಂಜಿನಿಯರ್‌ಗಳ ಸಮಕ್ಷಮದಲ್ಲಿ ಅಂಥ ಪ್ರಾತ್ಯಕ್ಷಿಕೆಗೆ ವಿದ್ಯುನ್ಮಾನ ಮತಯಂತ್ರಗಳನ್ನು ಒದಗಿಸಲಾಯಿತು. ಈ ಪ್ರಯೋಗದ ಫಲಶ್ರುತಿಯೆಂದರೆ, ಅವಕಾಶ ನೀಡಲಾಗಿದ್ದ ವ್ಯಕ್ತಿಗಳ ಪೈಕಿ ಯಾರೊಬ್ಬರಿಗೂ ಭಾರತದ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರಗಳನ್ನ ಅಕ್ರಮವಾಗಿ ತಮಗೆ ಬೇಕಾದಂತೆ ವ್ಯತ್ಯಸ್ತಗೊಳಿಸುವ ಸಾಧ್ಯತೆಯನ್ನು ವಾಸ್ತವವಾಗಿ ಪ್ರಾತ್ಯಕ್ಷಿಕೆ ಮೂಲಕ ಸಾಬಿತು ಪಡಿಸಲು ಸಾಧ್ಯವಾಗಲಿಲ್ಲ. ಅವರು ಇದರಲ್ಲಿ ವಿಫಲರಾದರು.

ಆನಂತರ, ಕೆಲವು ಕಾರ್ಯಕರ್ತರು


Downloaded From:www.kpscvaani.com

ದುರುಪಯೋಗ ಪಡಿಸಿಕೊಳ್ಳಲು ಸಾಧ್ಯವಿದೆ ಎಂದು ತಾವು ಕ್ಲೇಮು ಮಾಡುತ್ತಿರುವ "ಯಂತ್ರ"ವನ್ನು ದೂರದರ್ಶನ ವಾಹಿನಿಯಲ್ಲಿ ತೋರಿಸಿದರು. ಭಾರತ ಚುನಾವಣಾ ಆಯೋಗವು, ಈ 'ಯಂತ್ರ'ವನ್ನು ಮುಂಬೈನಲ್ಲಿರುವ ವಿದ್ಯುನ್ಮಾನ ಮತಯಂತ್ರದ ಸಂಗ್ರಾಹಾಗಾರದಿಂದ ಕಳವು ಮಾಡಲಾಗಿದ್ದು, ಅದು ಕಾರ್ಯಕರ್ತರಿಂದ ಬದಲಾವಣೆಗೆ ಒಳಪಟ್ಟಿತ್ತೆಂದು ಮತ್ತು ಹೀಗಾಗಿ ಅದು ಭಾರತ ಚುನಾವಣಾ ಆಯೋಗವು ಬಳಸಿದ 'ಯಂತ್ರ'ವಾಗಿ ಉಳಿದಿಲ್ಲವೆಂದು ತಿಳಿಸಿ ಪ್ರತ್ಯಾರೋಪ ಮಾಡಿತು.

2010ರಲ್ಲಿ, ಭಾರತ ಚುನಾವಣಾ ಆಯೋಗವು ಕರೆದಿದ್ದ ಸಭೆಯಲ್ಲಿ ಅಸ್ಸಾಂ ಮತ್ತು ತಮಿಳುನಾಡಿನಿಂದ ಬಂದ ಕೆಲವು ರಾಜಕೀಯ ಪಕ್ಷಗಳನ್ನು ಹೊರತು ಪಡಿಸಿ, ಉಳಿದ ಎಲ್ಲಾ ರಾಜಕೀಯ ಪಕ್ಷಗಳು ವಿದ್ಯುನ್ಮಾನ ಮತಯಂತ್ರಗಳ ಕಾರ್ಯನಿರ್ವಹಣೆಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದ್ದವು. ಈ ಹಂತದಲ್ಲಿ "ಮತದಾರರು ಪರಿಶೀಲಿಸಬಹುದಾದ ಕಾಗದ ಲೆಕ್ಕಪರಿಶೋಧನಾ ಪರೀಕ್ಷೆ" (ವಿವಿಪಿಎಟಿ) ಪರಿಕಲ್ಪನೆಯನ್ನು ಮತ್ತಷ್ಟು ಪರಿಶೋಧಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

**ಭಾರತದ ಚುನಾವಣಾ ಆಯೋಗವು ಬಳಸುವ ವಿದ್ಯುನ್ಮಾನ ಮತಯಂತ್ರಗಳ ತಾಂತ್ರಿಕ ಸುರಕ್ಷತೆ:**

- ಈ ಯಂತ್ರವನ್ನು ಯಾವುದೇ ರೀತಿಯಿಂದ ಅಕ್ರಮವಾಗಿ ವ್ಯತ್ಯಸ್ತಗೊಳಿಸುವುದನ್ನು ತಡೆಯಲು ವಿದ್ಯುನ್ಮಾನೀಯವಾಗಿ ಸಂರಕ್ಷಿಸಲಾಗಿದೆ. ಈ ಯಂತ್ರಗಳಲ್ಲಿ ಬಳಸಲಾಗುವ ಪ್ರೋಗ್ರಾಮ್ ಅನ್ನು (ತಂತ್ರಾಂಶವನ್ನು), ಬದಲಾಯಿಸಲು ಅಥವಾ ಅಕ್ರಮವಾಗಿ ತಿದ್ದಲು ಸಾಧ್ಯವಾಗದಂತೆ 'ಒನ್ ಟೈಮ್ ಪ್ರೋಗ್ರಾಮೇಬಲ್ (ಒಟಿಪಿ) /ಮ್ಯಾಸ್ಕ್‌ಡ್ ಚಿಪ್'ನಲ್ಲಿ ಸಮ್ಮಿಳನಗೊಳಿಸಲಾಗಿದೆ. ಅಲ್ಲದೆ, ಈ ಯಂತ್ರಗಳನ್ನು ಯಾವುದೇ ಇತರ ಯಂತ್ರ ಅಥವಾ ಸಿಸ್ಟಮ್‌ಗೆ ತಂತಿಯ ಮೂಲಕವಾಗಲಿ ಅಥವಾ ನಿಸ್ತಂತು ವಿಧಾನದ ಮೂಲಕವಾಗಲಿ ಸಂಪರ್ಕಗೊಳಿಸಿರುವುದಿಲ್ಲ. ಆದ್ದರಿಂದ, ಇದರ ದತ್ತಾಂಶ ಮಾಹಿತಿಯನ್ನು ಅಕ್ರಮವಾಗಿ ತಿದ್ದುವ ಯಾವುದೇ ಸಾಧ್ಯತೆ ಇರುವುದಿಲ್ಲ.
- ವಿದ್ಯುನ್ಮಾನ ಮತಯಂತ್ರಗಳ ತಂತ್ರಾಂಶವನ್ನು ಬಿಇಎಲ್ (ರಕ್ಷಣಾ ಮಂತ್ರಾಲಯದ ಪಿ.ಎಸ್.ಯು.) ಮತ್ತು ಇ.ಸಿ.ಐ.ಎಲ್. (ಅಣು ಇಂಧನ ಮಂತ್ರಾಲಯದ ಪಿಎಸ್‌ಯು)ನಲ್ಲಿರುವ ಆಯ್ದ ಇಂಜಿನಿಯರುಗಳ ಒಂದು ತಂಡದ ಮೂಲಕ ಪ್ರತ್ಯೇಕ-ಪ್ರತ್ಯೇಕವಾಗಿ ಅವರವರ ಸಂಸ್ಥೆಯ ವ್ಯಾಪ್ತಿಯಲ್ಲೇ ಅಭಿವೃದ್ಧಿ ಪಡಿಸಲಾಗಿದೆ. ಆಯ್ದ 2-3 ಇಂಜಿನಿಯರುಗಳ ಒಂದು ತಂತ್ರಾಂಶ ಅಭಿವೃದ್ಧಿ ತಂಡವು ಮೂಲ ಸಂಕೇತವನ್ನು ವಿನ್ಯಾಸಗೊಳಿಸುತ್ತದೆ ಹಾಗೂ ಈ ಕಾರ್ಯವನ್ನು ಯಾರಿಗೂ ಉಪ-ಗುತ್ತಿಗೆಗೆ ನೀಡಲಾಗುವುದಿಲ್ಲ.
- ತಂತ್ರಾಂಶ ವಿನ್ಯಾಸ ಕಾರ್ಯವು ಪೂರ್ಣಗೊಂಡ ನಂತರ, ತಂತ್ರಾಂಶ ಅಗತ್ಯತೆ ತಪಶೀಲುಗಳ (ಎಸ್‌ಆರ್‌ಎಸ್) ಪ್ರಕಾರ ಒಂದು ಸ್ವತಂತ್ರ ಪರೀಕ್ಷಾ ತಂಡವು ಈ ತಂತ್ರಾಂಶದ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ನಡೆಸುತ್ತದೆ. ತಂತ್ರಾಂಶವನ್ನು ವಾಸ್ತವವಾಗಿ ಅದರ ಉದ್ದೇಶಿತ ಬಳಕೆಗಾಗಿ ವಿಧಿಸಿದ ಅಗತ್ಯತೆಗಳಿಗೆ ಅನುಸಾರವಾಗಿ ಮಾತ್ರ ಬರೆಯಲಾಗಿದೆ ಎಂಬುದನ್ನು ಇದು ಖಚಿತಪಡಿಸುತ್ತದೆ.
- ಅಂಥ ಮೌಲ್ಯಮಾಪನವು ಯಶಸ್ವಿಯಾಗಿ ಪೂರ್ಣಗೊಂಡ ನಂತರ, ಮೂಲ ಪ್ರೋಗ್ರಾಮ್ ಸಂಕೇತದ ಯಂತ್ರ ಸಂಕೇತವನ್ನು ಸೂಕ್ಷ್ಮ ನಿಯಂತ್ರಕಗಳಲ್ಲಿ ಅಳವಡಿಸುವುದಕ್ಕಾಗಿ ಸೂಕ್ಷ್ಮ ನಿಯಂತ್ರಕ ತಯಾರಕನಿಗೆ ನೀಡಲಾಗುವುದು. ಈ ಯಂತ್ರ ಸಂಕೇತದಿಂದ ಮೂಲ ಸಂಕೇತವನ್ನು ಓದಲು ಸಾಧ್ಯವಾಗುವುದಿಲ್ಲ. ಮೂಲ ಸಂಕೇತವನ್ನು ಪಿ.ಎಸ್.ಯು.ಗಳ ತಂತ್ರಾಂಶ ತಂಡದ ಹೊರಗಿನ ಯಾವೊಬ್ಬ ವ್ಯಕ್ತಿಗೂ ಎಂದಿಗೂ ಹಸ್ತಾಂತರ ಮಾಡಲಾಗುವುದಿಲ್ಲ.
- ಸೂಕ್ಷ್ಮನಿಯಂತ್ರಕ ತಯಾರಕನು, ಮೌಲ್ಯಮಾಪನಕ್ಕಾಗಿ ಪಿ.ಎಸ್.ಯು.ಗಳಿಗೆ ಪ್ರಾರಂಭದಲ್ಲಿಯೇ ಇಂಜಿನಿಯರಿಂಗ್ ಮಾದರಿಗಳನ್ನು ಒದಗಿಸುತ್ತಾರೆ. ಈ ಮಾದರಿಗಳನ್ನು ವಿದ್ಯುನ್ಮಾನ ಮತಯಂತ್ರದೊಳಗೆ ಜೋಡಿಸಲಾಗುತ್ತದೆ ಹಾಗೂ ಅದರ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸವಿಸ್ತಾರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಪರಿಶೀಲಿಸಲಾಗುತ್ತದೆ. ಈ ಪರಿಶೀಲನಾ ಪ್ರಕ್ರಿಯೆಯು ಯಶಸ್ವಿಯಾಗಿ ಪೂರ್ಣಗೊಂಡ ನಂತರವೇ, ಪಿ.ಎಸ್.ಯು. ಸೂಕ್ಷ್ಮನಿಯಂತ್ರಕ ತಯಾರನಿಗೆ ಬೃಹತ್ ಪ್ರಮಾಣದಲ್ಲಿ ಉತ್ಪಾದನೆ ಮಾಡಲು ಅನುಮತಿ ನೀಡುತ್ತದೆ.





Downloaded From:www.kpscvaani.com




- ವಿದ್ಯುನ್ಮಾನ ಮತಯಂತ್ರದ ಮೂಲ ಸಂಕೇತವನ್ನು ಎಲ್ಲಾ ಸಮಯದಲ್ಲೂ ನಿಯಂತ್ರಿತ ಸ್ಥಿತಿಯಲ್ಲಿ ಸಂಗ್ರಹಿಸಿಡಲಾಗಿರುತ್ತದೆ. ನಿರ್ಬಂಧಗಳನ್ನು ವಿಧಿಸುವ ಮೂಲಕ ಇದನ್ನು ಅಧಿಕೃತ ಸಿಬ್ಬಂದಿ ಮಾತ್ರ ನೋಡಲು ಸಾಧ್ಯ ಎಂಬುದನ್ನು ಖಚಿತ ಪಡಿಸಿಕೊಳ್ಳಲಾಗುವುದು.
- ಕಾರ್ಖಾನೆಯಲ್ಲಿ ಯಂತ್ರಗಳನ್ನು ಉತ್ಪಾದಿಸುವ ಸಮಯದಲ್ಲಿ, ವಿಧಿಸಲಾದ ಗುಣಮಟ್ಟಯೋಜನೆ ಮತ್ತು ಕಾರ್ಯಕ್ಷಮತೆ ಕುರಿತ ಪರೀಕ್ಷಾ ಕಾರ್ಯವಿಧಾನಗಳಿಗೆ ಅನುಸಾರವಾಗಿ ಉತ್ಪಾದನಾ ತಂಡವು ಯಂತ್ರದ ಕಾರ್ಯನಿರ್ವಹಣೆಯ ಪರೀಕ್ಷೆಯನ್ನು ಮಾಡುತ್ತದೆ.
- ಒಬ್ಬ ಮತದಾರನು ಒಂದು ಬಾರಿ ಮಾತ್ರ ಮತ ಚಲಾಯಿಸಲು ಅವಕಾಶ ಇರುವಂತೆ ತಂತ್ರಾಂಶವನ್ನು ವಿನ್ಯಾಸ ಗೊಳಿಸಲಾಗಿದೆ. ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿರುವ ಬ್ಯಾಲೆಟ್ ಅನ್ನು ಸಿದ್ಧಗೊಳಿಸಿದ ನಂತರ ಮಾತ್ರವೇ, ಬ್ಯಾಲೆಟ್ ಯೂನಿಟ್‌ನಿಂದ ಮತದಾರನು ಮತವನ್ನು ದಾಖಲಿಸಬಹುದಾಗಿದೆ. ಯಾವುದೇ ಸಮಯದಲ್ಲೂ, ಯಂತ್ರವು ಹೊರಗಿನಿಂದ ಬರುವ ಯಾವುದೇ ಸಂಕೇತವನ್ನು ಸ್ವೀಕರಿಸುವುದಿಲ್ಲ. ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿರುವ ಬ್ಯಾಲೆಟ್ ಅನ್ನು ಸಿದ್ಧಗೊಳಿಸಿದ ನಂತರ ಮಾತ್ರವೇ ಮುಂದಿನ ಮತವನ್ನು ದಾಖಲಿಸಲು ಸಾಧ್ಯ. ಈ ನಡುವೆ, ಹೊರಗಿನಿಂದ ಬರುವ ಯಾವುದೇ ಸಂಕೇತಕ್ಕೆ (ಕಂಟ್ರೋಲ್ ಯೂನಿಟ್‌ನಿಂದ ಬರುವ ಸಂಕೇತವನ್ನು ಹೊರತುಪಡಿಸಿ)ಯಂತ್ರವು ನಿಷ್ಕ್ರೀಯವಾಗಿರುತ್ತದೆ.
- ಪಿ.ಎಸ್.ಯು.ನ ಒಳಗಿದ್ದು, ಒಂದು ಸ್ವತಂತ್ರ ಘಟಕವಾಗಿರುವ ಗುಣಮಟ್ಟ ಭರವಸೆ ತಂಡವು, ಉತ್ಪಾದನಾ ತಂಡಗಳಿಂದ ತಯಾರಿಸಲ್ಪಟ್ಟ ವಿದ್ಯುನ್ಮಾನ ಮತಯಂತ್ರಗಳ ಮಾದರಿಗಳನ್ನು, ಯಂತ್ರದ ಕಾರ್ಯನಿರ್ವಹಣೆಯ ಸಂಬಂಧದಲ್ಲಿ ನಿಯತವಾಗಿ ಪರಿಶೀಲಿಸುತ್ತದೆ.
- ಭಾರತ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರಗಳಲ್ಲಿ ಬ್ಯಾಲೆಟ್‌ಯೂನಿಟ್(ಬಿಯು) ಮತ್ತು ಕಂಟ್ರೋಲ್‌ಯೂನಿಟ್ (ಸಿಯು) ನಡುವೆ ಸಕ್ರೀಯ ಸಂಕೇತ, ನೈಜ ಸಮಯ ಹೊಂದಿದ ಗಡಿಯಾರದ ಅಳವಡಿಕೆ, ಪೂರ್ಣ ಪ್ರದರ್ಶನಾ ವ್ಯವಸ್ಥೆ ಹಾಗೂ ವಿದ್ಯುನ್ಮಾನ ಮತಯಂತ್ರದಲ್ಲಿನ ಪ್ರತಿಯೊಂದು ಕೀ ಒತ್ತಿದಾಗ ದಿನಾಂಕ ಮತ್ತು ಸಮಯವನ್ನು ಸೂಚಿಸುವ ವ್ಯವಸ್ಥೆಯ ಅಳವಡಿಕೆಗಳಂಥ ಕೆಲವು ಹೆಚ್ಚುವರಿ ವೈಶಿಷ್ಟ್ಯಗಳನ್ನು 2006ರಲ್ಲಿ ಪರಿಚಯಿಸಲಾಯಿತು.
- ಕಂಟ್ರೋಲ್‌ಯೂನಿಟ್ಟು, ಹೈಫ್ರೀಕ್ವೆನ್ಸಿ ರಿಸೀವರನ್ನು ಮತ್ತು ದತ್ತಾಂಶ ಡೀ ಕೋಡರನ್ನು ಹೊಂದಿಲ್ಲದೇ ಇರುವುದರಿಂದ, ವೈರ್‌ಲೆಸ್ ಅಥವಾ ಹೊರಗಿನ ಅಥವಾ ಬ್ಲೂಟೂಥ್ ಅಥವಾ ವೈ-ಫೈನ ಗುಪ್ತ ಸಂಕೇತಗಳ ಮೂಲಕ ಕಂಟ್ರೋಲ್ ಯೂನಿಟ್ ಅನ್ನು ಯಾವುದೇ ರೀತಿಯಲ್ಲಿ ಅಕ್ರಮವಾಗಿ ವ್ಯತ್ಯಸ್ತಗೊಳಿಸಬಹುದು ಎಂಬ ವಿಷಯ ಅಸಂಬದ್ಧವೆಂದು 2006ರಲ್ಲಿ ತಾಂತ್ರಿಕ ಮೌಲ್ಯಮಾಪನ ಸಮಿತಿಯು ನಿರ್ಣಯಿಸಿತು. ಕಂಟ್ರೋಲ್ ಯೂನಿಟ್ ವಿಶೇಷವಾಗಿ ಗೂಢಲಿಪ್ಯಂತರೀಕರಿಸಿರುವ (ಎನ್‌ಕ್ರಿಪ್ಟ್) ಮತ್ತು ಸಕ್ರೀಯವಾಗಿ ಸಂಕೇತೀಕರಿಸಿರುವ ದತ್ತಾಂಶವನ್ನು ಮಾತ್ರ ಬ್ಯಾಲೆಟ್‌ಯೂನಿಟ್‌ನಿಂದ ಸ್ವೀಕರಿಸುತ್ತದೆ. ಯಾವುದೇ ಬಾಹ್ಯ ಮೂಲದಿಂದ ಬರುವ ಮಾಹಿತಿಯನ್ನು ಕಂಟ್ರೋಲ್ ಯೂನಿಟ್ ಸ್ವೀಕರಿಸುವುದಿಲ್ಲ.
- ಸಂಪರ್ಕವಿರದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ (Stand alone) ಮತಯಂತ್ರಗಳಾಗಿರುವುದರಿಂದ ಭಾರತ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರಗಳನ್ನು ಇತರ ರಾಷ್ಟ್ರಗಳ ಯಂತ್ರಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ, ಇತರ ರಾಷ್ಟ್ರಗಳಲ್ಲಿ ಬಳಸಲಾಗುವ ಬಹಳಷ್ಟು ಸಿಸ್ಟಮ್‌ಗಳು ಅಂತರ್ಜಾಲದ ಸಂಪರ್ಕ ಹೊಂದಿರುವ ಗಣಕಯಂತ್ರವನ್ನು ಆಧರಿಸಿವೆ. ಆದ್ದರಿಂದ, ಇವುಗಳನ್ನು ಸುಲಭವಾಗಿ ಹ್ಯಾಕಿಂಗ್‌ಗೆ ಗುರಿಪಡಿಸಲು ಸಾಧ್ಯವಿದೆ.

**ಪ್ರಕ್ರಿಯಾತ್ಮಕ ಮತ್ತು ಆಡಳಿತಾತ್ಮಕ ಸುರಕ್ಷತೆಗಳು.**

ಭಾರತ ಚುನಾವಣಾ ಆಯೋಗವು, ವಿದ್ಯುನ್ಮಾನ ಮತಯಂತ್ರಗಳ ಕಾರ್ಯಕ್ಷಮತೆ ಮತ್ತು ವಿಶ್ವಾಸಾರ್ಹತೆಯ ಮೇಲೆ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಲ್ಲಿ ವಿಶ್ವಾಸವನ್ನು ಮೂಡಿಸಲು, ಪ್ರತಿಯೊಂದು


Downloaded From:www.kpscvaani.com

ಹಂತದಲ್ಲಿ, ಅವರ ಸಕ್ರಿಯ ಮತ್ತು ದಾಖಲೆ ಸಹಿತ ಪಾಲ್ಗೊಳ್ಳುವಿಕೆಯೊಂದಿಗೆ ಪಾರದರ್ಶಕವಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಸುರಕ್ಷಾ ಕ್ರಮಗಳನ್ನು ಅಳವಡಿಸಿಕೊಂಡಿದೆ.

- ಪ್ರತಿಯೊಂದು ಚುನಾವಣೆಯನ್ನು ನಡೆಸುವ ಮುಂಚೆ, ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ, ವಿದ್ಯುನ್ಮಾನ ಮತಯಂತ್ರಗಳ ತಯಾರಿಕೆದಾರರ ಇಂಜಿನಿಯರ್‌ಗಳು, ಚುನಾವಣೆಯಲ್ಲಿ ಬಳಸಬೇಕಾಗಿರುವ ಪ್ರತಿಯೊಂದು ವಿದ್ಯುನ್ಮಾನ ಮತಯಂತ್ರಕ್ಕೆ ಸಂಬಂಧಿಸಿದಂತೆ, ಮೊದಲ ಹಂತದ ಪರಿಶೀಲನೆಯನ್ನು (ಎಫ್‌ಎಲ್‌ಸಿ) ಮಾಡುತ್ತಾರೆ. ಅಸಮರ್ಪಕವಾಗಿ ಕೆಲಸ ಮಾಡುವ ಯಾವುದೇ ವಿದ್ಯುನ್ಮಾನ ಮತಯಂತ್ರವನ್ನು ಪ್ರತ್ಯೇಕವಾಗಿ ಇಡಲಾಗುತ್ತದೆ ಹಾಗೂ ಅದನ್ನು ಚುನಾವಣೆಯಲ್ಲಿ ಬಳಸುವುದಿಲ್ಲ.
- ವಿದ್ಯುನ್ಮಾನ ಮತಯಂತ್ರದ ತಯಾರಕರು ಮೊದಲ ಹಂತದ ಪರಿಶೀಲನೆಯ ಅವಧಿಯಲ್ಲೇ ವಿದ್ಯುನ್ಮಾನ ಮತಯಂತ್ರದಲ್ಲಿನ ಎಲ್ಲಾ ಘಟಕಗಳು ಮೂಲ ಘಟಕಗಳೆಂದು ಪ್ರಮಾಣೀಕರಿಸಿರುತ್ತಾರೆ. ಇದಾದ ನಂತರ, ವಿದ್ಯುನ್ಮಾನ ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಪ್ಲಾಸ್ಟಿಕ್ ಕ್ಯಾಬಿನೆಟ್ ಅನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಹಿ ಮಾಡಿರುವ "ಗುಲಾಬಿ ಬಣ್ಣದ ಪೇಪರ್ ಸೀಲ್ ಅನ್ನು ಬಳಸಿ ಮೊಹರು (ಸೀಲ್) ಮಾಡಲಾಗಿರುತ್ತದೆ ಹಾಗೂ ಭದ್ರತಾ ಕೊಠಡಿಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. ವಿದ್ಯುನ್ಮಾನ ಮತಯಂತ್ರಗಳ ಒಳಗಿನ ಯಾವುದೇ ಘಟಕವನ್ನು ವೀಕ್ಷಿಸಲು/ಮುಟ್ಟಲು ಆಸ್ಪದ ಇರುವುದಿಲ್ಲ.
- ಇದಲ್ಲದೆ, ಮೊದಲ ಹಂತದ ಪರಿಶೀಲನಾ ಸಮಯದಲ್ಲಿ, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಶೇಕಡಾ 5ರಷ್ಟು ವಿದ್ಯುನ್ಮಾನ ಮತಯಂತ್ರಗಳಲ್ಲಿ ಯಾದೃಚ್ಛಿಕವಾಗಿ ಅವರೇ ಆಯ್ಕೆ ಮಾಡಿಕೊಂಡು ಕನಿಷ್ಠ ಪಕ್ಷ 1000 ಮತಗಳನ್ನು ಚಲಾಯಿಸುವರು. ಈ ಅಣಕು ಮತದಾನದ ಫಲಿತಾಂಶಗಳ ಒಂದು ಮುದ್ರಿತ ಪ್ರತಿಯನ್ನು ಹಾಗೂ ವಿದ್ಯುನ್ಮಾನ ಮತಯಂತ್ರಗಳ ಮೊದಲ ಹಂತದ ಪರಿಶೀಲನೆಯ ಸಮಯದಲ್ಲಿ ಅಣಕು ಮತದಾನದ ಅವಧಿಯಲ್ಲಿ ಚಲಾಯಿಸಿದ ಪ್ರತಿಯೊಂದು ಮತದಾನದ ಅನುಕ್ರಮ ಸಂಖ್ಯೆಯ ಮುದ್ರಿತ ಪ್ರತಿಯನ್ನು, ಕನಿಷ್ಠ ಪಕ್ಷ ಶೇಕಡಾ 5ರಷ್ಟು ವಿದ್ಯುನ್ಮಾನ ಮತಯಂತ್ರಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡು ಅದನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತೋರಿಸಲಾಗುವುದು. ಈ ಉದ್ದೇಶಕ್ಕಾಗಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಯಾದೃಚ್ಛಿಕವಾಗಿ ಮತಯಂತ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ. ಉಳಿದ ಯಂತ್ರಗಳಲ್ಲಿ, ಅಣಕು ಮತದಾನದ ಅವಧಿಯಲ್ಲಿ ಚಲಾಯಿಸಿದ ಮತಗಳ ಸಂಖ್ಯೆಗಳು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಸಮಾಧಾನಕರವಾಗಿರುವಂತಿರುತ್ತವೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಸ್ವತಃ ಅಣಕು ಮತದಾನವನ್ನು ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಇದನ್ನೆಲ್ಲಾ ಉಪ ಚುನಾವಣಾ ಅಧಿಕಾರಿಗಳು/ರಿಟರ್ನಿಂಗ್ ಅಧಿಕಾರಿಗಳು ದಾಖಲು ಮಾಡಿಕೊಳ್ಳುತ್ತಾರೆ.
- ತರುವಾಯ, ಸಂಗ್ರಹಿಸಿಟ್ಟಿದ್ದ ವಿದ್ಯುನ್ಮಾನ ಮತಯಂತ್ರಗಳನ್ನು ಕಂಪ್ಯೂಟರ್ ತಂತ್ರಾಂಶದಿಂದ ಯಾದೃಚ್ಛಿಕ ಆಯ್ಕೆ ವಿಧಾನದ ಮೂಲಕ ಎರಡು ಬಾರಿ, ಎಂದರೆ ವಿಧಾನಸಭಾ ಚುನಾವಣಾ ಕ್ಷೇತ್ರಗಳಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಒಮ್ಮೆ ಮತ್ತು ಎರಡನೇ ಬಾರಿ ಪ್ರತ್ಯೇಕ ಮತಗಟ್ಟೆಗಳಲ್ಲಿ ಯಂತ್ರಗಳನ್ನು ಬಳಸುವುದಕ್ಕೆ ಸಂಬಂಧಿಸಿದಂತೆ, ಅವುಗಳನ್ನು ವಿತರಣೆ ಮಾಡುವ ಮೊದಲು ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳ ಸಮಕ್ಷಮದಲ್ಲಿ ಮತಗಟ್ಟೆಗಳಿಗೆ ಹಂಚಿಕೆ ಮಾಡಲಾಗುತ್ತದೆ. ನಿರ್ದಿಷ್ಟ ಮತಗಟ್ಟೆಗೆ ಹಂಚಿಕೆ ಮಾಡಲಾಗಿರುವ ವಿದ್ಯುನ್ಮಾನ ಮತಯಂತ್ರದ ಕ್ರಮಸಂಖ್ಯೆಯನ್ನು ಒಳಗೊಂಡಿರುವಂಥ ವಿದ್ಯುನ್ಮಾನ ಮತಯಂತ್ರಗಳ ಅಂಥ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ/ಅಭ್ಯರ್ಥಿಗಳಿಗೆ ಒದಗಿಸಲಾಗುವುದು.
- ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ, ಅಭ್ಯರ್ಥಿಯ ಹೆಸರನ್ನು ಸೆಟ್ ಮಾಡುವ ಸಮಯದಲ್ಲಿ ಹಾಗೂ ಬಳಸಲಾಗುತ್ತಿರುವ ವಿದ್ಯುನ್ಮಾನ ಮತಯಂತ್ರಗಳ ತೃಪ್ತಿದಾಯಕ ಕಾರ್ಯನಿರ್ವಹಣೆ ಕುರಿತು ಸ್ವತಃ ಮನವರಿಕೆ ಮಾಡಿಕೊಳ್ಳಲು, ಮತದಾನದ ದಿನದಂದು, ವಾಸ್ತವಿಕ ಮತದಾನ ನಡೆಯುವ ಮುಂಚೆ, ವಿದ್ಯುನ್ಮಾನ ಮತಯಂತ್ರಗಳಲ್ಲಿ ಅಣಕು ಮತದಾನವನ್ನು ನಡೆಸಲು ಅವಕಾಶ ಮಾಡಿಕೊಡಲಾಗುತ್ತದೆ.
- ಒಮ್ಮೆ ಅಭ್ಯರ್ಥಿಯ ಹೆಸರನ್ನು ಸೆಟ್ ಮಾಡಿದ ನಂತರ, ವಿದ್ಯುನ್ಮಾನ ಮತಯಂತ್ರದ ಬ್ಯಾಲೆಟ್ ಯೂನಿಟ್‌ನೊಳಗೆ ಯಾರೊಬ್ಬರೂ ಹಸ್ತಕ್ಷೇಪ ಮಾಡಲು ಸಾಧ್ಯವಾಗದಂತೆ ಬ್ಯಾಲೆಟ್‌ಯೂನಿಟ್ ಅನ್ನು ದಾರ/ಗುಲಾಬಿ ಬಣ್ಣದ ಕಾಗದದ ಮೊಹರುಗಳೊಂದಿಗೆ ಸೀಲ್ ಮಾಡಲಾಗುತ್ತದೆ. ಈ ಗುಲಾಬಿ ಬಣ್ಣದ ಮೊಹರುಗಳು ರಾಜಕೀಯ ಪಕ್ಷಗಳ/ಅಭ್ಯರ್ಥಿಯ ಪ್ರತಿನಿಧಿಗಳ ಸಹಿಗಳನ್ನು ಸಹ ಹೊಂದಿರುತ್ತವೆ.
- ಮತದಾನದ ದಿನದಂದು, ಅಭ್ಯರ್ಥಿಗಳ ಪ್ರತಿನಿಧಿಗಳ/ ಚುನಾವಣಾ ಏಜಂಟರ ಸಮ್ಮುಖದಲ್ಲಿ ಅವರ ಸಹಿಯೊಂದಿಗೆ ಪ್ರತಿಯೊಂದು ಮತಗಟ್ಟೆಯಲ್ಲಿ, ಕನಿಷ್ಠ ಪಕ್ಷ 50 ಮತಗಳನ್ನು ಚಲಾಯಿಸುವ ಮೂಲಕ ಒಂದು ಅಣಕು ಮತದಾನವನ್ನು ನಡೆಸಲಾಗುತ್ತದೆ ಮತ್ತು ಅಣುಕು ಮತದಾನ ನಡೆಸಿರುವ ಸಂಬಂಧದಲ್ಲಿ ಪ್ರತಿಯೊಬ್ಬ ಪ್ರಿಸೈಡಿಂಗ್ ಅಧಿಕಾರಿಯು ಒಂದು ಅಣಕು ಮತದಾನ ಪ್ರಮಾಣಪತ್ರವನ್ನು ಪಡೆಯುತ್ತಾರೆ.


Downloaded From:www.kpscvaani.com

- ಅಣಕು ಮತದಾನ ಪೂರ್ಣಗೊಂಡ ನಂತರ, ಮತದಾನ ನಿರ್ವಹಣೆಗೆ ಸಂಬಂಧಿಸಿದಂತೆ ಬಳಸುವ ವಿದ್ಯುನ್ಮಾನ ಮತಯಂತ್ರಗಳನ್ನು ಹೊರತುಪಡಿಸಿ, ಉಳಿದ ವಿದ್ಯುನ್ಮಾನ ಮತಯಂತ್ರದ ಮೇಲಿರುವ ಎಲ್ಲಾ ಗುಂಡಿ (ಬಟನ್)ಗಳ ನಿರ್ಬಂಧಿಸಲು ವಿದ್ಯುನ್ಮಾನ ಮತಯಂತ್ರದ ಮೇಲೆ ಮತ್ತೊಂದು ದಾರದ ಮೊಹರು ಮತ್ತು ಹಸಿರು ಕಾಗದದ ಮೊಹರನ್ನು ಹಾಕಲಾಗುತ್ತದೆ. ಈ ಕಾಗದದ ಮೊಹರುಗಳ ಮತ್ತುದಾರದ ಮೊಹರುಗಳ ಮೇಲೆ ಸಹಿ ಮಾಡಲು ಚುನಾವಣಾ ಏಜೆಂಟರಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಮತದಾನ ಪೂರ್ಣಗೊಂಡ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಪೋಲಿಂಗ್ ಏಜೆಂಟರ ಸಮಕ್ಷಮದಲ್ಲಿ ವಿದ್ಯುನ್ಮಾನ ಮತಯಂತ್ರದ ಮೇಲಿರುವ "ಕ್ಲೋಸ್" ಗುಂಡಿಯನ್ನು ಒತ್ತುತ್ತಾರೆ. ಇದಾದ ನಂತರ, ವಿದ್ಯುನ್ಮಾನ ಮತಯಂತ್ರದಲ್ಲಿ ಯಾವುದೇ ಮತಗಳನ್ನು ಚಲಾಯಿಸಲು ಸಾಧ್ಯವಾಗುವುದಿಲ್ಲ.
- ಇದಾದ ನಂತರ, ಇಡೀ ವಿದ್ಯುನ್ಮಾನ ಮತಯಂತ್ರವನ್ನು ಮೊಹರು ಮಾಡಲಾಗುತ್ತದೆ. ಈ ಮೊಹರುಗಳ ಮೇಲೆ ಅಭ್ಯರ್ಥಿಗಳು ಮತ್ತು ಅವರ ಏಜೆಂಟರಿಗೆ ತಮ್ಮ ಸಹಿ ಹಾಕಲು ಅವಕಾಶ ಮಾಡಿಕೊಡಲಾಗುತ್ತದೆ ಮತ್ತು ಅದನ್ನು ಅವರು ಮತಎಣಿಕೆ ಪ್ರಾರಂಭವಾಗುವ ಮುಂಚೆ ಮೊಹರು ಸುಸ್ಥಿತಿಯಲ್ಲಿದೆ ಎಂಬುದನ್ನು ಪರೀಕ್ಷಿಸಬಹುದು. ವಿದ್ಯುನ್ಮಾನ ಮತಯಂತ್ರಗಳನ್ನು ಮತಗಟ್ಟೆಗಳಿಂದ ಮತಎಣಿಕೆ ಕೇಂದ್ರದಲ್ಲಿನ ದಾಸ್ತಾನು ಕೋಣೆಗಳಿಗೆ ಒಯ್ಯುವ ವಾಹನಗಳನ್ನು ಅಭ್ಯರ್ಥಿಗಳು/ಪ್ರತಿನಿಧಿಗಳು ಹಿಂಬಾಲಿಸಿಕೊಂಡು ಹೋಗಬಹುದು.
- ಇದರೊಂದಿಗೆ, ಎಣಿಕೆಗಾಗಿ ವಿದ್ಯುನ್ಮಾನ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರ ಕೋಣೆಗಳಿಗೂ ಸಹ ಮೊಹರು (ಸೀಲ್) ಮಾಡಲಾಗುತ್ತದೆ ಮತ್ತು ದಿನದ 24 ಗಂಟೆಗಳ ಕಾಲವೂ ಅವುಗಳ ಮೇಲೆ ನಿಗಾ ಇಡಲಾಗಿರುತ್ತದೆ. ಭದ್ರಕೋಣೆಗಳ ಬಾಗಿಲುಗಳ ಮೇಲೆ ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ ಅವರ ಸ್ವಂತ ಮೊಹರುಗಳನ್ನು ಹಾಕಲು ಅವಕಾಶ ಮಾಡಿಕೊಡಲಾಗುತ್ತದೆ. ಅವರಿಗೂ ಸಹ ಭದ್ರಕೋಣೆಯ ಮೇಲೆ ದಿನದ 24 ಗಂಟೆಗಳ ಕಾಲ ಪಹರೆ ನಡೆಸಲು ಅವಕಾಶ ಮಾಡಿಕೊಡಲಾಗುತ್ತದೆ. ಭದ್ರ ಕೋಣೆಗಳ ಸುತ್ತಮುತ್ತಲೂ ಬಹು ಪದರಗಳಲ್ಲಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿರುತ್ತದೆ.
- ಎಲ್ಲಾ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಪ್ರತಿನಿಧಿಗಳಿಗೆ ಮೊದಲ ಹಂತದ ಪರಿಶೀಲನೆ, ಮತದಾನ ಪ್ರಾರಂಭವಾಗುವ ಮುಂಚೆ ವಿದ್ಯುನ್ಮಾನ ಮತಯಂತ್ರಗಳ ಸಿದ್ಧತೆ, ಅಣಕು ಮತದಾನ, ಇತ್ಯಾದಿಗಳಲ್ಲಿ ಭಾಗವಹಿಸಲು ಅವಕಾಶವನ್ನು ನೀಡಲಾಗುತ್ತದೆ.

**ಮತದಾರನು ಪರಿಶೀಲಿಸಬಹುದಾದ ಕಾಗದ ಲೆಕ್ಕಪರಿಶೋಧನಾ ಪರೀಕ್ಷೆ (ವಿವಿಪಿಎಟಿ):**

ಭಾರತ ಚುನಾವಣಾ ಆಯೋಗವು 2010ರಲ್ಲಿ, ರಾಜಕೀಯ ಪಕ್ಷಗಳೊಂದಿಗೆ ನಡೆಸಿದ ಸಮಾಲೋಚನೆಯ ಆಧಾರದ ಮೇಲೆ, ಪಾರದರ್ಶಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ, ಮತದಾರನು ಪರಿಶೀಲಿಸಬಹುದಾದ ಕಾಗದ ಲೆಕ್ಕಪರಿಶೋಧನಾ ಪರೀಕ್ಷೆಯ(ವಿವಿಪಿಎಟಿ) ಬಳಕೆಯನ್ನು ಪರಿಶೋಧಿಸುವ ಕುರಿತು ಪರ್ಯಾಲೋಚಿಸಿತು. ಮತದಾರನು ಪರಿಶೀಲಿಸಬಹುದಾದ ಕಾಗದ ಲೆಕ್ಕಪರಿಶೋಧನಾ ಪರೀಕ್ಷೆ (ವಿವಿಪಿಎಟಿ)ಯ ಪ್ರಸ್ತಾವನೆಯು, ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ, ಕಾಗದ ಚೀಟಿಯನ್ನು ವಿದ್ಯುನ್ಮಾನ ಮತಯಂತ್ರದ ಮೇಲೆ ತೋರಿಸಲಾಗುವ ಫಲಿತಾಂಶವನ್ನು ಪರಿಶೀಲಿಸುವ ಸಲುವಾಗಿ ಎಣಿಕೆ ಮಾಡಲು ಸಾಧ್ಯವಾಗುವಂತೆ, ಕಂಟ್ರೋಲ್‌ಯೂನಿಟ್‌ನಲ್ಲಿ ಮತವನ್ನು ದಾಖಲಿಸುವುದರೊಂದಿಗೆ, ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯನ್ನು ಹೊಂದಿರುವ ಒಂದು ಕಾಗದಚೀಟಿಯನ್ನು ಸೃಜಿಸುವುದು ಎಂಬ ಅರ್ಥವನ್ನು ಸೂಚಿಸುತ್ತದೆ. ವಿವಿಪಿಎಟಿ ವ್ಯವಸ್ಥೆಯ ಅಡಿಯಲ್ಲಿ ಬ್ಯಾಲೆಟ್‌ಯೂನಿಟ್‌ಗೆ ಒಂದು ಮುದ್ರಣಯಂತ್ರವನ್ನು ಜೋಡಿಸಿ, ಅದನ್ನು ಮತದಾನ ಮಾಡುವ ಅಂಕಣದಲ್ಲಿ ಇರಿಸಲಾಗಿರುತ್ತದೆ. ಕಾಗದಚೀಟಿಯು ಪಾರದರ್ಶಕ ಕಿಂಡಿಯ ಮೂಲಕ 07 ಸೆಕೆಂಡುಗಳ ಕಾಲ ವಿವಿಪಿಎಟಿಯ ಮೇಲೆ ಕಾಣುತ್ತಿರುತ್ತದೆ.

ಬಿ.ಇ.ಎಲ್./ಇ.ಸಿ.ಐ.ಎಲ್.ಸಂಸ್ಥೆಯು ಸಿದ್ಧಪಡಿಸಿದ ವಿ.ವಿ.ಪಿ.ಎ.ಟಿ. ವಿನ್ಯಾಸವನ್ನು 2013ರಲ್ಲಿ ಭಾರತದ ಚುನಾವಣಾ ಆಯೋಗವು ಅನುಮೋದಿಸಿತು ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಈ ವಿಷಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದ ವ್ಯಕ್ತಿಗಳಿಗೆ ತೋರಿಸಲಾಯಿತು. ಈ ಕುರಿತ ನಿಯಮಗಳನ್ನು ತಿದ್ದುಪಡಿ ಮಾಡಲಾಯಿತು. ಭಾರತದ ಚುನಾವಣಾ ಆಯೋಗವು, 2013ರಲ್ಲಿ ನಾಗಾಲ್ಯಾಂಡ್‌ನಲ್ಲಿ ನಡೆದ ಉಪ–ಚುನಾವಣೆಯಲ್ಲಿ ವಿ.ವಿ.ಪಿ.ಎ.ಟಿ.ಯನ್ನು ಬಳಸಿತು ಮತ್ತು ಅದು ಅತ್ಯಂತ






Downloaded From:www.kpscvaani.com

ಯಶಸ್ವಿಯೂ ಆಯಿತು. ಸರ್ವೋಚ್ಚ ನ್ಯಾಯಾಲಯವು ಹಂತಹಂತವಾಗಿ ವಿ.ವಿ.ಪಿ.ಎ.ಟಿ.ಯನ್ನು ಜಾರಿಗೊಳಿಸಲು ಆದೇಶ ನೀಡಿತು ಮತ್ತು ಇದರ ಖರೀದಿಗೆ ಸಂಬಂಧಿಸಿದಂತೆ ಹಣವನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ತಿಳಿಸಿತು.

ಭಾರತ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರಗಳು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲದವುಗಳಾಗಿವೆ ಎಂದು ಭಾರತದ ಚುನಾವಣಾ ಆಯೋಗವು ಎಲ್ಲಾ ನಾಗರಿಕರಿಗೆ ಭರವಸೆ ನೀಡುತ್ತದೆ. ಮತ್ತು ವಿದ್ಯುನ್ಮಾನ ಮತಯಂತ್ರವನ್ನು ಬಳಸಿ ನಡೆಸುವ ಚುನಾವಣಾ ಪ್ರಕ್ರಿಯೆಗಳ ಅಖಂಡತೆಯ ಬಗ್ಗೆ ಸಂಪೂರ್ಣ ತೃಪ್ತಿಯ ಭಾವನೆಯನ್ನು ಹೊಂದಿದೆ. ಭಾರತದ ಚುನಾವಣಾ ಆಯೋಗವು ವಿ.ವಿ.ಪಿ.ಎ.ಟಿ.ಯನ್ನು ಕಾರ್ಯಾಚರಣೆಗೆ ತರುವುದರ ಮೂಲಕ ಭಾರತದ ಚುನಾವಣಾ ಆಯೋಗವು ಚುನಾವಣಾ ಪ್ರಕ್ರಿಯೆಗಳಲ್ಲಿ ನಾಗರಿಕರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಲಿದೆ.

ಆಯೋಗವು, ಚುನಾವಣೆಗಳಲ್ಲಿ ಬಳಸಲಾಗುವ ವಿದ್ಯುನ್ಮಾನ ಮತಯಂತ್ರಗಳ ದೋಷಮುಕ್ತ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸುರಕ್ಷತೆಯುಳ್ಳ ವ್ಯಾಪಕ ತಾಂತ್ರಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತದೆ. ಆದ್ದರಿಂದ, ಆಯೋಗವು, ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳ್ಳಿಸುವುದನ್ನು ಪ್ರತಿಬಂಧಿಸುವಂಥ ಕಾರ್ಯನಿರ್ವಹಣೆಯ ವ್ಯವಸ್ಥೆ ಇರುವ ಬಗ್ಗೆ ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡಿದೆ. ಇಂಥ ಆಪಾದನೆಗಳು ಮತ್ತು ಅನುಮಾನಗಳನ್ನು ಇದೇ ಮೊದಲ ಬಾರಿಗೇನೂ ಎತ್ತಲಾಗಿಲ್ಲ ಎಂದು ಹೇಳಬಹುದು. ಈ ಹಿಂದಿನ ಕೆಲವು ಸಂದರ್ಭಗಳಲ್ಲೂ ಸಹ, ಆಯೋಗವು, ಮತಯಂತ್ರಗಳನ್ನು ಅಕ್ರಮವಾಗಿ ಬೇಕಾದಂತೆ ವ್ಯತ್ಯಸ್ತಗೊಳಿಸಬಹುದು ಎಂದು ಆಪಾದನೆ ಮಾಡಿದವರಿಗೆ ಅದನ್ನು ಸಾಬೀತು ಪಡಿಸಲು ಒಂದಕ್ಕಿಂತ ಹೆಚ್ಚು ಅವಕಾಶಗಳನ್ನು ನೀಡಿದಾಗ್ಯೂ, ಭಾರತ ಚುನಾವಣಾ ಆಯೋಗವು, ಹೊಂದಿರುವ ಮತ್ತು ರಾಷ್ಟ್ರದ ಚುನಾವಣಾ ಪ್ರಕ್ರಿಯೆಗಳಲ್ಲಿ ಬಳಸುವ ವಿದ್ಯುನ್ಮಾನ ಮತಯಂತ್ರಗಳನ್ನು ದುರುಪಯೋಗಪಡಿಸಿಕೊಳ್ಳಲು ಅಥವಾ

**ಆಯೋಗವು, ಚುನಾವಣೆಗಳಲ್ಲಿ ಬಳಸಲಾಗುವ ವಿದ್ಯುನ್ಮಾನ ಮತಯಂತ್ರಗಳ ದೋಷಮುಕ್ತ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸುರಕ್ಷತೆಯುಳ್ಳ ವ್ಯಾಪಕ ತಾಂತ್ರಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತದೆ. ಆದ್ದರಿಂದ, ಆಯೋಗವು, ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳ್ಳಿಸುವುದನ್ನುಪ್ರತಿಬಂಧಿಸುವಂಥ ಕಾರ್ಯನಿರ್ವಹಣೆಯ ವ್ಯವಸ್ಥೆಇರುವ ಬಗ್ಗೆ ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡಿದೆ.**

ಅಕ್ರಮವಾಗಿ ಬೇಕಾದಂತೆ ವ್ಯತ್ಯಸ್ತಗೊಳಿಸಲು ಸಾಧ್ಯ ಎಂಬುದನ್ನು ತೋರಿಸಿಕೊಡಲು ಯಾರೊಬ್ಬರಿಗೂ ಸಾಧ್ಯವಾಗಿಲ್ಲ. ಇಂಥ ಆಪಾದನೆಗಳಲ್ಲಿ ಯಾವುದೇ ರೀತಿಯ ಹುರುಳಿರುವುದು ಆಯೋಗಕ್ಕೆ ಕಂಡುಬಂದಿಲ್ಲ ಮತ್ತು ಅದು ಕೆಲವು ರಾಜಕೀಯ ಪಕ್ಷಗಳು ಎತ್ತಿದ ಅಂಥ ಎಲ್ಲಾ ಆಪಾದನೆಗಳು ಮತ್ತು ಅನುಮಾನಗಳನ್ನು ನಿರಾಕರಿಸಿದೆ.

ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸಗೊಳಿಸಲು ಸಾಧ್ಯವಿಲ್ಲದವುಗಳಾಗಿವೆ ಎಂದು ಭಾರತದ ಚುನಾವಣಾ ಆಯೋಗವು ಎಲ್ಲಾ ನಾಗರಿಕರಿಗೆ ಭರವಸೆ ನೀಡುತ್ತದೆ. ಮತ್ತು ವಿದ್ಯುನ್ಮಾನ ಮತಯಂತ್ರವನ್ನು ಬಳಸಿ ನಡೆಸುವ ಚುನಾವಣಾ ಪ್ರಕ್ರಿಯೆಗಳ ಅಖಂಡತೆಯ ಬಗ್ಗೆ ಸಂಪೂರ್ಣ ತೃಪ್ತಿಯ ಭಾವನೆಯನ್ನು ಹೊಂದಿದೆ. ಭಾರತದ ಚುನಾವಣಾ ಆಯೋಗವು ಹಂತಹಂತವಾಗಿ ವಿ.ವಿ.ಪಿ.ಎ.ಟಿ.ಯನ್ನು ಕಾರ್ಯಾಚರಣೆಗೆ ತರುವುದರ ಮೂಲಕ ಭಾರತದ ಚುನಾವಣಾ ಆಯೋಗದ ಚುನಾವಣಾ ಪ್ರಕ್ರಿಯೆಗಳಲ್ಲಿ ನಾಗರಿಕರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಲಿದೆ.

ಆದಾಗ್ಯೂ, ವಾಸ್ತವಾಂಶಗಳಿಂದ ಕೂಡಿದ ಯಾವುದೇ ನಿರ್ದಿಷ್ಟ ಆಪಾದನೆಯನ್ನು ಭಾರತದ ಚುನಾವಣಾ ಆಯೋಗಕ್ಕೆ ಸಲ್ಲಿಸಿದರೆ, ಅದನ್ನು ಆಡಳಿತಾತ್ಮಕ ದೃಷ್ಟಿಕೋನದಿಂದ ಗಂಭೀರವಾಗಿ ಪರಿಶೀಲಿಸಲಾಗುವುದು.

ಚುನಾವಣಾ ಆಯೋಗವು, ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲವೆಂಬ ಬಗ್ಗೆ ಯಾವಾಗಲೂ ದೃಢ ವಿಶ್ವಾಸ ಹೊಂದಿದೆ ಮತ್ತು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡಿದೆ ಎಂದು ಒತ್ತಿ ಹೇಳಲು ಬಯಸುತ್ತದೆ. 2004, 2009 ಹಾಗೂ 2014ರಲ್ಲಿ ರಾಷ್ಟ್ರದಾದ್ಯಂತ ನಡೆದ ಸಾರ್ವತ್ರಿಕ ಚುನಾವಣೆಗಳೂ ಸೇರಿದಂತೆ, ಕಳೆದ ಹಲವು ವರ್ಷಗಳಲ್ಲಿ ನಡೆಸಿದ ಚುನಾವಣೆಗಳ ಮುಖಾಂತರ ಮತಯಂತ್ರದ ಮೇಲಿನ ತನ್ನ ನಂಬಿಕೆಯನ್ನು ಯಾವತ್ತೂ ಕಳೆದುಕೊಂಡಿಲ್ಲ. ಚುನಾವಣಾ ಆಯೋಗವು, ಬಳಸಿದ ವಿದ್ಯುನ್ಮಾನ ಮತಯಂತ್ರಗಳನ್ನು ಅಕ್ರಮವಾಗಿ ವ್ಯತ್ಯಸ್ತಗೊಳಿಸಬಹುದು ಅಥವಾ ದುರುಪಯೋಗ ಪಡಿಸಿಕೊಳ್ಳಬಹುದು ಎಂದು ವಾಸ್ತವವಾಗಿ ತೋರಿಸಿಕೊಡಲು ಇಲ್ಲಿವರೆಗೆ ಯಾರಿಗೂ ಸಾಧ್ಯವಾಗಿಲ್ಲ. ಯಾವುದನ್ನು ತೋರಿಸಿಕೊಡಲಾಗಿದೆಯೋ ಅಥವಾ ತೋರಿಸಿಕೊಡಲಾಗಿದೆ ಎಂದು ಕ್ಲೇಮು ಮಾಡಲಾಗಿದೆಯೋ, ಅದು "ಭಾರತದ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರಗಳಂತೆ ಕಾಣುವ" ಖಾಸಗಿಯಾಗಿ ಜೋಡಿಸಿದ ಯಂತ್ರಗಳ ಕುರಿತಾದುದೇ ಹೊರತು ವಾಸ್ತವವಾಗಿ ಭಾರತದ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರಗಳ ಕುರಿತದ್ದು ಅಲ್ಲ. ಆದಾಗ್ಯೂ, ಭಾರತದ ಚುನಾವಣಾ ಆಯೋಗವು, ತನ್ನ ಕಾರ್ಯಾಚರಣೆಗೆ ಸಂಬಂಧಿಸಿದ ಯಾವುದೇ ಅಂಶದ ಬಗ್ಗೆ ಒಂದು ಸಣ್ಣ ಸಂದೇಹದ ನೆರಳಿಗೂ ಕೂಡಾ ಅವಕಾಶ ನೀಡದಿರಲು ಮತ್ತು ಎಲ್ಲಿಯಾದರೂ ಯಾವುದೇ ರೀತಿಯ ಶಂಕೆ ಉಳಿದಿದ್ದಲ್ಲಿ ಅದನ್ನು ನಿವಾರಿಸುವ ಸಲುವಾಗಿ, ತನ್ನ ಜವಾಬ್ದಾರಿಯನ್ನು ನಿರ್ವಹಿಸಲು, 2009ರಲ್ಲಿ ಭಾರತದ ಚುನಾವಣಾ ಆಯೋಗದ ಕೇಂದ್ರ ಕಚೇರಿಯಲ್ಲಿ ಆಪಾದನೆಯನ್ನು ಸಾಬೀತು ಪಡಿಸುವಂತೆ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಇಂದು, ಆಯೋಗವು, ವಿದ್ಯುನ್ಮಾನ ಮತಯಂತ್ರಗಳು ದೋಷಾತೀತವೆಂದು ಮತ್ತೊಮ್ಮೆ ಸಂಪೂರ್ಣವಾಗಿ ತನ್ನ ನಂಬಿಕೆಯನ್ನು ಪುನರ್ ದೃಢೀಕರಿಸುತ್ತದೆ. ಎಂದಿನಂತೆ, ಇವು ಅಕ್ರಮವಾಗಿ ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲದಂಥವುಗಳಾಗಿದ್ದು ಸಂಪೂರ್ಣವಾಗಿ ಸುರಕ್ಷಿತವಾಗಿವೆ. ■



Downloaded From:www.kpscvaani.com




## ಅಮೃತ ಮಹೋತ್ಸವ ಸಂಭ್ರಮದ ಹೊಸ್ತಿಲಲ್ಲಿ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



ಇಲಾಖೆಯ ಅಂದಿನ ಪಾರಂಪರಿಕ ಕಟ್ಟಡ

ಡಿ. ಪಿ. ಮುರಳೀಧರ್

ದೀಪದ ಸುತ್ತಲೂ ಬೆಳಕು. ಆದರೆ, ದೀಪದ ಕೆಳಗೆ ಕತ್ತಲು ಎಂಬ ನಾಣ್ಣುಡಿ ಇದೆ. ಅಂತೆಯೇ, ಸರ್ಕಾರದ ಎಲ್ಲಾ ಇಲಾಖೆಗಳ ಯೋಜನೆ ಮತ್ತು ಸಾಧನೆಗಳನ್ನು ಬಿಂಬಿಸುವ ಹಾಗೂ ಕಾರ್ಯ ಕಲಾಪ ಮತ್ತು ಕಾರ್ಯ ಚಟುವಟಿಕೆಗಳಿಗೆ ವ್ಯಾಪಕ ಪ್ರಚಾರ ದೊರಕಿಸಿಕೊಡುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತನ್ನ ಯಶೋಗಾಥೆಯ ಬಗ್ಗೆ ಎಂದೂ ಎಲ್ಲೂ ಹೇಳಿಕೊಂಡಿಲ್ಲ. ಸರ್ಕಾರದ ಯಶಸ್ಸೇ ತನ್ನ ಯಶಸ್ಸು ಎಂದು ಭಾವಿಸಿ ಮೌನವಾಗಿ ಸಂಭ್ರಮಿಸುತ್ತದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಸ್ತಿತ್ವದ ಬಗ್ಗೆ ಇಂದಿಗೂ ಬಹುತೇಕರಿಗೆ ಅರಿವು ಇಲ್ಲ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಹತ್ವದ ಬಗ್ಗೆ ತಿಳಿದಿರುವವರ ಸಂಖ್ಯೆಯೂ ಅತೀ ಕಡಿಮೆ.

**ವಾರ್ತೆಗೂ ಒಂದು ಇಲಾಖೆ ಬೇಕೇ ?**

ಹೌದು ! ವಾರ್ತೆಗೂ ಒಂದು ಇಲಾಖೆ ಬೇಕೇ ? ಎಂಬುದು ಜನಸಾಮಾನ್ಯರು ಕೇಳಬಹುದಾದ ಸಹಜ ಪ್ರಶ್ನೆ. ಈ ಪ್ರಶ್ನೆಗೆ ಸರಳ ಉತ್ತರ ಇಲ್ಲಿದೆ ನೋಡಿ.

ಮೊದಲು ವಾರ್ತಾ ಇಲಾಖೆಯ ಇತಿಹಾಸವನ್ನು ಒಮ್ಮೆ ಅವಲೋಕಿಸೋಣ. ಒಂದು ಲೆಕ್ಕದಲ್ಲಿ ವಾರ್ತಾ ಇಲಾಖೆ ಎಂಬುದು ಸ್ವಾತಂತ್ರ್ಯ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿದ್ದ ಇಲಾಖೆ !

ರಾಜ ಮಹಾರಾಜರ ಕಾಲದಲ್ಲಿ ಭೂ ಕಂದಾಯ ಅಥವಾ ರಾಜಸ್ವ ಪಾವತಿಸುವಂತೆ ಡಂಗುರ ಬಾರಿಸಿ ಜನರನ್ನು ಸೇರಿಸಿ ಹಳ್ಳಿಹಳ್ಳಿಗೂ ಸಂದೇಶವನ್ನು ಸಾರುತ್ತಿದ್ದರು. ಸಾಂಕ್ರಾಮಿಕ ರೋಗ ವ್ಯಾಪಿಸುತ್ತಿದ್ದ ಸಂದರ್ಭದಲ್ಲಿಯೂ ರೋಗ ನಿಯಂತ್ರಣ ಹಾಗೂ ಚಿಕಿತ್ಸೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಡಂಗೂರದ ಮೂಲಕ ಎಚ್ಚರಿಸುತ್ತಿದ್ದರು.

ಅಲ್ಲದೆ, ರಾಜ ಕುಟುಂಬದಲ್ಲಿ ಸಂತಾನ ಪ್ರಾಪ್ತಿಯಾದಾಗ ಸಿಹಿ ಸುದ್ದಿಯನ್ನು ಹಂಚಿಕೊಳ್ಳಲು ಹಾಗೂ ಮಹಾರಾಜ ಅಥವಾ ಅವರ ಕುಟುಂಬಸ್ಥರಲ್ಲಿ ಯಾರಾದರೂ ಮೃತರಾದಾಗ ಶೋಕ ಸಂದೇಶವನ್ನು ಸಾರಲು ಡಂಗುರ ಬಾರಿಸುವ ಮೂಲಕ ಜನರನ್ನು ಕಲೆಹಾಕಿ ತಿಳಿಸಲಾಗುತ್ತಿತ್ತು.



Downloaded From:www.kpscvaani.com

ಡಂಗೂರ ಸಾರುವಂತೆ ಸೂಚಿಸಿದವ ಮೇಲ್ಮಟ್ಟದ ವಾರ್ತಾಧಿಕಾರಿ ಹಾಗೂ ಡಂಗೂರ ಸಾರುವವ ಕೆಳಹಂತದ ವಾರ್ತಾಧಿಕಾರಿ ಎಂದು ನಾವು ಗುರುತಿಸಬಹುದು.

ಅಂತೆಯೇ, ಯಾವುದೇ ಆಡಳಿತ ವ್ಯವಸ್ಥೆಯಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ನಿಲುವು ಮತ್ತು ನಿರ್ಧಾರಗಳನ್ನು ಕೆಳಸ್ತರದವರೆಗೂ ತಲುಪಿಸಿ, ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಯೋಜನೆಗಳಿಗೆ ಹಾಗೂ ಜಾರಿಗೊಳಿಸಲು ಬಯಸುವ ಕಾರ್ಯಕ್ರಮಗಳಿಗೆ ಸಾರ್ವಜನಿಕರ ಸಹಭಾಗಿತ್ವವನ್ನು ಪಡೆಯುವುದು ಅತ್ಯಾವಶ್ಯಕವಾಗುತ್ತದೆ. ಆಗ ಮಾತ್ರ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಶಸ್ವಿನ ಹಾದಿಯಲ್ಲಿ ಮುನ್ನಡೆಯಲು ಸಾಧ್ಯ.

ಈ ಹಿನ್ನೆಲೆಯಲ್ಲಿಯೇ ಸರ್ಕಾರದ ಅಥವಾ ಆಡಳಿತ ಯಂತ್ರದ ಒಂದು ಭಾಗವಾಗಿ ಮಾಹಿತಿ, ಶಿಕ್ಷಣ ಹಾಗೂ ಸಂವಹನಕ್ಕೆ ಆದ್ಯತೆ ನೀಡಲಾಯಿತು. ಸರ್ಕಾರದ ಈ ಸದಾಶಯದ ಅನುಷ್ಠಾನಕ್ಕೆ ವಾರ್ತಾ ಇಲಾಖೆ ಜನ್ಮ ತಾಳಿತು.

**ಹುಟ್ಟು ಹೇಗೆ ?**

ಬೆಂಗಳೂರಿನ ಅಠಾರಾ ಕಚೇರಿ (ಇಂದಿನ ಕರ್ನಾಟಕ ಉಚ್ಚ ನ್ಯಾಯಾಲಯದ ಕಟ್ಟಡ) ಕಟ್ಟಡದ ಒಂದು ಕೊಠಡಿಯಲ್ಲಿ ಓರ್ವ ವಾರ್ತಾಧಿಕಾರಿಯ ನೇಮಕವಾಗುವುದರೊಂದಿಗೆ "ಏಕೋಪಾಧ್ಯಾಯ ಶಾಲೆ" ಯ ಮಾದರಿಯಲ್ಲಿ 1949 ರಲ್ಲಿ ಅಂದಿನ ಮೈಸೂರು ರಾಜ್ಯದಲ್ಲಿ ವಾರ್ತಾ ಇಲಾಖೆಯ ಕಾರ್ಯ ಚಟುವಟಿಕೆಗಳು ಪ್ರಾರಂಭವಾದವು. ಆ ಅಧಿಕಾರಿ ಗೃಹ ಸಚಿವಾಲಯದ ನೇರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ನಂತರ, ವಾರ್ತಾಧಿಕಾರಿಯ ಕಾರ್ಯ ವ್ಯಾಪ್ತಿ ವಿಸ್ತೃತಗೊಂಡು ಪತ್ರಿಕಾಗೋಷ್ಠಿ ಆಯೋಜನೆ, ಸುದ್ದಿ ಬಿಡುಗಡೆ ಹಾಗೂ ಜಾಹೀರಾತು ಬಿಡುಗಡೆಯ ಚಟುವಟಿಕೆಗಳು ಪ್ರಾರಂಭವಾದಾಗ, ಕಾರ್ಯಚಟುವಟಿಕೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಓರ್ವ ವಾರ್ತಾಧಿಕಾರಿಯ ಜೊತೆಗೆ ಕಿರಿಯ ಶ್ರೇಣಿಯ ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸೇರ್ಪಡೆಯಾಯಿತು. ಅಧಿಕಾರಿ ಮತ್ತು ಸಿಬ್ಬಂದಿ ಸಂಖ್ಯೆ ಹೆಚ್ಚಾದಾಗ ಸ್ಥಳಾಭಾವದ ಕೊರತೆ ಎದುರಾಗಿ, ವಾರ್ತಾ ಇಲಾಖೆಯ ಕಾರ್ಯ ಚಟುವಟಿಕೆಗಳು ಬೆಂಗಳೂರಿನ ಅರಮನೆ ರಸ್ತೆಯ ಬಾಲಾಬ್ರೂಯಿ ಅತಿಥಿ ಗೃಹಕ್ಕೆ ಸ್ಥಳಾಂತರಗೊಂಡಿತು. ಇಲಾಖೆಯ ಸ್ವರೂಪ ಪಡೆಯುತ್ತಿದ್ದ ವಾರ್ತಾ ಇಲಾಖೆಗೆ ಆ ಸಂದರ್ಭದಲ್ಲಿ ಸರ್ಕಾರದ ಮಾಹಿತಿ ವಿತರಣಾ ಕಾರ್ಯಚಟುವಟಿಕೆಗಳ ಜೊತೆಗೆ ಪ್ರವಾಸೋದ್ಯಮ ಉತ್ತೇಜನಾ ಚಟುವಟಿಕೆಗಳಿಗೂ ಇಂಬು ನೀಡುವಂತೆ ಸೂಚಿಸಲಾಯಿತು.

ಗೃಹ ಸಚಿವಾಲಯದಿಂದ ಕಳಚಿ ಹೊರಬಂದ ವಾರ್ತಾ ಇಲಾಖೆಯು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಾಗಿ ರೂಪುಗೊಂಡು ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಸಚಿವಾಲಯದ ಸೂರಿನಡಿಯಲ್ಲಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಕೆಲಕಾಲದ ನಂತರ, ಅಂದರೆ 1974 ರಲ್ಲಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ವಿಭಜನೆಗೊಂಡು ವಾರ್ತಾ ಮತ್ತು ಪ್ರಚಾರ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಎಂದು ಎರಡೂ ಇಲಾಖೆಗಳು ಪ್ರತ್ಯೇಕಗೊಂಡವು. ಅಂದಿನಿಂದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕಾರ್ಯ ಸ್ಥಾನ ಬೆಂಗಳೂರಿನ ಇನ್‌ಫೆಂಟ್ರಿ ರಸ್ತೆ (ಇಂದಿನ ಭಗವಾನ್ ಮಹಾವೀರ ರಸ್ತೆ)ಯ ಸಂಖ್ಯೆ: 17 ರಲ್ಲಿ ಕಾರ್ಮಿಕ ಇಲಾಖೆಯ ವಶದಲ್ಲಿದ್ದ ಪಾರಂಪಾರಿಕ ಕಟ್ಟಡಕ್ಕೆ ಸ್ಥಳಾಂತರಗೊಂಡಿತು.

**ಕಟ್ಟಡದ ಇತಿಹಾಸ !**

ಈ ಕಟ್ಟಡವು ವಾರ್ತಾ ಮತ್ತು ಪ್ರಚಾರ ಇಲಾಖೆಯ ತೆಕ್ಕೆಗೆ ಹೇಗೆ ಬಂತು ? ಎಂಬುದು ಒಂದು ರೀತಿಯಲ್ಲಿ ರೋಚಕ ಕಥೆ. ಈ ಕಟ್ಟಡದ ಮೂಲ ಒಡೆತನ ಹಾರ್ಸ್ಲಿ ಬ್ರದರ್ಸ್ ಎಂಬ ಹೆಸರಿನ ಅಣ್ಣ–ತಮ್ಮಂದಿರದ್ದು. ಈ ಅಣ್ಣ–ತಮ್ಮಂದಿರ ಹವ್ಯಾಸ ಕುದುರೆ ಜೂಜು. ಅದಕ್ಕಾಗಿ ಈ ಸಹೋದರರು ತಾವು ವಾಸಿಸುತ್ತಿದ್ದ ತಮ್ಮ ಪ್ರಧಾನ ಕಟ್ಟಡದ ಸುತ್ತಲೂ ಕುದುರೆ ಲಾಯವನ್ನು ನಿರ್ಮಿಸಿದ್ದರು.

ಒಮ್ಮೆ ಹಣಕಾಸಿನ ತೀವ್ರ ಸಂಕಷ್ಟ ಎದುರಾದಾಗ ಈ ಸಹೋದರರು ಗೋಪಾಲ್ ರಾವ್ ಎಂಬುವವರಲ್ಲಿ ತಮ್ಮ ಒಡೆತನದಲ್ಲಿದ್ದ ಕಟ್ಟಡವನ್ನು ಒತ್ತೆ ಇಟ್ಟು ಹಣ ಪಡೆಯುತ್ತಾರೆ. ಸಕಾಲದಲ್ಲಿ ಅಸಲು ಮತ್ತು ಬಡ್ಡಿ ತೀರಿಸಲು ಸಾಧ್ಯವಾಗದಾಗ ಈ ಕಟ್ಟಡವನ್ನು ಗೋಪಾಲ್ ರಾವ್ ಅವರು ಹಾರ್ಸ್ಲಿ ಬ್ರದರ್ಸ್ ಅವರಿಂದ ತಮ್ಮ ಸ್ವಾಧೀನಕ್ಕೆ ಪಡೆಯುತ್ತಾರೆ.

ಗೋಪಾಲ್ ರಾವ್ ಅವರು 'ಏಕ ವ್ಯಕ್ತಿ' ಸಂಸ್ಥೆಯ ಮಾದರಿಯಲ್ಲಿ ಹಣಕಾಸು ವ್ಯವಹಾರವನ್ನು ನಡೆಸುತ್ತಿದ್ದವರು. ಗ್ರಾಹಕರ ಮನೆಗೇ ಬಂದು ಹಣವನ್ನು ಸ್ವೀಕರಿಸಿ, ಠೇವಣಿ ಮೊತ್ತಕ್ಕೆ ಮಾರುಕಟ್ಟೆಗಿಂತಲೂ ಅಧಿಕ ಮೊತ್ತದ ಬಡ್ಡಿಯನ್ನು ಗ್ರಾಹಕರ ಮನೆಗೇ ಬಂದು ಪಾವತಿಸುತ್ತಿದ್ದರು. ಅಂತೆಯೇ, ಸಾಲ ಕೋರಿದವರ ಮನೆಗೇ ತೆರಳಿ ಸಾಲ ನೀಡಿ, ಕಾಲಕಾಲಕ್ಕೆ ಮತ್ತೆ ಅದೇ ಗ್ರಾಹಕರ ಮನೆಗೆ ಭೇಟಿ ಕೊಟ್ಟು ಪಡೆದ ಸಾಲಕ್ಕೆ ಅನುಗುಣವಾಗಿ ಬಡ್ಡಿಯನ್ನೂ ವಸೂಲು ಮಾಡುತ್ತಿದ್ದರು.

ಗ್ರಾಹಕರಿಂದ ಎರಡು ಲಕ್ಷ ರೂಪಾಯಿಗಳ ಠೇವಣಿ ಸ್ವೀಕರಿಸಿದರೆ "2 ಲ" ಎಂದೂ ಹಾಗೂ ಗ್ರಾಹಕರಿಗೆ ಹತ್ತು ಸಾವಿರ ರೂಪಾಯಿ ಸಾಲ ಕೊಟ್ಟರೆ "10 ಸಾ" ಎಂದೂ ತಮ್ಮ ದಿನಚರಿಯ ಪುಸ್ತಕದಲ್ಲಿ ನಮೂದು ಮಾಡಿಕೊಳ್ಳುತ್ತಿದ್ದ ಗೋಪಾಲ್ ರಾವ್ ಅವರು ಹಣ ಸ್ವೀಕರಿಸಿದಕ್ಕೆ ಅಥವಾ ಹಣ ನೀಡಿದ್ದಕ್ಕೆ ಯಾರಿಗೂ ಯಾವುದೇ ಸ್ವೀಕೃತಿ ಅಥವಾ ರಸೀತಿ ನೀಡುತ್ತಿರಲಿಲ್ಲ. ಆದರೆ, ಸಾಲ ನೀಡುವಾಗ ಮಾತ್ರ ಚಿನ್ನ, ಬೆಳ್ಳಿ, ಅಥವಾ ಮನೆ, ನಿವೇಶನ, ಜಮೀನಿಗೆ ಸಂಬಂಧಿಸಿದ ಆಸ್ತಿಯ ಕಾಗದ ಪತ್ರಗಳನ್ನು ಹಾಗೂ ದಾಸ್ತಾವೇಜುಗಳನ್ನು ಗೋಪಾಲ್ ರಾವ್ ಅವರಲ್ಲಿ ಒತ್ತೆ ಇಡಬೇಕಾಗಿತ್ತು.

ಗೋಪಾಲ್ ರಾವ್ ಅವರ ಹಣಕಾಸಿನ ಚಟುವಟಿಕೆಗಳು ಕೆಲಕಾಲ ಯಶಸ್ವಿಯಾಗಿ ನಡೆಯಿತಾದರೂ, ಸಾಲ ಪಡೆದವರು ಸಕಾಲಕ್ಕೆ ಸಾಲವನ್ನು ಹಿಂದಿರುಗಿಸದೇ ಹಣಕಾಸು ವ್ಯವಹಾರದಲ್ಲಿ ಏರುಪೇರು ಉಂಟಾಯಿತು. ಗೋಪಾಲ್ ರಾವ್ ಅವರು ಆರ್ಥಿಕವಾಗಿ ದಿವಾಳಿಯಾದರು. ಆಗ ಅವರಲ್ಲಿ ಒತ್ತೆಯಿಟ್ಟಿದ್ದ ಎಲ್ಲವೂ ಸರ್ಕಾರದ ವಶವಾದವು. ಒಂದು ಶತಮಾನಕ್ಕೂ ಹೆಚ್ಚಿನ ಹಳೆಯದಾಗಿದ್ದ ಈ ಪಾರಂಪಾರಿಕ ಕಟ್ಟಡವೂ ಸರ್ಕಾರದ ಸೊತ್ತಾಯಿತು.

**ವಾರ್ತಾ ಸೌಧ – ಮಾಧ್ಯಮ ಸೌಧ**

ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿನ "ಮತ್ತು ಪ್ರಚಾರ" ಎಂಬುದನ್ನು ಯಾರೋ "ಮತ್ತಿನ ಪ್ರಚಾರ" ಎಂದು ಅಪಹಾಸ್ಯ ಮಾಡಿದ್ದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ 2000 ನೇ ಇಸವಿಯಲ್ಲಿ ಇಲಾಖೆಯ ಹೆಸರನ್ನು ವಾರ್ತಾ ಇಲಾಖೆ ಎಂದು ಪುನರ್ ನಾಮಕರಣ ಮಾಡಿತು.

ಅದೇ ವರ್ಷ ಈ ಪಾರಂಪಾರಿಕ


Downloaded From:www.kpscvaani.com

ಕಟ್ಟಡದ ಪ್ರಧಾನ ಭಾಗದ ಮೇಲ್ಛಾವಣಿಯ ಒಂದು ಭಾಗ ಕುಸಿದಾಗ, ಪಾರಂಪಾರಿಕ ಕಟ್ಟಡವನ್ನು ನೆಲಸಮಗೊಳಿಸಿ, ಅದೇ ನಿವೇಶನದಲ್ಲಿ ಏಳು ಅಂತಸ್ತಿನ ನೂತನ ಕಟ್ಟಡವನ್ನು ಪ್ರತಿಷ್ಠಿತ ಲಾರ್ಸನ್ ಅಂಡ್ ಟ್ಯೂಬ್ರೋ ಸಂಸ್ಥೆಯ ಮೂಲಕ ನಿರ್ಮಿಸಲು ಅಂದಿನ ನಿರ್ದೇಶಕ ಡಾ.ಡಿ.ವಿ.ಗುರುಪ್ರಸಾದ್ ಅವರು ಪ್ರಾಮಾಣಿಕ ಪ್ರಯತ್ನ ಮಾಡಿದರು. ಆದರೆ ಅವರ ಸದಾಶಯ ಕಾರಣಾಂತರದಿಂದ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಳ್ಳಲಿಲ್ಲ.

ನೂತನ ಕಟ್ಟಡದ ನಿರ್ಮಾಣ ಸಂದರ್ಭದಲ್ಲಿ ವಿಧಾನ ಸೌಧದ ಸುತ್ತಮುತ್ತಲಲ್ಲೇ ವಾರ್ತಾ ಇಲಾಖೆ ಇರಬೇಕೆಂದು ನಿರ್ಧರಿಸಿದ ಡಾ.ಡಿ.ವಿ.ಗುರುಪ್ರಸಾದ್ ಅವರು ಕಾಫಿ ಮಂಡಳಿ ಕಟ್ಟಡವೂ ಸೇರಿದಂತೆ ಹಲವು ಕಟ್ಟಡಗಳನ್ನು ಪರಿಶೀಲಿಸಿದ ನಂತರ ಅಂತಿಮವಾಗಿ ಶಿವಾಜಿನಗರ ಬಸ್ ನಿಲ್ದಾಣ ಕಟ್ಟಡದ ಎರಡನೇ ಅಂತಸ್ತಿನ ಕಟ್ಟಡಕ್ಕೆ ವಾರ್ತಾ ಇಲಾಖೆಯ ಕೇಂದ್ರ ಕಚೇರಿಯನ್ನು ಸ್ಥಳಾಂತರಿಸಲು ಕ್ರಮ ವಹಿಸಿದರು. ಇತ್ತ ನೂತನ ಕಟ್ಟಡವು ಮೈದೇಳಿ 2007 ರಲ್ಲಿ ಅಂದಿನ ಆಯುಕ್ತ ಕೆ.ವಿ. ರವೀಂದ್ರನಾಥ ಠ್ಯಾಗೂರ್ ಅವರ ಅಧಿಕಾರಾವಧಿಯಲ್ಲಿ ವಾರ್ತಾ ಸೌಧ ಎಂಬ ನಾಮಕರಣದೊಂದಿಗೆ ಲೋಕಾರ್ಪಣೆಗೊಂಡಿತು.

ಹತ್ತು ವರ್ಷದ ನಂತರ, 2017 ರಲ್ಲಿ ಬೆಂಗಳೂರಿನ ಶ್ರೀಗಂಧದ ಕಾವಲ್‌ನಲ್ಲಿ ವಾರ್ತಾ ಸೌಧದ ಸೋದರ ಕಟ್ಟಡ ಮಾಧ್ಯಮ ಸೌಧವೂ ಮೇಳೈಸಿತು.

**ಪುನರ್ ನಾಮಕರಣ**

ಈ ನಡುವೆ ಅಂದರೆ 2017 ರಲ್ಲಿ ವಾರ್ತಾ ಇಲಾಖೆಯ ಹೆಸರನ್ನು ರಾಷ್ಟ್ರದ ಹಲವು ರಾಜ್ಯಗಳಲ್ಲಿದ್ದಂತೆಯೇ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಎಂದು ರಾಜ್ಯ ಸರ್ಕಾರ ಪುನರ್ ನಾಮಕರಣ ಮಾಡಿತು.

**ಅಧೀನ ಕಚೇರಿಗಳು**

ವಾರ್ತಾ ಮತ್ತು ಪ್ರಚಾರ ಇಲಾಖೆ ಎಂದಿದ್ದ ಸಂದರ್ಭದಲ್ಲಿ ಇಲಾಖೆಯ ಅಧೀನದಲ್ಲಿ 20 ಜಿಲ್ಲಾ ಕಚೇರಿಗಳು, 16 ಉಪ ವಿಭಾಗೀಯ ಕಚೇರಿಗಳು, ನವದೆಹಲಿಯಲ್ಲಿ ಮೈಸೂರು ವಾರ್ತಾ ಕೇಂದ್ರ ಹಾಗೂ ಹುಬ್ಬಳ್ಳಿಯಲ್ಲಿ ರಾಜ್ಯ ಸಮಾಚಾರ ಕೇಂದ್ರ ಇದ್ದವು. ಇದಕ್ಕೂ ಮುನ್ನ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಾಗಿದ್ದಾಗ, ಆಂಧ್ರ ಪ್ರದೇಶದ ತಿರುಪತಿ ಹಾಗೂ ಗೋವಾದ ಪಣಜಿಯಲ್ಲಿಯೂ ಇಲಾಖೆಯ ಅಧೀನ ಕಚೇರಿಗಳಿದ್ದವು.

ಇದೀಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವ್ಯಾಪ್ತಿಯಲ್ಲಿ 31 ಜಿಲ್ಲಾ ಕಚೇರಿಗಳು, ನವದೆಹಲಿಯಲ್ಲಿ ಕರ್ನಾಟಕ ವಾರ್ತಾ ಕೇಂದ್ರ ಹಾಗೂ ಹುಬ್ಬಳ್ಳಿಯಲ್ಲಿ ರಾಜ್ಯ ವಾರ್ತಾ ಕೇಂದ್ರ ಇವೆ.

ಅಲ್ಲದೆ, ಇಲಾಖಾ ವ್ಯಾಪ್ತಿಯಲ್ಲಿಯೇ ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ (ಕರ್ನಾಟಕ ಆತ್ಮ ಸಂಯಮ ಮಂಡಳಿ), ಶ್ರೀ ಕಂಠೀರವ ಸ್ಟೂಡಿಯೋಸ್, ಕರ್ನಾಟಕ ಮಾಧ್ಯಮ ಅಕಾಡೆಮಿ (ಕರ್ನಾಟಕ ಪತ್ರಿಕಾ ಅಕಾಡೆಮಿ) ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಗಳಿವೆ.

ಅಂತೆಯೇ, ಬೆಂಗಳೂರಿನ ಶ್ರೀ ಕಂಠೀರವ ಸ್ಟೂಡಿಯೋಸ್ ಆವರಣದಲ್ಲಿನ ನಟಸಾರ್ವಭೌಮ ಡಾ. ರಾಜ್ ಕುಮಾರ್, ಸುಪ್ರಸಿದ್ಧ ನಿರ್ಮಾಪಕಿ ಡಾ. ಪಾರ್ವತಮ್ಮ ಹಾಗೂ ಕರ್ನಾಟಕ ರತ್ನ ಡಾ. ಪುನೀತ್ ರಾಜ್ ಕುಮಾರ್ ಅವರ ಸಮಾಧಿ ಮತ್ತು ಸ್ಮಾರಕಗಳ ರಕ್ಷಣೆ ಮತ್ತು ನಿರ್ವಹಣೆಗಾಗಿ ಡಾ. ರಾಜ್ ಕುಮಾರ್ ಪ್ರತಿಷ್ಠಾನ, ಅದೇ ಆವರಣದಲ್ಲಿ ರೆಬೆಲ್ ಸ್ಟಾರ್ ಡಾ. ಅಂಬರೀಶ್ ಅವರ ಸ್ಮಾರಕ ಚಟುವಟಿಕೆಗಳಿಗಾಗಿ ಡಾ. ಅಂಬರೀಶ್ ಪ್ರತಿಷ್ಠಾನ ಹಾಗೂ ಮೈಸೂರಿನಲ್ಲಿ ಮೇಳೈಸಿರುವ ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಸ್ಮಾರಕ ನಿರ್ವಹಣೆಗೆ ಡಾ. ವಿಷ್ಣುವರ್ಧನ್ ಪ್ರತಿಷ್ಠಾನ ಕೂಡಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಡಳಿತಾತ್ಮಕ ನಿಯಂತ್ರಣಕ್ಕೆ ಒಳಪಟ್ಟಿದೆ.

**ಸ್ವಂತ ಕಟ್ಟಡಗಳು !**

ಬಳ್ಳಾರಿ, ಬೀದರ್, ಚಾಮರಾಜ ನಗರ, ಚಿಕ್ಕಮಗಳೂರು, ದಾವಣಗೆರೆ,



ಶ್ರೀ ಗಂಧದ ಕಾವಲ್ ನಲ್ಲಿರುವ ಮಾಧ್ಯಮ ಸೌಧ ಕಟ್ಟಡ

## ನೀಲಿ ಬಣ್ಣ ! ಲಾಂಛನ !

ಒಂದು ಕಾಲದಲ್ಲಿ ವಾರ್ತಾ ಇಲಾಖೆಯ ವಾಹನಗಳೆಲ್ಲವೂ ನೀಲಿ ಬಣ್ಣದ್ದಾಗಿದ್ದವು. ನೀಲಿ ಬಣ್ಣ ಏಕೆ? ಎಂಬ ಪ್ರಶ್ನೆಗೆ ನೀಲಿ ಬಣ್ಣವು ಮಾಹಿತಿ ಹರಿವು (ಫ್ಲೋ ಆಫ್ ಇನ್‌ಫಾರ್ಮೇಷನ್) ಎಂಬುದಕ್ಕೆ ಸೂಚಕ ಎಂದು ಇಲಾಖಾ ಹಿರಿಯರು ಹೇಳುತ್ತಿದ್ದರು.

ಅದೇ ರೀತಿ, ಇಲಾಖಾ ಲಾಂಛನವೂ ಕೂಡಾ. ಉತ್ತರ, ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಹೀಗೆ ನಾಲ್ಕೂ ದಿಕ್ಕುಗಳಿಂದ ಹೊರ ಹೊಮ್ಮುವ ಮಾಹಿತಿ ಕಲೆ ಹಾಕಿ, ನಾಲ್ಕೂ ದಿಕ್ಕುಗಳಿಗೆ ತಲುಪಿಸುವುದನ್ನು ಸೂಚಿಸುತ್ತದೆ ಎಂದು ತರ್ಕಿಸಲಾಗುತ್ತಿತ್ತು.



Downloaded From:www.kpscvaani.com

ಧಾರವಾಡ, ಹಾಸನ, ಹಾವೇರಿ, ಕಲಬುರಗಿ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ ಹಾಗೂ ವಿಜಯಪುರ ಜಿಲ್ಲಾ ಕಚೇರಿಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ ಹಾವೇರಿ ಜಿಲ್ಲಾ ಕಚೇರಿ ಅತ್ಯಂತ ಬೃಹತ್ ಕಟ್ಟಡವನ್ನು ಹೊಂದಿರುವ ಕಚೇರಿ ಎನಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲೂ ಇಲಾಖಾ ಸ್ವಾಮ್ಯದ ಕಟ್ಟಡವಿದೆ.

**ಶಾಖೆಗಳ ಕಾರ್ಯಚಟುವಟಿಕೆಗಳು**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಒಟ್ಟು 12 ಶಾಖೆಗಳಿವೆ. ಆಡಳಿತ ಶಾಖೆಯ ಜೊತೆಗೆ ಹೊಂದಿಕೊಂಡಿರುವ ಸಮನ್ವಯ, ಮಾಹಿತಿ ತಂತ್ರಜ್ಞಾನ ಜಾಲ (ಇನ್‌ಫಾರ್ಮೇಷನ್ ಟೆಕ್ನಾಲಜಿ ಹಬ್), ಯೋಜನಾ ಹಾಗೂ ವಾಹನ ಎಂಬ ನಾಲ್ಕು ಉಪ ಶಾಖೆಗಳು, ಲೆಕ್ಕ ಪತ್ರ ಶಾಖೆಯ ಜೊತೆಗೆ ಸೇರ್ಪಡೆಯಾಗಿರುವ ಪ್ರತಿ ಹಸ್ತಾಕ್ಷರ (ಮೇಲು ರುಜು) ಉಪ ಶಾಖೆ, ವಾಣಿಜ್ಯ ಪ್ರಚಾರ, ಕ್ಷೇತ್ರ ಪ್ರಚಾರ, ಛಾಯಾಚಿತ್ರ ಮತ್ತು ಚಲನಚಿತ್ರ, ಸುದ್ದಿ ಮತ್ತು ಪತ್ರಿಕಾ ಹಾಗೂ ಪ್ರಕಟಣಾ ಶಾಖೆಗಳಿವೆ.

ಆಡಳಿತ ಮತ್ತು ಲೆಕ್ಕಪತ್ರ ಶಾಖೆಯ ಕಾರ್ಯಚಟುವಟಿಕೆಗಳಲ್ಲಿ ಇತರೆ ಸರ್ಕಾರಿ ಇಲಾಖೆಗಳಿಗಿಂತಲೂ ಯಾವುದೇ ಭಿನ್ನತೆ ಇಲ್ಲ. ಆದರೆ, ಉಳಿದೆಲ್ಲಾ ಶಾಖೆಗಳ ಕಾರ್ಯಚಟುವಟಿಕೆಗಳು ವಿಭಿನ್ನ ಮತ್ತು ವಿಶಿಷ್ಟ.

**ವಾಣಿಜ್ಯ ಪ್ರಚಾರ ಶಾಖೆ**

ವಾಣಿಜ್ಯ ಪ್ರಚಾರ ಶಾಖೆಯಲ್ಲಿ ಆಕರ್ಷಕ (ಡಿಸ್ ಪ್ಲೇ) ಹಾಗೂ ವರ್ಗೀಕರಣ (ಕ್ಲಾಸಿಫೈಡ್) ಜಾಹೀರಾತು ಬಿಡುಗಡೆ ಮಾಡಲಾಗುತ್ತದೆ. ಸರ್ಕಾರದ ವಿವಿಧ ಯೋಜನೆಗಳು ಹಾಗೂ ಪ್ರಮುಖ ಕಾರ್ಯಕ್ರಮಗಳ ಲೋಕಾರ್ಪಣೆ, ಉದ್ಘಾಟನೆ ಮತ್ತು ಶಿಲಾನ್ಯಾಸ ಸಮಾರಂಭಗಳ ಸಂದರ್ಭಗಳಲ್ಲಿ ಹಾಗೂ ಸರ್ಕಾರದ ಸಾಧನಾ ಸಮಾರಂಭದ ವೇಳೆ ಆಕರ್ಷಕ ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗುತ್ತದೆ.

ನೇಮಕಾತಿ ಅಧಿಸೂಚನೆಗಳು, ಭೂ ಸ್ವಾಧೀನ, ಕಾಮಗಾರಿಗಳ ಅನುಷ್ಠಾನಕ್ಕೆ ಗುತ್ತಿಗೆದಾರರ ಆಹ್ವಾನ, ಹರಾಜು ಪ್ರಕ್ರಿಯೆ ಹಾಗೂ ಟೆಂಡರ್ ಕುರಿತ ಸೂಚನೆಗಳನ್ನು ವರ್ಗೀಕೃತ ಜಾಹೀರಾತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.

ಪ್ರಮುಖ ಸುದ್ದಿ ತಾಣಗಳನ್ನು (ನ್ಯೂಸ್ ಪೋರ್ಟಲ್) ಒಳಗೊಂಡಂತೆ ಅಂಕಿತ, ರೇಡಿಯೋ ಜಿಂಗಲ್ಸ್, ಟೆಲಿವಿಷನ್ ಸ್ಪಾಟ್ಸ್ ಒಳಗೊಂಡಂತೆ ವಿದ್ಯುನ್ಮಾನ ಹಾಗೂ ಪ್ರಾಯೋಜಿತ ಪುರವಣಿಗಳನ್ನು ಒಳಗೊಂಡಂತೆ ಮುದ್ರಣ ಮಾಧ್ಯಮಗಳ ವೇದಿಕೆಗಳನ್ನೂ ಸರ್ಕಾರದ ವಿಚಾರಕ್ಕೆ ಪ್ರಚಾರ ದೊರಕಿಸಿಕೊಡಲು ಬಳಸಿಕೊಳ್ಳಲಾಗುತ್ತಿದೆ.

**ಕ್ಷೇತ್ರ ಪ್ರಚಾರ ಶಾಖೆ**

ನವ ದೆಹಲಿಯಲ್ಲಿ ಗಣರಾಜ್ಯೋತ್ಸವ ಸಂದರ್ಭದಲ್ಲಿ ರಾಷ್ಟ್ರ ಮಟ್ಟದಲ್ಲಿ ಹಾಗೂ ಮೈಸೂರಿನ ವಿಶ್ವವಿಖ್ಯಾತ ದಸರಾ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ಸ್ತಬ್ಧಚಿತ್ರಗಳ ನಿರ್ಮಾಣ, ಬೀದಿ ನಾಟಕಗಳ ತಂಡದ ಕಲಾವಿದರ ಮೂಲಕ ಪ್ರತಿ ಜಿಲ್ಲೆಯಲ್ಲಿ ಪ್ರತಿ ಮಾಹೆ ಹತ್ತು ದಿನಗಳಲ್ಲಿ ದಿನಕ್ಕೆ ಎರಡು ಸಂಗೀತ ಮತ್ತು ನಾಟಕ ಪ್ರದರ್ಶನಗಳ ಆಯೋಜನೆ, ದೊಡ್ಡ ದೊಡ್ಡ ಸಂತೆ ಹಾಗೂ ಪ್ರಸಿದ್ಧ ಜಾತ್ರೆಗಳ ಸಂದರ್ಭಗಳಲ್ಲಿ ವಸ್ತು ಪ್ರದರ್ಶನ ಮಳಿಗೆಗಳ ಸ್ಥಾಪನೆ, ವೀಡಿಯೋ ಆನ್ ವೀಲ್ಸ್‌ನಲ್ಲಿ ಚಲನಚಿತ್ರ ಪ್ರದರ್ಶನ, ಲೇಸರ್ ಶೋ, ಹಾಲೋ ಗ್ರಾಮ್ ಶೋ ವ್ಯವಸ್ಥೆ ಇವುಗಳೆಲ್ಲವೂ ಕ್ಷೇತ್ರ ಪ್ರಚಾರ ಶಾಖೆಯಲ್ಲಿನ ಪ್ರಮುಖ ಚಟುವಟಿಕೆಗಳು.

ಒಂದು ಕಾಲದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಸಂಗೀತ ನಾಟಕ ವಿಭಾಗ ಹಾಗೂ ಗ್ರಾಮಾಂತರ ಬಾನುಲಿ ಪ್ರಸಾರ (ರೂರಲ್ ರೇಡಿಯೋ ಬ್ರಾಡ್‌ಕಾಸ್ಟಿಂಗ್) ವಿಭಾಗ ಎಂಬ ಎರಡು ಉಪ ಶಾಖೆಗಳಿದ್ದವು.

ಸಂಗೀತ ನಾಟಕ ವಿಭಾಗದಲ್ಲಿ ಶ್ರೀಮತಿ, ಸುಭಾಷ್ ಮೂಕೀಹಾಳ್ ಮತ್ತು ಪುರಂದರ ಭರಣಿ ಎಂಬ ಗಾಯಕರು ಹಳ್ಳಿಗಳಲ್ಲಿ ಪ್ರೇಕ್ಷಕರನ್ನು ಸರ್ಕಾರದ ಕಾರ್ಯಕ್ರಮದತ್ತ ಸೆಳೆಯುತ್ತಿದ್ದರು. ಚಿತ್ರನಟರಾದ ಲೋಕೇಶ್ ಮತ್ತು ಸಿ ಆರ್ ಸಿಂಹ, ಚಿತ್ರ ನಟಿ ಉಮಾ ಶಿವಕುಮಾರ್ ಕೂಡಾ ಇಲಾಖಾ ಪ್ರತಿಭೆಗಳು. ಹೆಸರಾಂತ ರಂಗ ನಿರ್ದೇಶಕ ಆರ್. ನಾಗೇಶ್, ರಂಗ ತಜ್ಞ, ಶ್ರೀನಿವಾಸ್ ಜಿ ಕಪ್ಪಣ್ಣ, ಚಿತ್ರ ನಿರ್ದೇಶಕ ಕೆ. ಶಿವರುದ್ರಯ್ಯ, ಕಿರು ತೆರೆಯ ಧಾರವಾಹಿಗಳ ನಿರ್ದೇಶಕ ಅಮರ ನಾರಾಯಣ (ಅಮರ ದೇವ) ಅವರೂ ಇದೇ ವಿಭಾಗದಲ್ಲಿ ಬೆಳೆದವರು.

ಇಲಾಖೆಯಲ್ಲಿನ ಓರ್ವ ಶ್ರವಣ ದೃಶ್ಯ ಅಭಿಯಂತರರ ನೇತೃತ್ವದಲ್ಲಿ ಗ್ರಾಮಾಂತರ ಬಾನುಲಿ ಪ್ರಸಾರ ವಿಭಾಗವು ಕಾರ್ಯ ನಿರ್ವಹಿಸುತ್ತಿತ್ತು. ಅಧೀನ ಕಚೇರಿಗಳಲ್ಲಿ ಶ್ರವಣ ದೃಶ್ಯ ಮೇಲ್ವಿಚಾರಕರು ಮತ್ತು ಶ್ರವಣ ದೃಶ್ಯ ಸಹಾಯಕರು ಪ್ರತಿ ಜಿಲ್ಲೆಯ ಪ್ರಮುಖ ಉದ್ಯಾನಗಳಲ್ಲಿ ಸ್ಥಾಪಿಸಲಾಗಿದ್ದ ರೇಡಿಯೋವನ್ನು ಭಾನುವಾರ ಸಂಜೆ ಎರಡು ತಾಸುಗಳ ಕಾಲ ಚಾಲನೆ ಮಾಡಿ, ವಿಹಾರಕ್ಕಾಗಿ ಉದ್ಯಾನಕ್ಕೆ ಆಗಮಿಸಿದ ಸಾರ್ವಜನಿಕರಿಗೆ ಸುದ್ದಿ ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ಆಲಿಸಲು ಅನುವು ಮಾಡಿಕೊಡುತ್ತಿದ್ದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸಿಸುವ ಕಾಲೋನಿಗಳಲ್ಲಿ ಇದೇ ಶಾಖೆಯಿಂದ ಬಣ್ಣದ ಟೆಲಿವಿಷನ್ ಸೆಟ್‌ಗಳನ್ನು ಅಳವಡಿಸಲಾಗುತ್ತಿತ್ತು.

**ಛಾಯಾಚಿತ್ರ ಮತ್ತು ಚಲನಚಿತ್ರ ಶಾಖೆ**

ಗಣ್ಯಾತಿಗಣ್ಯರು ಪಾಲ್ಗೊಳುವ ಎಲ್ಲಾ ರೀತಿಯ ಸರ್ಕಾರಿ ಕಾರ್ಯಕ್ರಮಗಳನ್ನು ಸಚಿತ್ರವಾಗಿ ದಾಖಲಿಸುವ ಈ ಶಾಖೆಯಲ್ಲಿನ ಛಾಯಾಗ್ರಾಹಕರು ಈವರೆಗೆ ಸುಮಾರು ಒಂಭತ್ತು ಲಕ್ಷ ಛಾಯಾಚಿತ್ರಗಳನ್ನು ತಮ್ಮ ಬಿಂಬಗ್ರಾಹಕದಲ್ಲಿ ಸೆರೆ ಹಿಡಿದಿದ್ದಾರೆ. ಅದರಲ್ಲಿ ಅರ್ಧದಷ್ಟನ್ನು ಈಗಾಗಲೇ ಅಂಕೀಕರಣ (ಡಿಜಿಟಲೀಕರಣ) ಗೊಳಿಸಲಾಗಿದೆ.

ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿ ಆಗಮನ, ವಿದೇಶಿ ರಾಷ್ಟ್ರಗಳ ಮುಖ್ಯಸ್ಥರು ಪಾಲ್ಗೊಂಡ ಕಾರ್ಯಕ್ರಮಗಳು, ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಚಿವರು, ರಾಜ್ಯದ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಇತರೆ ನ್ಯಾಯಾಧೀಶರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಹಾಗೂ ಈ ಗಣ್ಯರು ಪಾಲ್ಗೊಂಡ ಪ್ರಮುಖ ಕಾರ್ಯಕ್ರಮಗಳ ಛಾಯಾಚಿತ್ರಗಳು ಇಲಾಖಾ ಛಾಯಾಚಿತ್ರ ಭಂಡಾರದಲ್ಲಿ ಸಂರಕ್ಷಿಸಲ್ಪಟ್ಟಿದೆ.

ರಾಜ್ಯದಲ್ಲಿ ಚಲನಚಿತ್ರಗಳು, ಕಿರುತೆರೆ ಧಾರಾವಾಹಿಗಳು, ಕಿರು ಚಿತ್ರಗಳು, ವಾಣಿಜ್ಯ (ಜಾಹೀರಾತು) ಚಿತ್ರಗಳು ಹಾಗೂ ಸಾಕ್ಷ್ಯಚಿತ್ರಗಳ ಚಿತ್ರೀಕರಣಕ್ಕೆ ಅನುಮತಿ ನೀಡುವುದು, 1967 ರಲ್ಲಿ ಅನುಷ್ಠಾನಕ್ಕೆ ಬಂದ ಚಲನಚಿತ್ರ ಸಹಾಯಧನದ ಸೂತ್ರದಂತೆ ಕನ್ನಡ


Downloaded From:www.kpscvaani.com



ಅಂದಿನ ಉಪರಾಷ್ಟ್ರಪತಿಯಾದ ಬಿ.ಡಿ. ಜತ್ತಿ ಅವರೊಂದಿಗೆ ಇಲಾಖೆಯ ನಾಟಕ ತಂಡ.

ನೆಲದಲ್ಲಿ ನಿರ್ಮಿಸಿದ ಕನ್ನಡ ಮತ್ತು ಪ್ರಾದೇಶಿಕ ಭಾಷೆಗಳಾದ ತುಳು, ಕೊಡವ, ಕೊಂಕಣಿ, ಬಂಜಾರ, ಬ್ಯಾರಿ ಮತ್ತು ಅರೆ ಭಾಷೆಯ ಒಟ್ಟಾರೆ 200 ಚಲನಚಿತ್ರಗಳಿಗೆ ಸಹಾಯ ಧನ, ಪ್ರಮುಖ ವ್ಯಕ್ತಿ ಹಾಗೂ ವಿಷಯಾಧಾರಿತ ಕಿರು ಚಿತ್ರ ಹಾಗೂ ಸಾಕ್ಷ್ಯ ಚಿತ್ರ ನಿರ್ಮಾಣ, ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜನೆ ಇವೆಲ್ಲವೂ ಈ ಶಾಖೆಯ ಪ್ರಮುಖ ಕಾರ್ಯ ಚಟುವಟಿಕೆಗಳು.

ಪ್ರಸ್ತುತ ಒಂದು ಸಾವಿರ ಕಿರು ಚಿತ್ರ ಹಾಗೂ ಸಾಕ್ಷ್ಯ ಚಿತ್ರಗಳು ಇಲಾಖೆಯ ಯೂ ಟ್ಯೂಬ್‌ನಲ್ಲಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ.

**ಸುದ್ದಿ ಮತ್ತು ಪತ್ರಿಕಾ ಶಾಖೆ**

ಇಲಾಖೆಯ ಜೀವಾಳ ಎಂದೇ ಬಣ್ಣಿಸಬಹುದಾದ ಸುದ್ದಿ ಮತ್ತು ಪತ್ರಿಕಾ ಶಾಖೆ ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಲ್ಲಿನ ಗಮನಾರ್ಹ ಸುದ್ದಿ ತುಣುಕುಗಳನ್ನು ಪ್ರತಿದಿನವೂ ಮುಖ್ಯಮಂತ್ರಿಯವರ ಕಚೇರಿಗೆ ತಲುಪಿಸುತ್ತದೆ. ಅಲ್ಲದೆ, ಸುದ್ದಿ ವಾಹಿನಿಗಳಲ್ಲಿ ಬಿತ್ತರಿಸಲಾಗುವ ರಾಜ್ಯಕ್ಕೆ ಸಂಬಂಧಿಸಿದ ವಿದ್ಯಮಾನಗಳನ್ನೂ ಗಮನಹರಿಸಿ ಕ್ಷಣ ಕ್ಷಣಕ್ಕೂ ತಾಜಾಕರಿಸಿ ತಿಳಿಸುತ್ತದೆ.

ಮಾಧ್ಯಮ ಸಮನ್ವಯ, ಪತ್ರಿಕಾ ಪ್ರವಾಸ ಹಾಗೂ ಪತ್ರಿಕಾಗೋಷ್ಠಿಗಳ ಆಯೋಜನೆ, ಸುದ್ದಿ ಬಿಡುಗಡೆ, ಮಾಧ್ಯಮಗಳಲ್ಲಿ ಪ್ರಕಟಗೊಂಡ ವ್ಯತಿರಿಕ್ತ ಸುದ್ದಿ ಮತ್ತು ಲೇಖನಗಳಿಗೆ ಸಂಬಂಧಿಸಿದಂತೆ ಸರ್ಕಾರದ ಸ್ಪಷ್ಟೀಕರಣ (ಕ್ಲಾರಿಫಿಕೇಷನ್), ಪ್ರತ್ಯುತ್ತರ (ರಿಜಾಯಿಂಡರ್) ಮತ್ತು ಪ್ರತಿ ಟೀಕೆ (ರಿಬಟಲ್) ನೀಡುವುದು, ಮಾಧ್ಯಮ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಪತ್ರಕರ್ತರಿಗೆ ಟೀಯೆಸ್ಸಾರ್ ಸ್ಮಾರಕ, ಮೊಹರೆ ಹಣಮಂತರಾಯ, ಅಭಿವೃದ್ಧಿ ಹಾಗೂ ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಅರ್ಹರಲ್ಲಿ ಅತ್ಯರ್ಹರ ಆಯ್ಕೆ ಮತ್ತು ಪ್ರದಾನ ಎಲ್ಲವೂ ಈ ಶಾಖೆಯ ಚಟುವಟಿಕೆಗಳು.

**ಪ್ರಕಟಣಾ ಶಾಖೆ**

ರಾಜ್ಯ ಸರ್ಕಾರದ ಪ್ರತಿಷ್ಠಿತ ಪತ್ರಿಕೆಗಳು ಎನಿಸಿರುವ ವಾರ್ತಾ ಜನಪದ ಹಾಗೂ ಮಾರ್ಚ್ ಆಫ್ ಕರ್ನಾಟಕ ಪತ್ರಿಕೆಗಳ ಪ್ರಕಟಣೆ. ಈ ಎರಡೂ ಪತ್ರಿಕೆಗಳು ಕಳೆದ 57 ವರ್ಷಗಳಿಂದ ನಿರಂತರವಾಗಿ ಪ್ರಕಟಗೊಳ್ಳುತ್ತಿವೆ.

ರಾಜ್ಯ ಸರ್ಕಾರದ ಯೋಜನೆಗಳ ಕುರಿತು ಭಿತ್ತಿ ಪತ್ರ, ಮಡಿಕೆ ಪತ್ರ, ಕಿರು ಪುಸ್ತಕಗಳ ಪ್ರಕಟಣೆ. ಸರ್ಕಾರದ ನೂರು ದಿನಗಳ ಸಾಧನೆ, ಆರು ತಿಂಗಳ ಸಾಧನೆ ಹಾಗೂ ವಾರ್ಷಿಕೋತ್ಸವ ಸಂದರ್ಭದಲ್ಲಿ ಪುಸ್ತಕ ಪ್ರಕಟಣೆ. ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್‌ಗಳಿಗೆ ಇದೀಗ ಅವಕಾಶ ಇಲ್ಲದಿರುವ ಹಿನ್ನೆಲೆಯಲ್ಲಿ ಇಲಾಖಾ ಸ್ವಾಮ್ಯದ 2091 ಹೆದ್ದಾರಿ ಫಲಕಗಳಲ್ಲಿ ಬಯೋ ಡೀಗ್ರೇಡಬಲ್ ಕ್ಲಾತ್ ಬಳಸಿ ರಾಜ್ಯ ಸರ್ಕಾರದ ಸಂದೇಶ ಪ್ರಕಟಣೆ. ಎಲೆಕ್ಟ್ರಾನಿಕ್ ಡಿಜಿಟಲ್ ಬೋರ್ಡ್ ಸ್ಥಾಪನೆ. ಬಸ್ ಹಿಂಬದಿಯಲ್ಲಿ ಪ್ರಚಾರ ಫಲಕಗಳ ಅಳವಡಿಕೆ, ಬಸ್ ಬ್ರ್ಯಾಂಡಿಂಗ್, ಟ್ರೈನ್ ಬ್ರ್ಯಾಂಡಿಂಗ್ ಇವೆಲ್ಲವನ್ನೂ ಪ್ರಕಟಣಾ ಶಾಖೆ ನಿರ್ವಹಿಸುತ್ತಿದೆ.



.ಹಿರಿಯ ನಟರಾದ ಸಿ.ಆರ್. ಸಿಂಹ, ಲೋಕೇಶ್, ಹಿರಿಯ ನಟಿ ಉಮಾ ಶಿವಕುಮಾರ್ (ಬಡ್ಡಿ ಬಂಗಾರಮ್ಮ) ಅವರು ಇಲಾಖೆ ವತಿಯಿಂದ ನಾಟಕ ಪ್ರದರ್ಶನ ನೀಡಿದ ಸಂದರ್ಭ.

ಮುಂದಿನ ದಿನಗಳಲ್ಲಿ ಆಟೋರಿಕ್ಷಾಗಳ ಹಿಂಬದಿಯಲ್ಲಿ ಫಲಕಗಳ ಅಳವಡಿಕೆ ಹಾಗೂ ವಿಮಾನಗಳ ಸುತ್ತಲೂ ಜಾಹೀರಾತು ಸಂದೇಶ ಪ್ರಕಟಿಸುವ ಫ್ಲೈಟ್ ಬ್ರಾಂಡಿಂಗ್ ಮಾಡುವ ಬಗ್ಗೆಯೂ ಇಲಾಖೆಯಲ್ಲಿ ಚಿಂತನೆ ನಡೆದಿದೆ.

ಜನರ ನಾಡಿ ಮಿಡಿತ ಏನೆಂಬುದನ್ನು ಸರ್ಕಾರಕ್ಕೆ ತಿಳಿಸುವ ಹಾಗೂ ಸರ್ಕಾರದ ಸ್ಪಂದನೆಯನ್ನು ಜನರಿಗೆ ತಿಳಿಸುವ ರಾಯಭಾರಿ ಎಂದೇ ಗುರುತಿಸಲ್ಪಡುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಸರ್ಕಾರದ ಕಣ್ಣು, ಕಿವಿ ಹಾಗೂ ಮೂಗು ಎಂದು ಬಣ್ಣಿಸಲಾಗುತ್ತದೆ. ವಿವಿಧ ಮಾಧ್ಯಮಗಳನ್ನು ಹಾಗೂ ನವನವೀನ ಪ್ರಚಾರ ವೇದಿಕೆಗಳನ್ನು ಬಳಸಿಕೊಂಡು ಸರ್ಕಾರದ ವರ್ಚಸ್ಸನ್ನು ವೃದ್ಧಿಸುವ ಕಾಯಕದಲ್ಲಿ ತೊಡಗಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇದೀಗ ಅಮೃತ ಮಹೋತ್ಸವ ಹೊಸ್ತಿಲಲ್ಲಿ ಸಂಭ್ರಮಿಸಲು ಸಜ್ಜಾಗಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇನ್ನಷ್ಟು ಬೆಳೆಯಲಿ. ಮತ್ತಷ್ಟು ಬೆಳಗಲಿ.

**ಸ್ಮರಣಾರ್ಹರು**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಪ್ರತಿಭೆಗಳ ಪ್ರಭೆ ಇರುವುದನ್ನು ಗಮನಿಸಿ ಗುರುತಿಸಬಹುದು.

ಇಲಾಖೆಯ ಪ್ರತಿಭಾ ಕುಸುಮಗಳಲ್ಲಿ ವೇದವಲ್ಲಿಯೂ ಒಬ್ಬರು. ಇಲಾಖೆಯಲ್ಲಿ ಬೆರಳಚ್ಚುಗಾರರಾಗಿದ್ದ ವೇದವಲ್ಲಿ ಅವರು ನಂತರ ಸಂಧ್ಯಾ ಎಂಬ ಹೆಸರಿನಲ್ಲಿ ಕನ್ನಡ, ತಮಿಳು ಮತ್ತು ಹಿಂದಿ ಚಿತ್ರರಂಗವನ್ನು ಪ್ರವೇಶಿಸುತ್ತಾರೆ. ನಟಿಯಾಗಿ ಗುರುತಿಸಿಕೊಳ್ಳುತ್ತಾರೆ. ಸಂಧ್ಯಾ ಅವರ ಮಗಳು ಕೋಮಲವಲ್ಲಿ. ಆಕೆಯೂ ಚಿತ್ರರಂಗ ಪ್ರವೇಶಿಸುತ್ತಾರೆ. ಸಂಧ್ಯಾ ಅವರ



Downloaded From:www.kpscvaani.com

ತಂದೆಯ ಮನೆ ಮೈಸೂರಿನಲ್ಲಿನ ಜಯ ವಿಲಾಸ್. ಸಂಧ್ಯಾ ಅವರ ತಾಯಿಯ ಮನೆ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿನ ಲಲಿತಾ ವಿಲಾಸ್. ಆದ ಕಾರಣ, ಕೋಮಲವಲ್ಲಿ ತಮಿಳು ಚಿತ್ರರಂಗದಲ್ಲಿ ಪ್ರವೇಶಿಸಿದಾಗ ಜಯಲಲಿತಾ ಎಂಬ ಹೆಸರಿನಲ್ಲಿ ಪ್ರಖ್ಯಾತಿ ಗಳಿಸುತ್ತಾರೆ. ನಂತರ, ಜಯಲಲಿತಾ ಅವರು ತಮಿಳು ನಾಡಿಗೆ ಆರು ಬಾರಿ ಮುಖ್ಯಮಂತ್ರಿಯಾದದ್ದು ಇದೀಗ ಇತಿಹಾಸ !

ಇಲಾಖೆಯಲ್ಲಿ ಮೊದಲ ಮುಖ್ಯಸ್ಥರು ಪ್ರಧಾನ ವಾರ್ತಾಧಿಕಾರಿಯಾಗಿ ಕಾರ್ಯನಿರ್ವಹಿಸಿದವರು ಸಿದ್ದಯ್ಯ ಪುರಾಣಿಕ್. ನಂತರ, ಸಿದ್ದಯ್ಯ ಪುರಾಣಿಕ್ ಅವರು ನಿರ್ದೇಶಕರೂ ಆಗಿ ಸೇವೆ ಸಲ್ಲಿಸಿದ್ದಾರೆ. ಮೊದಲ ನಿರ್ದೇಶಕರು ಬಿ.ಎನ್. ಶ್ರೀಸತ್ಯನ್. ಮೊದಲ ಆಯುಕ್ತರು ಐ.ಎಂ. ವಿಠ್ಠಲ ಮೂರ್ತಿ. ಸಹಾಯಕ ನಿರ್ದೇಶಕರಾಗಿ ಸೇವೆಗೆ ಸೇರಿ ನಿರ್ದೇಶಕರಾಗಿ ಉತ್ತುಂಗಕ್ಕೇರಿದ ಮೊದಲ ಖಾಯಂ ಪೂರ್ವ ಅಧಿಕಾರಿ ಬಿ.ಎನ್. ಶ್ರೀವರ ರೆಡ್ಡಿ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಮುಖ್ಯಮಂತ್ರಿಯವರ ಪತ್ರಿಕಾ ಕಾರ್ಯದರ್ಶಿಯಾಗಿ ಹಾಗೂ ಪಿ.ವೆಂಕಟ ಸುಬ್ಬಯ್ಯ ಅವರು ರಾಜ್ಯಪಾಲರಾಗಿದ್ದಾಗ ರಾಜ್ಯಪಾಲರ ಪತ್ರಿಕಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಹಿರಿಮೆ ಬಿ.ಎನ್.ಎಸ್. ರೆಡ್ಡಿ ಅವರದು.

ಹಿರಿಯ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡು ಇಲಾಖೆಯನ್ನು ಪ್ರವೇಶಿಸಿ ಸುದೀರ್ಘ ಅವಧಿಗೆ ನಿರ್ದೇ-ಶಕರ ಸ್ಥಾನವನ್ನು ಅಲಂಕರಿಸಿದವರು ಎನ್. ಆರ್. ವಿಶುಕುಮಾರ್.

ವಾರ್ತಾ ಸಹಾಯಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹೆಚ್.ಎಸ್.ಮಹದೇವ ಪ್ರಕಾಶ್ ಇಲಾಖೆಯಿಂದ ಹೊರ ನಡೆದು ಪತ್ರಿಕಾ ರಂಗದಲ್ಲಿ ಉತ್ತುಂಗಕ್ಕೇರಿದ್ದಲ್ಲದೆ, ಮಾಧ್ಯಮ ಸಲಹೆಗಾರರಾಗಿ ಸಂಪುಟ ದರ್ಜೆ ಸ್ಥಾನಮಾನ ಪಡೆದರು.

ವೀರಪ್ಪ ಮೊಯಿಲಿ, ಹೆಚ್.ಡಿ. ದೇವೇಗೌಡ, ಜೆ.ಹೆಚ್. ಪಟೇಲ್, ಎಸ್.ಎಂ. ಕೃಷ್ಣ, ಧರ್ಮಸಿಂಗ್, ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದ ಗೌಡ ಹಾಗೂ ಜಗದೀಶ್ ಶೆಟ್ಟರ್ ಅವರು



ರಾಷ್ಟ್ರಕವಿ ಕುವೆಂಪು ಅವರು ಪತ್ನಿ ಸಮೇತರಾಗಿ ಸಾಕ್ಷ್ಯಚಿತ್ರ ವೀಕ್ಷಣೆಗೆ ಬಾದಾಮಿ ಹೌಸ್‌ಗೆ ಆಗಮಿಸಿದ್ದ ಸಂದರ್ಭ

ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ವಿಶೇಷಾಧಿಕಾರಿ, ವಿಶೇಷ ಕರ್ತವ್ಯಾಧಿಕಾರಿ, ವಾರ್ತಾಧಿಕಾರಿ, ಮಾಧ್ಯಮ ಕಾರ್ಯದರ್ಶಿ ಹೀಗೆ ಮುಖ್ಯಮಂತ್ರಿ ಸಚಿವಾಲಯದಲ್ಲಿಯೇ ವಿವಿಧ ಹುದ್ದೆಗಳಲ್ಲಿ ಸುದೀರ್ಘ ಕಾಲ ಕಾರ್ಯನಿರ್ವಹಿಸಿದ ಎನ್.ಭೃಂಗೀಶ್ ಅವರು ನಂತರ ಮಾಧ್ಯಮ ಸಲಹೆಗಾರರಾಗಿ ಸಂಪುಟ ದರ್ಜೆ ಸ್ಥಾನಮಾನವನ್ನು ಹೊಂದಿದ್ದು ವಿಶೇಷ.

ಹೆಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ, ಧರ್ಮಸಿಂಗ್ ಹಾಗೂ ಹೆಚ್. ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ವಿಶೇಷಾಧಿಕಾರಿಯಿಂದ ಮಾಧ್ಯಮ ಕಾರ್ಯದರ್ಶಿಯವರೆಗೆ ಕಾರ್ಯ ನಿರ್ವಹಿಸಿ ಮಾಧ್ಯಮ ಲೋಕದಲ್ಲಿ ಮಾಧ್ಯಮ–ಸ್ನೇಹೀ ಅಧಿಕಾರಿಯಾಗಿ ಗುರುತಿಸಿ ಕೊಂಡವರು ಹೆಚ್.ಬಿ.ದಿನೇಶ್.

ವಾರ್ತಾ ಇಲಾಖೆಯಲ್ಲಿನ ಅತ್ಯುತ್ತಮ ವಾಗ್ಮಿ ಮತ್ತು ಶ್ರೇಷ್ಠ ಬರಹಗಾರ. ಗ್ರಾಮೀಣ ಸೊಗಡಿನ ಗಾದೆಗಳ ಅಂತರಂಗವನ್ನು ಅಕ್ಷರ ಲೋಕಕ್ಕೆ ಪರಿಚಯಿಸಿದ ಮೇರು ವ್ಯಕ್ತಿ ಸಿ.ಕೆ. ಪರಶುರಾಮಯ್ಯ.

ವಾರ್ತಾ ಇಲಾಖೆಯ ಪ್ರತಿಭಾ ಕುಸುಮಗಳಲ್ಲಿ ಅ.ನಾ. ಪ್ರಹ್ಲಾದ ರಾವ್ ಕೂಡಾ ಒಬ್ಬರು. ಅತೀ ಹೆಚ್ಚು ಪದಬಂಧಗಳನ್ನು ರಚಿಸಿ ಪ್ರಕಟಿಸಿದ ವ್ಯಕ್ತಿಯಾಗಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಪ್ರವೇಶ ಪಡೆದ ಈ ಪದಬಂಧ ಬ್ರಹ್ಮ ಸಿನಿಮಾಗೆ ಸಂಬಂಧಿಸಿದಂತೆಯೂ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ದಾಖಲೆ ಸೃಷ್ಟಿಸಿದ್ದಾರೆ.

ಇಲಾಖೆಯ ಮತ್ತೊಂದು ಪ್ರತಿಭೆಯ ಪ್ರಭೆ ಡಾ.ಕೆ.ಪುಟ್ಟಸ್ವಾಮಿ. ಸಿನಿಮಾ ಬಗ್ಗೆ ಅಧಿಕಾರವತ್ತಾಗಿ ಪುಸ್ತಕಗಳನ್ನು ಬರೆದಿರುವ ಜೊತೆಗೆ ಜೀವ ವೈವಿಧ್ಯಗಳ ಬಗ್ಗೆಯೂ ಪುಸ್ತಕಗಳನ್ನು ಬರೆದ ಕೀರ್ತಿ ಮತ್ತು ಗೌರವ ಕೆ. ಪುಟ್ಟಸ್ವಾಮಿ ಅವರದ್ದು.

ಸಿನಿಮಾ ರಂಗದ ಬಗ್ಗೆ ಆಕರ್ಷಕ ಬರವಣಿಗೆಗೆ ಮತ್ತೊಂದು ಹೆಸರು ಜಗನ್ನಾಥ ಪ್ರಕಾಶ್. ಸಾಹಿತ್ಯದಲ್ಲೂ ಆಳವಾದ ಅಧ್ಯಯನ ನಡೆಸಿ ಹಲವು ಪುಸ್ತಕಗಳನ್ನು ರಚಿಸಿರುವ ಜಗನ್ನಾಥ್ ಪ್ರಕಾಶ್ ಅತೀ ಹೆಚ್ಚು ಪತ್ರಿಕೆಗಳಿಗೆ ಅತೀ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ ಎಂಬ ಖ್ಯಾತಿ ಗಳಿಸಿದ್ದಾರೆ.

ವಾರ್ತಾ ಇಲಾಖೆಯಲ್ಲಿ ಪ್ರಖರ ಬರವಣಿಗೆಗೆ ಹೆಸರಾಗಿದ್ದು ಮಾತ್ರವಲ್ಲದೆ ವೈಜ್ಞಾನಿಕ ಚಿಂತನೆ ಹಾಗೂ ವೈಚಾರಿಕತೆಗೆ ಒತ್ತು ನೀಡಿ ಒಂದೆಡೆ ಪತ್ರಕರ್ತೆ, ಮತ್ತೊಂದೆಡೆ ಬರಹಗಾರ್ತಿ, ಮಗದೊಂದೆಡೆ ಹೋರಾಟಗಾರ್ತಿಯಾಗಿ ಕಂಗೊಳಿಸಿದವರು ಬಿ.ಎಸ್. ವೆಂಕಟಲಕ್ಷ್ಮಿ.

ಇಲಾಖೆಯ ಇನ್ನೊಂದು ಬಹುಮುಖ ಪ್ರತಿಭೆ ವೈ.ಕೆ. ಸಂಧ್ಯಾ. ಕಥೆ, ಕಾದಂಬರಿ, ನಾಟಕ ಮತ್ತು ವಿಮರ್ಶೆ ಹೀಗೆ ಸಾಹಿತ್ಯ ಕ್ಷೇತ್ರದ ವಿವಿಧ ಮಜಲುಗಳಲ್ಲಿ ಛಾಪು ಮೂಡಿಸಿದವರು.

ವಾರ್ತಾ ಇಲಾಖೆಯಲ್ಲಿನ ಪ್ರತಿಭಾ ಪರ್ವತ ಪ್ರಕಾಶ್ ಯೋಗಿ. ಐದು ಲಕ್ಷಕ್ಕೂ ಹೆಚ್ಚು ಮಂದಿಗೆ ಯೋಗ ಶಿಕ್ಷಣವನ್ನು ಉಚಿತವಾಗಿ ಕೊಡಮಾಡಿದ ಯೋಗ ಗುರು.

ಇಷ್ಟು ಮಾತ್ರವಲ್ಲ, ವಾರ್ತಾ ಇಲಾಖೆಯ ಸಾಧಕರನ್ನು ದಾಖಲಿಸಲು ಪುಟಗಳು ಸಾಲುವುದಿಲ್ಲ. ಸಂಪುಟಗಳೇ ಬೇಕಾದೀತು !



Downloaded From:www.kpscvaani.com



# ಪರೀಕ್ಷಾ ಫಲಿತಾಂಶ ಎದುರಿಸುವುದು ಹೇಗೆ ?

**ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಫಲಿತಾಂಶವನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕು ಮತ್ತು ಪೋಷಕರು ಮಕ್ಕಳಿಗೆ ಈ ಸಮಯದಲ್ಲಿ ಹೇಗೆ ಧೈರ್ಯ ತುಂಬಬೇಕು ಎಂಬುದರ ಮೇಲೆ ಈ ಲೇಖನವು ಬೆಳಕು ಚೆಲ್ಲಿದೆ.**

ಡಾ|| ಮೋಹನ್ ಕುಮಾರ್ ಆರ್

**ಪ**ರೀಕ್ಷೆ ಎಂಬುದು ನಾವು ವಿಷಯವನ್ನು ಎಷ್ಟರ ಮಟ್ಟಿಗೆ ತಿಳಿದುಕೊಂಡಿದ್ದೇವೆ ಎಂಬುದಕ್ಕೆ ಒಂದು ಮಾಪನ ಅಷ್ಟೇ. ಪರೀಕ್ಷಾ ಫಲಿತಾಂಶ ಎಂದರೆ "ವಿದ್ಯಾರ್ಥಿಯ ಸಾಮರ್ಥ್ಯವನ್ನು ಅಳೆಯುವ ಹಲವಾರು ವಿಧಾನಗಳಲ್ಲಿ ಒಂದು. ಫಲಿತಾಂಶಕ್ಕೆ ತೀರಾ ಹೆಚ್ಚು ಬೆಲೆ ಕೊಡಬಾರದು.

ಅಂಕ ಕಡಿಮೆ ಬಂದಾಗ ವಿದ್ಯಾರ್ಥಿಗಳಿಗೆ ಬರುವ ಯೋಚನೆಗಳು ಯಾರಿಗೂ ಮುಖ ತೋರಿಸುವುದು ಬೇಡ, ನನಗೆ ಭವಿಷ್ಯವೇ ಇಲ್ಲ, ಫಲಿತಾಂಶ ಯಾರಿಗೂ ಹೇಳುವುದೇ ಬೇಡ, ನಕಾರಾತ್ಮಕ ಚಿಂತನೆ, ಸದಾ ದುಃಖದಿಂದ ಇರುವುದು, ಭಯ/ಆತಂಕದ ಮನಸ್ಥಿತಿ, ಒಂಟಿಯಾಗಿರುವುದು, ಆತ್ಮಹತ್ಯಾ ಆಲೋಚನೆ, ಮನೆ ಬಿಟ್ಟು ಓಡಿಹೋಗುವುದು, ಅಂಕಗಳ ಬಗ್ಗೆ ಸುಳ್ಳು ಹೇಳುವ ಆಲೋಚನೆಗಳು ಬರುತ್ತವೆ. ಆದರೆ ಬೇರೆಯವರಿಂದ ಬಚ್ಚಿಡುವುದರಲ್ಲಿ ಅರ್ಥವಿಲ್ಲ, ಅಂಕ ಕಡಿಮೆ/ಫೇಲ್ ಆದರೆ ಏಕೆ ಹೀಗಾಯಿತೆಂದು ವಿಮರ್ಶೆ ಮಾಡಿಕೊಂಡು ಮುಂದಿನ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗಬೇಕು.

ಫಲಿತಾಂಶ ಸಮಯದಲ್ಲಿ ಪೋಷಕರ ಪಾತ್ರ ಬಹಳ ಮುಖ್ಯವಾಗುತ್ತದೆ. ಹಾಗಾಗಿ ನಿಮ್ಮ ಮಕ್ಕಳನ್ನು ಬೇರೆ ಮಕ್ಕಳೊಂದಿಗೆ ಹೋಲಿಸಬೇಡಿ ಮತ್ತು ಚುಚ್ಚು ಮಾತನಾಡಬೇಡಿ. ಫಲಿತಾಂಶ



Downloaded From:www.kpscvaani.com

ಬರುವ ಸಮಯದಲ್ಲಿ ಮಗುವಿನ ಜೊತೆ ಇದ್ದರೆ ತುಂಬಾ ಒಳ್ಳೆಯದು. ಮಗುವಿನ ಮುಂದೆ ನಿಮ್ಮ ನಿರಾಶೆಯನ್ನು ತೋರ್ಪಡಿಸದೇ ಮಗುವಿಗೆ ಧೈರ್ಯ, ಸಮಾಧಾನ ಹೇಳಿ, ನಂತರ ಸೂಕ್ತ ಸಮಯ ನೋಡಿ ಫಲಿತಾಂಶದ ಬಗ್ಗೆ ಚರ್ಚಿಸಿ ಮಗು ವಿಷಯವನ್ನು ಚೆನ್ನಾಗಿ ಕಲಿಯಲು ಬೆಂಬಲಿಸಿ. ಕಡಿಮೆ ಅಂಕ ಪಡೆದೂ ಕೂಡ ನಂತರದಲ್ಲಿ ಸಾಧನೆ ಮಾಡಿರುವವರ ಉದಾಹರಣೆಯನ್ನು ಕೊಟ್ಟು ಅವರನ್ನು ಹುರುದುಂಬಿಸಿ.

ಇದರಲ್ಲಿ ಶಿಕ್ಷಕರ ಪಾತ್ರ ಕೂಡ ಇರುತ್ತದೆ. ಶಿಕ್ಷಕರಾದವರು ಮಕ್ಕಳಿಂದ ಮಿತಿಮೀರಿದ ನಿರೀಕ್ಷೆಯನ್ನು ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ಎಲ್ಲಾ ಮಕ್ಕಳ ಗ್ರಹಿಕೆ ಒಂದೇ ರೀತಿಯಲ್ಲಿ ಇರುವುದಿಲ್ಲ. ಹಾಗಾಗಿ ಹೆಚ್ಚು ಅಂಕ ಬಂದವರನ್ನು ಕಡಿಮೆ ಅಂಕ ಬಂದವರೊಂದಿಗೆ ಹೋಲಿಸಬಾರದು. ಹಾಗೆಯೇ ಕಡಿಮೆ ಅಂಕ ಬಂದವರಿಗೆ ಮನಸ್ಸು ನೋಯುವಂತಹ ಮಾತುಗಳನ್ನಾಡಬಾರದು.

**ವಿದ್ಯಾರ್ಥಿಗಳು ಮತ್ತು ಪೋಷಕರು ಮನಸ್ಸಿನಲ್ಲಿಟ್ಟು ಕೊಳ್ಳಬೇಕಾದ ಅಂಶಗಳು**

ಅಂಕಗಳು ನಮ್ಮ ಜ್ಞಾನವನ್ನು ಸಂಪೂರ್ಣವಾಗಿ ಅಳೆಯುವುದಿಲ್ಲ. ಅಂಕಗಳೇ ಮುಖ್ಯವಲ್ಲ-ಕಲಿಕೆ ಮುಖ್ಯ. ಪರೀಕ್ಷೆ ಜೀವನದ ಒಂದು ಹಂತವಷ್ಟೇ ವಿನಃ, ಸಂಪೂರ್ಣ ಭವಿಷ್ಯದ ನಿರ್ಣಯವಲ್ಲ.

**ಮಾತನಾಡಿ:**

ನಿಮ್ಮ ಕಾರ್ಯಕ್ಷಮತೆಯಿಂದ ನೀವು ನಿರಾಶೆಗೊಂಡರೆ ನಿಮ್ಮ ಭಾವನೆಗಳ ಬಗ್ಗೆ ಮಾತನಾಡಿ. ನೀವು ನಂಬುವ ವ್ಯಕ್ತಿಯೊಂದಿಗೆ ಮಾತನಾಡಿ. ಅದು ಪೋಷಕರು, ಒಡಹುಟ್ಟಿದವರು, ಶಿಕ್ಷಕರು ಅಥವಾ ಸ್ನೇಹಿತರಾಗಿರಬಹುದು. ಅಗತ್ಯವಿದ್ದರೆ ವೃತ್ತಿಪರ ಸಲಹೆಗಾರ ಅಥವಾ ಸಹಾಯವಾಣಿಯಿಂದ ಸಹಾಯ ಪಡೆಯಿರಿ.

**ಸಕಾರಾತ್ಮಕ ಮನೋಭಾವವನ್ನು ಇಟ್ಟುಕೊಳ್ಳುವುದು ಮುಖ್ಯ:**

ಒಂದು ಕೆಟ್ಟ ಫಲಿತಾಂಶದೊಂದಿಗೆ ಜೀವನವು ಕೊನೆಗೊಳ್ಳುವುದಿಲ್ಲ ಎಂದು ಅರ್ಥಮಾಡಿಕೊಳ್ಳಿ. ನಿಮ್ಮ ಮಕ್ಕಳ ಮೇಲೆ ನೀವು ನಂಬಿಕೆ ಇಟ್ಟುಕೊಳ್ಳಬೇಕು ಮತ್ತು ಅವರಿಗೆ ಆತ್ಮವಿಶ್ವಾಸವನ್ನು ನೀಡಬೇಕು.

**ಹೋಲಿಸಬೇಡಿ:**

ವ್ಯಕ್ತಿಗಳು ವಿಭಿನ್ನರಾಗಿದ್ದಾರೆ ಮತ್ತು ತಮ್ಮದೇ ಆದ ಸಾಮರ್ಥ್ಯಗಳು ಮತ್ತು ಕೌಶಲ್ಯಗಳನ್ನು ಹೊಂದಿರುತ್ತಾರೆ. ನಿಮ್ಮ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಇತರರೊಂದಿಗೆ ಹೋಲಿಸುವುದು ಸೂಕ್ತವಲ್ಲ. ನಿಮ್ಮ ಸ್ವಂತ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಸ್ವೀಕರಿಸಿ ಮತ್ತು ಅವುಗಳ ಬಗ್ಗೆ ಹೆಮ್ಮೆ ಪಡಿ. ಪ್ರತಿಯೊಬ್ಬರೂ ಟಾಪರ್ ಆಗಲು ಸಾಧ್ಯವಿಲ್ಲ ಮತ್ತು ಅವರ ಮಗು ತನ್ನದೇ ಆದ ವಿಶಿಷ್ಟ ವ್ಯಕ್ತಿ ಎಂದು ಪೋಷಕರು ಅರ್ಥಮಾಡಿಕೊಳ್ಳಬೇಕು.

**ಒತ್ತಡದ ಲಕ್ಷಣಗಳನ್ನು ಗುರುತಿಸಿ:**

ಶಾಂತವಾಗಿ ಮತ್ತು ಶಾಂತವಾಗಿರಲು ನಿಮ್ಮ ಪ್ರಯತ್ನಗಳ ಹೊರತಾಗಿಯೂ ಒತ್ತಡವನ್ನು ಅನುಭವಿಸುವುದು ಅರ್ಥವಾಗುವಂತಹದ್ದಾಗಿದೆ. ಆದ್ದರಿಂದ, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆಯಾಸ, ನಿದ್ರೆ ಮತ್ತು ಹಸಿವಿನ ಕೊರತೆ, ತಲೆನೋವು ಮುಂತಾದ ಚಿಹ್ನೆಗಳನ್ನು ಗುರುತಿಸುವುದು ಬಹಳ ಮುಖ್ಯ. ಫಲಿತಾಂಶದ ನಂತರದ ಆತಂಕವು ನಿಮ್ಮ ವ್ಯಕ್ತಿತ್ವವನ್ನು ವ್ಯಾಖ್ಯಾನಿಸಲು ಬಿಡಬೇಡಿ.

**ಸಮಯ ತೆಗೆದುಕೊಳ್ಳಿ:**

ನೀವು ಒತ್ತಡವನ್ನು ಅನುಭವಿಸಿದರೆ, ಫಲಿತಾಂಶದಿಂದ ನಿಮ್ಮ ಮನಸ್ಸನ್ನು ತೆಗೆದುಹಾಕಲು ಸಹಾಯ ಮಾಡುವ ಚಟುವಟಿಕೆಯನ್ನು ಕೈಗೊಳ್ಳಿ. ಹೊರಾಂಗಣ ಕ್ರೀಡೆಗಳು ಅಥವಾ ಆನ್‌ಲೈನ್ ಗೇಮಿಂಗ್, ಅಡುಗೆ ಮಾಡುವುದು ಮತ್ತು ಸಾಕು ಪ್ರಾಣಿಗಳೊಂದಿಗೆ ಆಟವಾಡುವುದು ಇವೆಲ್ಲವೂ ಚಿಕಿತ್ಸಕವಾಗಬಹುದು. ಪೋಷಕರು ತಮ್ಮ ಮಗುವಿಗೆ ವಿಶ್ರಾಂತಿ ಪಡೆಯಲು ವಾರಾಂತ್ಯದ ವಿಹಾರವನ್ನು ಏರ್ಪಡಿಸಬಹುದು.

**ನಿಮ್ಮ ಆಯ್ಕೆಗಳನ್ನು ವಿಸ್ತರಿಸಿ:**

ನಿಮ್ಮ ಕನಸಿನ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳನ್ನು ಮೀರಿ ವಿಶಾಲವಾದ ಪ್ರಪಂಚವಿದೆ. ಹೊಸ ಕೋರ್ಸ್‌ಗಳು ಮತ್ತು ವೃತ್ತಿ ಆಯ್ಕೆಗಳ ಬಗ್ಗೆ ಓದಿ ಮತ್ತು ನಿಮ್ಮ ಆಸಕ್ತಿಗೆ ಯಾವುದು ಸರಿಹೊಂದುತ್ತದೆ ಎಂಬುದನ್ನು ನೋಡಿ. ಹೊಸ ಆಯ್ಕೆಗಳನ್ನು ಅನ್ವೇಷಿಸಲು ಮತ್ತು ನಿಮ್ಮ ಮುಂದಿನ ಕ್ರಮದ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನು ಪಡೆಯಲು ನೀವು ವೃತ್ತಿ ಸಲಹೆಗಾರರೊಂದಿಗೆ ಮಾತನಾಡಬಹುದು. ಆಧುನಿಕ ಜಗತ್ತಿನಲ್ಲಿ ಅಪಾರ ವೈವಿಧ್ಯಮಯ ವೃತ್ತಿ ಆಯ್ಕೆಗಳು ನಿಮ್ಮನ್ನು ಕಾಯುತ್ತಿವೆ ಮತ್ತು ನೈತಿಕ ಹ್ಯಾಕಿಂಗ್ ಮತ್ತು ಗ್ರಾಫಿಕ್ಸ್ ವಿನ್ಯಾಸದಂತಹ ಕ್ಷೇತ್ರಗಳಲ್ಲಿ ನೀವು ಯಶಸ್ವಿ ಭವಿಷ್ಯವನ್ನು ನಿರ್ಮಿಸಬಹುದು.

ಹೊಸ ಕೌಶಲ್ಯಗಳು:

ಶೈಕ್ಷಣಿಕಕ್ಕೆ ಹಿಂತಿರುಗುವ ಮೊದಲು ಅಥವಾ ವೃತ್ತಿಪರ ವೃತ್ತಿಜೀವನವನ್ನು ಪ್ರಾರಂಭಿಸುವ ಮೊದಲು ಹೊಸ ಕೌಶಲ್ಯ ಮತ್ತು ಅನುಭವಗಳೊಂದಿಗೆ ತೊಡಗಿಸಿಕೊಳ್ಳಲು ಒಂದು ಅಂತರ ವರ್ಷವು ನಿಮಗೆ ಸಹಾಯ ಮಾಡುತ್ತದೆ. ಪ್ರಯಾಣ, ಸಮುದಾಯ ಸೇವೆ, ಇಂಟರ್ನ್‌ಶಿಪ್‌ಗಳು, ಸಂಶೋಧನೆ ಅಥವಾ ಕ್ಷೇತ್ರ ಅನುಭವ, ಸ್ವತಂತ್ರವಾಗಿ ಅಥವಾ ಇವುಗಳಲ್ಲಿ ಯಾವುದಾದರೂ ಸಂಯೋಜನೆಯು ಕೆಲವು ಕಾರ್ಯ ಸಾಧ್ಯವಾದ ಆಯ್ಕೆಗಳಾಗಿವೆ. ಮಕ್ಕಳು ಮತ್ತು ಪೋಷಕರು ಸಲಹೆ ಮತ್ತು ಮಾರ್ಗದರ್ಶನಕ್ಕೆ ಟೆಲಿ-ಮನಸ್ (Tele MANAS No-14416 ಗೆ ಸಂಪರ್ಕಿಸಿ ಆತ್ಮ ಸಮಾಲೋಚನೆ ಪಡೆದುಕೊಳ್ಳಬಹುದು.

ಈ ನಿರ್ಣಾಯಕ ಹಂತದಲ್ಲಿ ತಮ್ಮ ಮಗು ಏಕಾಂಗಿಯಾಗಿ ಉಳಿಯದಂತೆ ಪೋಷಕರು ಖಚಿತಪಡಿಸಿಕೊಳ್ಳುವ ಜೊತೆಗೆ ಸಂವಹನ ಮತ್ತು ವೈಯಕ್ತಿಕ ಪ್ರತಿಬಿಂಬಕ್ಕಾಗಿ ಮನೆಯಲ್ಲಿ ಅನುಕೂಲಕರ ವಾತಾವರಣವನ್ನು ಒದಗಿಸಬೇಕು. ■

## ಮಾಧ್ಯಮದ ಪಾತ್ರ

- ಪರೀಕ್ಷಾ ಸಮಯದಲ್ಲಿ ಮಕ್ಕಳಿಗೆ ಪ್ರೋತ್ಸಾಹಕರ ಹಾಗೂ ಸಹಾಯಕವಾಗುವ ಅಂಶಗಳನ್ನು ತಿಳಿಸಬೇಕು.
- ನಕಾರಾತ್ಮಕ ಹಾಗೂ ಪ್ರಚೋದನಕಾರಿ ಅಂಶಗಳನ್ನು ತಿಳಿಸಬಾರದು. ಉದಾ:- ಆತ್ಮಹತ್ಯೆ ಪ್ರಕರಣಗಳ ಕುರಿತು.
- ಪರೀಕ್ಷೆಗೆ ಸಂಬಂಧಿಸಿದ ವಿಷಯದ ಬಗ್ಗೆ ತಜ್ಞರೊಂದಿಗೆ ಮಾತಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸೂಕ್ತ.


Downloaded From:www.kpscvaani.com

# 14ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಬೆಂಗಳೂರು
ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru International Film Festival

**ಸತತವಾಗಿ ಬೆಂಗಳೂರಿನಲ್ಲಿ ಜರುಗುತ್ತಿರುವ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು ಕರ್ನಾಟಕದ ಕೀರ್ತಿಯನ್ನು ಜಗತ್ತಿನಲ್ಲಿ ಹೆಚ್ಚಿಸಿದೆ.**

ಗಂಗಾಧರ ಮೊದಲಿಯಾರ್

ಕರ್ನಾಟಕ ಕಳೆದೆರೆಡು ವರ್ಷಗಳಿಂದ ಹಲವು ವಿಶೇಷಗಳನ್ನು ಕಾಣುತ್ತಿದೆ. ಕನ್ನಡ ಚಿತ್ರರಂಗದ ಬಗ್ಗೆಯೇ ಹೇಳುವುದಾದರೆ, ಇಡೀ ಜಗತ್ತು ಇಂದು ಕನ್ನಡ ಚಿತ್ರರಂಗದ ಬಗ್ಗೆ ತಿರುಗಿ ನೋಡುತ್ತಿದೆ. ಕೆಜಿಎಫ್ ಮತ್ತು ಕಾಂತಾರ ಚಲನಚಿತ್ರಗಳು ಅಂತಹ ಸಾಧನೆಯನ್ನು ಮಾಡಿ ತೋರಿಸಿವೆ. 'ಕಾಂತಾರ' ವಿಶ್ವಸಂಸ್ಥೆಯಲ್ಲಿ ಪ್ರದರ್ಶನಗೊಳ್ಳುವ ಮೂಲಕ ಪರಿಸರ ಉಳಿಸಿಕೊಳ್ಳುವ ಮಹತ್ವದ ವಿಷಯವನ್ನು ಜಾಗತಿಕ ಮಟ್ಟದಲ್ಲಿ ತೋರಿಸುವ ಕೆಲಸವನ್ನು ಮಾಡುವ ಮೂಲಕ ಕನ್ನಡದ ಕೀರ್ತಿಯನ್ನು ಹೆಚ್ಚಿಸಿದೆ.

ಒಂದು ಕಾಲದಲ್ಲಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳು ಎಲ್ಲೇ ನಡೆಯಲಿ ಭಾರತವನ್ನು ಪ್ರತಿನಿಧಿಸುವ ಚಲನಚಿತ್ರಗಳಿಗಾಗಿ ಪಶ್ಚಿಮ ಬಂಗಾಳ, ಕೇರಳದತ್ತ ನೋಡಬೇಕಾದ ಪರಿಸ್ಥಿತಿ ಇತ್ತು. ಆದರೆ ಇಂದು ಎಲ್ಲೇ ಚಲನಚಿತ್ರೋತ್ಸವ ನಡೆದರೂ ಕನ್ನಡದ ಚಲನಚಿತ್ರಗಳನ್ನು ಪರಿಗಣಿಸಲೇ ಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಕನ್ನಡದಲ್ಲಿ ಅಂತಹ ಗುಣಮಟ್ಟದ ಅತ್ಯುತ್ತಮ ಚಲನಚಿತ್ರಗಳು ನಿರ್ಮಾಣವಾಗುತ್ತಿವೆ.

ಬೆಂಗಳೂರಿನಲ್ಲಿ 2023 ರ ಮಾರ್ಚ್ 23 ರಿಂದ 30 ರವರೆಗೆ ನಡೆದ 14 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಕನ್ನಡ ಚಿತ್ರೋದ್ಯಮದ ಸಾಧನೆಯನ್ನು ಜಗತ್ತಿಗೆ ತೋರಿಸುವ ಕನ್ನಡಿ ಇದ್ದಂತೆ. ಉದ್ಘಾಟನಾ ಚಲನಚಿತ್ರವನ್ನಾಗಿ "ಕಾಂತಾರ" ವನ್ನು ಪ್ರದರ್ಶಿಸುವ ಮೂಲಕ ಕನ್ನಡದಲ್ಲಿ ವಿಶ್ವಸಂದೇಶದ ಚಲನಚಿತ್ರಗಳು ತಯಾರಾಗುತ್ತಿವೆ ಎನ್ನವುದಕ್ಕೆ ಮುನ್ನುಡಿ ಹಾಡಿದಂತಿತ್ತು. ಅಲ್ಲದೆ ಛಾಯಾಗ್ರಹಣಕ್ಕಾಗಿ ದೇಶದ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾದ ವಿ.ಕೆ.ಮೂರ್ತಿ ಅವರು ಕನ್ನಡಿಗರು. ಹಿಂದಿ ಚಿತ್ರಗಳ ಮೂಲಕ ಅತ್ಯುತ್ತಮ ಚಲನಚಿತ್ರ ಛಾಯಾಗ್ರಾಹಕರೆನಿಸಿದ ಅವರು ದೇಶದ ಮೊದಲ ಸಿನಿಮಾಸ್ಕೋಪ್ ಚಿತ್ರವನ್ನು ನೀಡಿದವರು. ಅವರಿಗೆ ಇದು ಶತಮಾನೋತ್ಸವ ವರ್ಷ.

14 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ವಿ.ಕೆ.ಮೂರ್ತಿ ಅವರ ಸ್ಮರಣೆಗಾಗಿ ಕಾರ್ಯಕ್ರಮಗಳು ನಡೆದಿವೆ. ಹೆಸರಾಂತ ನಿರ್ದೇಶಕ, ಛಾಯಾಗ್ರಾಹಕ ಗೋವಿಂದ ನಿಹಲಾನಿ ಅವರು ವಿಚಾರಸಂಕಿರಣದಲ್ಲಿ ಭಾಗವಹಿಸಿ, ಪ್ಯಾಸ, ಸಾಹಿಬ್ ಬೀವಿ ಔರ್ ಗುಲಾಮ್, ಚೌದವೀ ಕಾ ಚಾಂದ್ ಮೊದಲಾದ ಚಿತ್ರಗಳಲ್ಲಿ ಮೂರ್ತಿ ಅವರ ಶಿಸ್ತಿನ ಕೆಲಸದ ಬಗ್ಗೆ ವಿವರಿಸಿದ್ದಾರೆ. ಮೂರ್ತಿ ಅವರು ಕನ್ನಡದಲ್ಲಿ ಎಸ್.ವಿ.ರಾಜೇಂದ್ರಸಿಂಗ್ ಅವರ ನಿರ್ದೇಶನದ "ಹೂವು ಹಣ್ಣು" ಚಿತ್ರಕ್ಕಾಗಿ ಕೆಲಸ ಮಾಡಿದ್ದಾರೆ.





Downloaded From:www.kpscvaani.com

ಬಹಳ ಹಿಂದೆ ಸುಚಿತ್ರಾ ಫಿಲಂ ಸೊಸೈಟಿಯು ಸರ್ಕಾರದ ನೆರವಿನಿಂದ ಚಿತ್ರೋತ್ಸವವನ್ನು ಏರ್ಪಡಿಸುತ್ತಿತ್ತು. ನಂತರದ ವರ್ಷಗಳಲ್ಲಿ ಸರ್ಕಾರವೇ ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವನ್ನು ಏರ್ಪಡಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. "ಬೆಂಗಳೂರಿನಲ್ಲಿ ಜಗತ್ತು" ಎನ್ನುವ ಶೀರ್ಷಿಕೆಯ ಮೂಲಕ ಈ ಚಿತ್ರೋತ್ಸವ ಸುಮಾರು 55 ರಾಷ್ಟ್ರಗಳಿಂದ ಪ್ರತೀ ವರ್ಷ 200 ಚಲನಚಿತ್ರಗಳನ್ನು ಆಯ್ಕೆ ಮಾಡಿ ತರಿಸಿ ಬೆಂಗಳೂರಿನ ಪ್ರೇಕ್ಷಕರಿಗೆ ನೀಡುತ್ತಿದೆ. ಇದು ನಿಜಕ್ಕೂ ಸಿನಿಮಾ ಪ್ರೇಮಿಗಳಿಗೆ ಹಬ್ಬ. ಗೋವಾ, ದೆಹಲಿ, ಮುಂಬೈ, ಕ್ಯಾನ್, ಕೆನಡಾ, ಪ್ಯಾರಿಸ್, ಜರ್ಮನಿ, ಮೊದಲಾದ ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಚಲನಚಿತ್ರೋತ್ಸವಗಳ ವೈಭವವನ್ನು ಓದಿ ಪುಳಕಿತರಾಗುತ್ತಿದ್ದ, ಅಲ್ಲಿಗೆ ಹೋಗಲಾಗದೆ, ಅತ್ಯುತ್ತಮ ಚಲನಚಿತ್ರಗಳನ್ನು ನೋಡುವ ಅವಕಾಶದಿಂದ ವಂಚಿತರಾದೆವಲ್ಲಾ ಎಂದು ಕೊರಗುತ್ತಿದ್ದವರಿಗೆ ಈಗ ಮನೆಬಾಗಿಲಲ್ಲೆ ವಿಶ್ವದ ಅತ್ಯುತ್ತಮ ಚಲನಚಿತ್ರಗಳನ್ನು ನೋಡುವ ಅವಕಾಶ ದೊರಕಿದೆ.

ಬೆಂಗಳೂರಿನ ಪ್ರೇಕ್ಷಕರ ಬಗ್ಗೆ ಇಡೀ ದೇಶದಲ್ಲಿ ಗೌರವವಿದೆ. ಇಲ್ಲಿ ಪ್ರೇಕ್ಷಕರು ಕೇವಲ ಪ್ರೇಕ್ಷಕರಾಗಿರದೆ, ವಿಮರ್ಶಕರೂ ಆಗಿದ್ದಾರೆ. ಇಡೀ ದೇಶದಲ್ಲಿ ಸಿನಿಮಾ ಎಲ್ಲೇ ತಯಾರಾಗಿರಲಿ ಅದು ಹಿಂದಿ, ತಮಿಳು, ತೆಲುಗು ಯಾವುದೇ ಭಾಷೆಯಾಗಿರಲಿ ಮೊದಲು ಬೆಂಗಳೂರಿನಲ್ಲಿ ಪ್ರದರ್ಶನವಾಗಲಿ ಎಂದು ನಿರ್ಮಾಪಕರು ಹಾತೊರೆಯುತ್ತಾರೆ. ಒಳ್ಳೆಯ ಚಿತ್ರಗಳಾದರೆ ಅದು ಯಾವುದೇ ಭಾಷೆಯದಾಗಿರಲಿ ಚಿತ್ರವನ್ನು ನೋಡುವ ಗುಣ ನಮ್ಮಲ್ಲಿದೆ. ಅಂತಹ ವಾತಾವರಣವಿರುವ ರಾಜಧಾನಿಯಲ್ಲಿ ವಿಶ್ವದ ಅತ್ಯುತ್ತಮ ಚಿತ್ರಗಳ ಗೊಂಚಲು ಒಮ್ಮೆಲೆ ತೆರೆದುಕೊಂಡಿರುವುದು ಚಲನಚಿತ್ರ ಅಧ್ಯಯನ ಶೀಲರಿಗೆ ಒಂದು ಅವಕಾಶ.

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ವಿಶ್ವಮಾನ್ಯತೆ ದೊರಕಿರುವುದು ಹೆಮ್ಮೆ ಪಡುವ ಸಂಗತಿ. ಕಳೆದ ವರ್ಷವೇ ಫಿಯಾಫಿ ಮಾನ್ಯತೆಯನ್ನು ದೊರಕಿಸಿಕೊಂಡ ಈ ಚಿತ್ರೋತ್ಸವಕ್ಕೆ ಈಗ ವಿಶ್ವಮಾನ್ಯತೆ ದೊರಕಿದೆ. ಹೀಗಾಗಿ ಈ ಚಿತ್ರೋತ್ಸವದಲ್ಲಿ ಭಾಗವಹಿಸಲು ದೇಶ ವಿದೇಶಗಳಿಂದ ನಿರ್ದೇಶಕರು ಆಗಮಿಸುತ್ತಾರೆ. ಈ ವರ್ಷ 14 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 50 ದೇಶಗಳ 200 ಅತ್ಯುತ್ತಮ ಚಲನಚಿತ್ರಗಳು ಪ್ರದರ್ಶನಗೊಂಡಿವೆ. ಈ ಬಾರಿ ಏಳು ಆಸ್ಕರ್ ಪ್ರಶಸ್ತಿ ಪಡೆದ "ಎವ್ವರಿಥಿಂಗ್ ಎವ್ವರಿವೇರ್ ಆಲ್ ಅಟ್ ಒನ್ಸ್" ಬೆಂಗಳೂರಿನ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿತು.

ಚಿತ್ರೋತ್ಸವದಲ್ಲಿ ಪ್ರತೀ ವರ್ಷ ಏಷಿಯನ್, ಇಂಡಿಯನ್ ಹಾಗೂ ಕನ್ನಡ ಚಲನಚಿತ್ರಗಳ ಸ್ಪರ್ಧಾ ವಿಭಾಗವಿರುತ್ತದೆ. ಈ ಮೂರು ವಿಭಾಗಗಳಲ್ಲಿ ತಲಾ ಮೂರು ಅತ್ಯುತ್ತಮ ಚಲನಚಿತ್ರಗಳಿಗೆ ಪ್ರಶಸ್ತಿ ನೀಡಲಾಗುತ್ತದೆ. ಏಷ್ಯಾದ ಅತ್ಯುತ್ತಮ ಚಲನಚಿತ್ರಗಳಿಗೆ ವೇದಿಕೆ ಕಲ್ಪಿಸುವ ಚಿತ್ರೋತ್ಸವ ಎಂದೇ ಬೆಂಗಳೂರು ಚಿತ್ರೋತ್ಸವವನ್ನು ಪರಿಗಣಿಸಲಾಗಿದೆ. ಈ ಸ್ಪರ್ಧೆಯಲ್ಲಿ ವಿಜೇತ ಚಿತ್ರಗಳಿಗೆ ನೀಡಲಾಗುವ ಬಹುಮಾನದ ಮೊತ್ತವನ್ನು ಇದೇ ವರ್ಷದಿಂದ ದ್ವಿಗುಣಗೊಳಿಸಿರುವುದಲ್ಲದೆ ಈ ವರ್ಷದಿಂದಲೇ ಚಲನಚಿತ್ರರಂಗದಲ್ಲಿ ಜೀವಮಾನ ಸಾಧನೆ ಮಾಡಿದ ಗಣ್ಯರೊಬ್ಬರಿಗೆ "ಜೀವಮಾನ ಸಾಧನೆ" ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಆರಂಭಿಸಲಾಗಿದೆ. ಈ ವರ್ಷ ಕನ್ನಡ ಚಿತ್ರರಂಗದ ಪೋಷಕ ನಟ ದೊಡ್ಡಣ್ಣ ಅವರಿಗೆ ಹತ್ತು ಲಕ್ಷ ರೂಪಾಯಿಗಳ ಈ ಪ್ರಶಸ್ತಿ ನೀಡಿರುವುದು ಮತ್ತೊಂದು ಹೆಮ್ಮೆಯ ಸಂಗತಿ.

ಚಲನಚಿತ್ರೋತ್ಸವ ನಡೆಯುವ ದಿನಗಳಲ್ಲಿ ಪ್ರತೀ ದಿನ ಚಲನಚಿತ್ರ ಮಾಧ್ಯಮ ಮತ್ತು ಉದ್ಯಮಕ್ಕೆ ಸಂಬಂಧಪಟ್ಟಂತೆ ತಜ್ಞರಿಂದ ಸಂವಾದ, ಉಪನ್ಯಾಸ, ಮಾಸ್ಟರ್ ಕ್ಲಾಸ್ ಮೊದಲಾದ ಕಾರ್ಯಕ್ರಮಗಳು ಅಕಾಡೆಮಿಕ್ ಆಗಿ ಚಲನಚಿತ್ರರಂಗವನ್ನು ಬೆಳೆಸುವ ಪ್ರಯತ್ನವಾಗಿದೆ. ಶತಮಾನೋತ್ಸವ ಸ್ಮರಣೆಯಲ್ಲಿ ವಿ.ಕೆ.ಮೂರ್ತಿ ಅವರ ಬಗ್ಗೆ ಚರ್ಚೆ ಖ್ಯಾತ ನಿರ್ದೇಶಕ, ಛಾಯಾಗ್ರಾಹಕ, ನಿರ್ಮಾಪಕ ಗೋವಿಂದ ನಿಹಲಾನಿ ಮಾತನಾಡಿದರು. ಯಶಸ್ವಿ ಚಲನಚಿತ್ರಗಳಾದ ಬಾಹುಬಲಿ ಮತ್ತು ಆರ್‌ಆರ್‌ಆರ್ ಚಲನಚಿತ್ರಗಳ ಚಿತ್ರಕಥೆಗಾರ ಕೆ.ವಿ.ವಿಜಯೇಂದ್ರ ಪ್ರಸಾದ್ ಅವರಿಂದ ಮಾಸ್ಟರ್ ಕ್ಲಾಸ್. ಆರ್‌ಆರ್‌ಆರ್ ಚಿತ್ರಕಥೆ: ತೆರೆಮರೆಯಲ್ಲಿ ಎಂಬ ವಿಷಯದ ಬಗ್ಗೆ ನಡೆದ ಸಂವಾದ ಹೆಚ್ಚು ಆಕರ್ಷಣೀಯವೆನಿಸಿತು.

ಶ್ರೀಲಂಕಾದ ಚಲನಚಿತ್ರ ನಿರ್ದೇಶಕ, ವಿಮರ್ಶಕ ವಿಮುಕ್ತಿ ಜಯಸುಂದರ ಅವರಿಂದ ಸಿನಿಮಾದಲ್ಲಿ ದೃಶ್ಯಸಾದೃಶ್ಯದ ಬಗ್ಗೆ ಮಾಸ್ಟರ್ ಕ್ಲಾಸ್. ಐಪಿ ಮತ್ತು ಕಾಪಿ ಇಂಟಲೆಕ್ಚುಯಲ್ ಪ್ರಾಪರ್ಟಿ ಮತ್ತು ಸಿನಿಮಾದಲ್ಲಿ ಕಾಪಿರೈಟ್ ಕುರಿತು ಉಪನ್ಯಾಸ/ಚರ್ಚೆ, ಚಲನಚಿತ್ರರಂಗದಲ್ಲಿ ಅಪಾರ ಸಾಧನೆ ಮೆರೆದ ದಿಗ್ಗಜರ ಶತಮಾನೋತ್ಸವ ಸ್ಮರಣೆ: ದಿವಂಗತ ಎಂ.ವಿ.ಕೃಷ್ಣಸ್ವಾಮಿ, ದಿವಂಗತ ಎಸ್.ಕೆ.ಎ.ಚಾರಿ ಮತ್ತು ದಿವಂಗತ ನರಸಿಂಹರಾಜು ಅವರುಗಳ ಬಗ್ಗೆ ಒಂದು ಚರ್ಚೆ, ಕ್ರಿಯಾಶೀಲತೆಯ ಗಡಿ ಗುರುತಿಸಿ, ಯಶಸ್ಸಿನ ಮೆಟ್ಟಿಲಮೇಲೆ: ಯಶಸ್ವಿ ನಿರ್ದೇಶಕ, ಮತ್ತು ನಾಯಕ ನಟ ರಿಷಬ್ ಶೆಟ್ಟಿ ಹಾಗೂ ನಿರ್ಮಾಪಕ ವಿಜಯ್ ಕಿರಂಗದೂರ್ ಅವರೊಂದಿಗೆ ಸಂವಾದ ನಡೆಯಿತು. ಇರಾನಿನ ಖ್ಯಾತ ನಿರ್ದೇಶಕ ಜಾಫರ್ ಪನಾಹಿ ಅವರ ಪುತ್ರ ಲೇಖಕ ಮತ್ತು ನಿರ್ದೇಶಕ ಪನಾಪನಾಹಿ ಅವರಿಂದ ಮಾಸ್ಟರ್ ಕ್ಲಾಸ್ ನಡೆಯಿತು. ಜಾಫರ್ ಪನಾಹಿ ಅವರ ಚಲನಚಿತ್ರ ಪ್ರದರ್ಶನಗೊಂಡಿತು.

ಮಿನ್ನಾರ ಕನವು (1997), ಸಿಟಿಜನ್ ( 2001), ಕನ್ನತ್ತಿಲ್ ಮುತ್ತಮಿಟ್ಟಾಲ್ (2002), ಬಾಯ್ಸ್ (2003) ಚಿತ್ರಗಳ ಖ್ಯಾತಿಯ ರವಿ ಕೆ.ಚಂದ್ರನ್ ಅವರಿಂದ ಸಿನಿಮಾಟೋಗ್ರಫಿ ಕುರಿತು ಉಪನ್ಯಾಸ. ಮೆಟಾವರ್ಸ್ ಸಿನಿಮಾ ತಂತ್ರಜ್ಞಾನದ ಬಗ್ಗೆ ಇದೇ ಮೊದಲಬಾರಿಗೆ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಾಸ್ಟರ್ ಕ್ಲಾಸ್ ನಡೆಯಿತು. "ಸೌಂಡ್ ಡಿಸೈನ್ ಇನ್ ಸಿನಿಮಾ" ರಂಗನಾಥ ರವಿ ಅವರಿಂದ ಉಪನ್ಯಾಸ. ಜಲ್ಲಿಕಟ್ಟು, ವಾಜೀರ್, ಬ್ಯಾಂಗ್ ಬ್ಯಾಂಗ್ ಸಿನಿಮಾ ಖ್ಯಾತಿ. ಕ್ರಿಟಿಕ್ಸ್ ವೀಕ್, ದೇಶ ಕೇಂದ್ರಿತ ದಕ್ಷಿಣ ಕೊರಿಯಾ ಚಿತ್ರಮಾಲೆ, ನಿರ್ದೇಶಕ ಬಗ್ಗೆ ಅಧ್ಯಯನ– ಹಾಂಕಾಂಗ್ ನಿರ್ದೇಶಕ ವಾಂಗ್ ಕರ್ ವೀ ಅವರ ಚಿತ್ರಮಾಲಿಕೆ ಆಕರ್ಷಣೀಯವೆನಿಸಿತು. ದಕ್ಷಿಣ ಆಫ್ರಿಕಾ ಸಿನಿಮಾದ ಪಿತಾಮಹ ಔಸ್ಮಾನೆ ಸೆಂಬೆನೆ ಅವರ ಚಲನಚಿತ್ರಗಳ ಪುನರಾವಲೋಕನ ಕೂಡ ಇಲ್ಲಿ ಆಕರ್ಷಣೀಯವೆನಿಸಿತು. ■


Downloaded From:www.kpscvaani.com



# ಜೀವಿಗಳ ಉಳಿವಿಗೊಂದು **ಜಾಗೃತಿಯ ಅಭಿಯಾನ**

**ಸಕಲ ಜೀವರಾಶಿಗಳು ಸೇರಿದಂತೆ ನಮ್ಮ ಉಳಿವಿಗಾಗಿ ಭೂಮಿ ಕಲುಷಿತಗೊಳ್ಳದಂತೆ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.**

ಡಾ.ಕೆ. ಪುಟ್ಟಸ್ವಾಮಿ

ವಯಸ್ಸಾದ ಹಿರಿಯರು ಹೇಳುವ ಕೆಲವು ಸಾಮಾನ್ಯ ಹೇಳಿಕೆಗಳು ಹೀಗಿರುತ್ತವೆ.....

" ನಮ್ಮ ಕಾಲ ಹೀಗಿರಲಿಲ್ಲ. ಸಕಲವೂ ಬದಲಾಗಿದೆ..."

"ನಮ್ಮ ಕಾಲದಲ್ಲಿ ಕಾಲಕಾಲಕ್ಕೆ ಮಳೆಯಾಗುತ್ತಿತ್ತು.. ಇಷ್ಟು ಅತಿಯಾದ ಮಳೆ ಅಥವಾ ಅಲ್ಪ ಮಳೆ ಅಥವಾ ಅಕಾಲಿಕ ಮಳೆ ಸಂಭವಿಸುತ್ತಿರಲಿಲ್ಲ"

"ಬೆಂಗಳೂರು ಬೇಸಿಗೆಯಲ್ಲೂ ತಂಪಾಗಿರುತ್ತಿತ್ತು. ಈಗ ಎ ಸಿ ಇಲ್ಲದೆ ಬದುಕಲಾಗದ ಕಾಲ ಬಂದಿದೆ"

"ಸರ್ಕಸ್ ಅಥವಾ ನಾಗರಹೊಳೆ, ಬಂಡೀಪುರದಲ್ಲಿ ನೋಡುತ್ತಿದ್ದ ಆನೆ, ಚಿರತೆ, ಕರಡಿಗಳು ಈಗ ನಗರದ ಅಂಚಿನಲ್ಲಿ ಸಾಮಾನ್ಯವಾಗಿವೆ"

" ಇಷ್ಟು ದುರ್ಗಂಧ ಗಾಳಿ, ಮಲಿನಗೊಂಡ ಕೆರೆ, ಬೇಸಿಗೆಯಲ್ಲಿ ಬತ್ತಿದ ತೊರೆ ಹಿಂದೆ ನೋಡೇ ಇರಲಿಲ್ಲ."

ಮೇಲಿನ ಹೇಳಿಕೆಗಳೆಲ್ಲವೂ ಭೂತಕಾಲದಲ್ಲೇ ಎಲ್ಲವೂ ಚೆನ್ನಾಗಿತ್ತೆಂದು ಭಾವಿಸುವ ಹಿರಿಯರ ಹಳಹಳಿಕೆಯ ಮಾತಂತೆ ಕೇಳಬಹುದು. ಅಥವಾ ಆಧುನಿಕ ಕಾಲಕ್ಕೆ ಮುಖಾಮುಖಿಯಾಗಲಿಚ್ಛಿಸದ ಹಿರಿಯರ ಅಸಾಹಕತೆಯೆಂದು ಹೊಸ ಪೀಳಿಗೆ ತಳ್ಳಿಹಾಕಬಹುದು. ಆದರೆ ಮೇಲಿನ ಹಳಹಳಿಕೆಯಲ್ಲೂ ವಾಸ್ತವಾಂಶಗಳು ಇರುವುದು ನಮ್ಮ ಕಾಲದಲ್ಲಿ ನಡೆಯುತ್ತಿರುವ ಅನೇಕ ಘಟನೆಗಳು ಪುಷ್ಟೀಕರಿಸುತ್ತಿರುವುದನ್ನು ತಳ್ಳಿಹಾಕಲಾಗದು. ಕೆಲವು ಉದಾಹರಣೆಗಳನ್ನು ನೋಡೋಣ.

ವಾಯು ಮಂಡಲದಲ್ಲಿ ಹೆಚ್ಚುತ್ತಿರುವ ಉಷ್ಣಾಂಶದಿಂದ ಸಮುದ್ರದ ನೀರಿನ ಮಟ್ಟ ಏರುತ್ತಿರುವುದನ್ನು ಉತ್ತರ ಅಂಡಮಾನ್ ದ್ವೀಪವಾಸಿಗಳು ಗಮನಿಸುತ್ತಿದ್ದಾರೆ.

ಕರ್ನಾಟಕದ ಬಂಡೀಪುರ ಕಾಡುಗಳಲ್ಲಿ 2019ರಲ್ಲಿ ಬಿದ್ದ ಕಾಡ್ಗಿಚ್ಚು ಹಲವು ದಿನಗಳವರೆಗೆ ಉರಿಯಿತು. ಅರಣ್ಯ ಇಲಾಖೆಯ ಹೋರಾಟಗಳಿಗೂ ಮಣಿಯಲಿಲ್ಲ. ಅಮೂಲ್ಯವಾದ ಅರಣ್ಯ ನಾಶವಾಯಿತು. ವನ್ಯಜೀವಿಗಳು ನೆಲೆತಪ್ಪಿದವು. ಘಟನೆ ಇನ್ನೂ ಹಸಿರಾಗಿರುವಾಗಲೇ ಈ ವರ್ಷವೂ ಅನೇಕ ಕಾಡ್ಗಿಚ್ಚು ಪ್ರಕರಣಗಳು ವರದಿಯಾಗಿವೆ.

2020ರಲ್ಲಿ ಬಿದ್ದ ಅತಿಯಾದ ಮಳೆಯಿಂದ ಕೊಡಗಿನ ಕಣಿವೆಗಳು ಕುಸಿದು,



Downloaded From:www.kpscvaani.com

ತೋಟಗಳು ನಾಶವಾದವು. ಕಟ್ಟಡಗಳು ನೆಲಸಮವಾದವು. ಅಮೂಲ್ಯ ಮೇಲ್ಮೈ ಮಣ್ಣು ಕೊಚ್ಚಿಹೋಯಿತು. ಪಯಸ್ವಿನಿ ನದಿಯು ತನ್ನ ಪಾತ್ರವನ್ನೇ ಬದಲಾಯಿಸಿತು. ಪರಿಸರ ಪ್ರವಾಸೋದ್ಯಮ ನೆಲಕಚ್ಚಿತು.

ಹರ್ಯಾಣದ ಹುಲ್ಲುಗಾವಲುಗಳು ಅನೇಕ ಶತಮಾನಗಳಿಂದ ಜಿಂಕೆ ಜಾತಿಗೆ ಸೇರಿದ ಕೃಷ್ಣಮೃಗಕ್ಕೆ ಆಶ್ರಯದಾಣವಾಗಿದ್ದವು. ಅರಣ್ಯದಷ್ಟೆ ಶ್ರೀಮಂತವಾದ ಹುಲ್ಲುಗಾವಲುಗಳನ್ನು ಬೀಳುಭೂಮಿ ಎಂದು ಸಾಮಾನ್ಯವಾಗಿ ಪರಿಗಣಿಸುತ್ತಾರೆ. ಅವುಗಳನ್ನು ಅಕ್ರಮವಾಗಿ ಆಕ್ರಮಿಸಿಕೊಂಡು ಬೇಸಾಯಕ್ಕೆ ಬಳಸಿದ್ದಾರೆ. ಕಾರ್ಖಾನೆಗಳನ್ನು ಆರಂಭಿಸಿದ್ದಾರೆ. ರಸ್ತೆ ಮತ್ತು ರೈಲ್ವೇ ಹಳಿಗಳು ಅವುಗಳನ್ನು ಸೀಳಿಕೊಂಡು ಹೋಗುತ್ತವೆ. ತಾಪಮಾನ ಮತ್ತು ಬರಗಾಲ ಹೆಚ್ಚಿದಂತೆಲ್ಲ ಹುಲ್ಲುಗಾವಲುಗಳು ಮತ್ತು ಕೃಷ್ಣಮೃಗಗಳು ಅಪಾಯಕ್ಕೆ ಸಿಲುಕಿವೆ.

ಜಗತ್ತಿನ ಅತ್ಯಂತ ಮಲಿನಗೊಂಡ ನಗರಗಳಲ್ಲಿ ಮುಂಬೈ ಸಹ ಒಂದು. ಕೈಗಾರಿಕೆಗಳ ಹೊಗೆ, ವಾಹನದಟ್ಟಣೆ, ಉರಿಸುವ ಕಸ, ಕಟ್ಟಡ ನಿರ್ಮಾಣದ ಧೂಳು ಮತ್ತು ಸಂಸ್ಕರಿಸದ ಚರಂಡಿ ರೊಚ್ಚು, ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿವೆ. ಅಧಿಕ ಇಂಗಾಲವನ್ನು ಹೀರಿಕೊಳ್ಳುವ, ಪ್ರವಾಹ ಮತ್ತು ಭೂಸವಕಳಿಯನ್ನು ತಡೆಯುವ ಮುಂಬೈನ ನೈಸರ್ಗಿಕ ಕರಾವಳಿ ರಕ್ಷಣಾಪಡೆಯೆನಿಸಿದ ಕಾಂಡ್ಲಾ ವನಗಳು (Mangrove Forests)ಈಗ ಮರೆಯಾಗುತ್ತಿವೆ. ಹವಾಮಾನ ಬದಲಾವಣೆಯಿಂದ ಚಂಡಮಾರುತ, ಸುನಾಮಿ, ಅತಿಯಾದ ಮಳೆ, ಪ್ರವಾಹ ಹೆಚ್ಚುತ್ತಿವೆ.

ಹೆಚ್ಚುತ್ತಿರುವ ನೈಸರ್ಗಿಕ ಸಂಪನ್ಮೂಲಗಳ ಬಳಕೆ, ಕೈಗಾರಿಕಾ ಚಟುವಟಿಕೆ, ತ್ಯಾಜ್ಯಗಳ ಸಂಸ್ಕರಣೆಯ ಬಗ್ಗೆ ಕಾಳಜಿ ಇಲ್ಲದಿರುವಿಕೆ, ಕೃಷಿ, ದಿನಬಳಕೆ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ರಾಸಾಯನಿಕಗಳ ಅತಿ ಬಳಕೆ ಭೂಮಿಯಲ್ಲಿ ಹವಾಮಾನ ವೈಪರಿತ್ಯಕ್ಕೆ ಕಾರಣಗಳಾಗಿವೆ. ಭೂಮಿ ಬಿಸಿಯಾದರೆ, ಸಮುದ್ರಗಳು ಆ ಶಾಖವನ್ನು ಹೀರುತ್ತವೆ. ಅದರಿಂದ ನೀರಿನ ಮಟ್ಟ ಏರುತ್ತದೆ. ನೀರ್ಗಲ್ಲು ರಾಶಿ ಕರಗುತ್ತದೆ. ಪರಿಣಾಮ ಸಮುದ್ರಗಳಲ್ಲಿ ನೀರಿನ ಪ್ರಮಾಣ ಹೆಚ್ಚುತ್ತದೆ. ನೀರು ಬಿಸಿಯಾದರೆ ಹವಳ ದಿಬ್ಬಗಳು ತಮ್ಮೆಲ್ಲ ಬಣ್ಣ ಮತ್ತು ಜೀವಿಗಳನ್ನು ಕಳೆದುಕೊಳ್ಳುತ್ತವೆ. ಶಾಂತಸಾಗರದ ದ್ವೀಪಗಳ ವನ್ಯಜೀವಿ ಮತ್ತು ಜನರು ಹವಾಮಾನ ಬದಲಾವಣೆಯ ಮೊದಲ ಬಲಿಪಶುಗಳಾಗಿದ್ದಾರೆ. ಭಾರತದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ 2100ನೇ ಇಸವಿಯ ಹೊತ್ತಿಗೆ ಜನರಿಗೆ ಬದುಕಲು ಸಾಧ್ಯವಾಗದಷ್ಟು ಪರಿಸರ ಹದಗೆಡಬಹುದು ಎಂದು ಅಂದಾಜಿಸಲಾಗಿದೆ.

ಇವು ನಮ್ಮ ಭೂಮಿಯಲ್ಲಿ ನಡೆಯುತ್ತಿರುವ ಅಪಾಯಕಾರಿ ಘಟನೆಗಳ ಕೆಲವು ಉದಾಹರಣೆಗಳು ಮಾತ್ರ. ಈ ಸೂಚನೆಗಳು ಏನೋ ಭಯಂಕರ ತಪ್ಪಾಗಿರುವುದನ್ನು ಹೇಳುತ್ತಿವೆ. ಇಂದು ಸಕಲವೂ ಬದಲಾಗಿದೆ. ಈ ಎಲ್ಲ ಬದಲಾವಣೆಗಳ ಹಿನ್ನೆಲೆಯಲ್ಲಿ ಮಾನವನ ಚಟುವಟಿಕೆಗಳಿವೆ. ಅವನ ಭೋಗದ ದಾಹವಿದೆ. ಮುಂದಿನದನ್ನು ಯೋಚಿಸದ ಅವಿವೇಕತನವಿದೆ. ಇಂದು ನಾವು ಮಾನವ ಪಲ್ಲಟಗೊಳಿಸಿದ ಬದಲಾವಣೆಯಾಗಿರುವ ಜಗತ್ತಿನಲ್ಲಿ ಬದುಕಿದ್ದೇವೆ. ಈ ಬದಲಾವಣೆಗಳಲ್ಲಿ ಕೆಲವನ್ನು ನೋಡಬಹುದು, ಅನುಭವಿಸಬಹುದು. ಹಲವು ನಮ್ಮ ಅರಿವಿಗೆ ನಿಲುಕದವು. ಕಾಲಾವಕಾಶ ಇನ್ನೂ ಇರುವಾಗಲೇ ಸರಿಪಡಿಸಬೇಕಾದ ಪ್ರಮಾದಗಳಿವು. ನಾವೆಲ್ಲರೂ ಒಟ್ಟಾಗಿ ನಮ್ಮ ಭೂಮಿಯನ್ನು ಸಂರಕ್ಷಿಸಿ, ಬದುಕಲು ಸುಂದರ ತಾಣವಾಗಿ ರೂಪಿಸಬಹುದು ಎಂಬ ಆಶಾಭಾವವೂ ಇದೆ. ಮನುಷ್ಯರೂ ಸೇರಿದಂತೆ ಸಕಲ ಜೀವರಾಶಿಗೂ ಅಗತ್ಯವಾದ ಉತ್ತಮ ಜಗತ್ತನ್ನು ರೂಪಿಸಲು ಒಟ್ಟಾಗಿ ನಾವು ನಮ್ಮ ಭೂಮಿಯನ್ನು ಉತ್ತಮ ಸ್ಥಿತಿಗೆ ತರಲು ಜಗತ್ತಿನಾದ್ಯಂತ ಜಾಗೃತಿ ಮೂಡಿಸುವ ಅನೇಕ ಕಾರ್ಯಕ್ರಮಗಳು ಆರಂಭವಾಗಿವೆ. ಅಂಥ ಪ್ರಮುಖ ಜಾಗೃತಿಯ ಕಾರ್ಯಕ್ರಮಗಳಲ್ಲಿ "ವಿಶ್ವ ಭೂಮಿ"ದಿನದ ಆಚರಣೆಯೂ ಒಂದು.

### ಏನಿದು ವಿಶ್ವ ಭೂಮಿ ದಿನ?

ಆಧುನಿಕ ಕಾಲದಲ್ಲಿ ವಿಶ್ವದಾದ್ಯಂತ ಪರಿಸರ ಸಂರಕ್ಷಣೆಯ ಆಂದೋಲನವು ಉದಯವಾದ ಚಾರಿತ್ರಿಕ ಸಂದರ್ಭದ ವಾರ್ಷಿಕಾಚರಣೆಯೇ ವಿಶ್ವ ಭೂದಿನ. 1970ರಲ್ಲಿ ಆರಂಭವಾದ ಈ ದಿನವನ್ನು ಪ್ರತಿ ವರ್ಷ ಏಪ್ರಿಲ್ 22ರಂದು ವಿಶ್ವದಾದ್ಯಂತ 193 ರಾಷ್ಟ್ರಗಳು ಆಚರಿಸುತ್ತವೆ. ಪರಿಸರ ಸಂರಕ್ಷಣೆಯ ಆಂದೋಲನದಲ್ಲಿ ಮಾನವ ಸಾಧಿಸಿದ ಪ್ರಗತಿಯನ್ನು ಗೌರವಿಸಲು ಮತ್ತು ಮುಖ್ಯವಾಗಿ ಮುಂದಿನ ಪೀಳಿಗೆಗೆ ಈ ಭೂಮಿಯನ್ನು ಸುರಕ್ಷಿತವಾಗಿ ಒಪ್ಪಿಸಲು ಭೂಮಿಯ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಅಗತ್ಯದ ಬಗ್ಗೆ ಜನಜಾಗೃತಿ ಮೂಡಿಸುವ ಮತ್ತು ಆ ನಿಟ್ಟಿನಲ್ಲಿ ಹಾಕಿಕೊಳ್ಳಬೇಕಾದ ರೂಪುರೇಷೆಗಳನ್ನು ಜಗತ್ತಿನ ಮುಂದಿಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ಇದರ ಹೊಣೆ ಹೊತ್ತಿರುವ ಅರ್ತ್‌ಡೇ.ಒಆರ್‌ಜಿ (EARTHDAY.ORG) ಜಾಗತಿಕ ಸಂಸ್ಥೆಯು ಪ್ರತಿ ವರ್ಷ ನಡೆಯಬೇಕಾದ ಕಾರ್ಯಕ್ರಮಗಳನ್ನು ರೂಪಿಸುತ್ತದೆ. 193 ರಾಷ್ಟ್ರಗಳ ಸುಮಾರು ನೂರು ಕೋಟಿ ಸದಸ್ಯರು ಜಗತ್ತಿನಾದ್ಯಂತ ಈ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ.





Downloaded From:www.kpscvaani.com

**ವಿಶ್ವ ಭೂಮಿ ದಿನದ ಆರಂಭದ ಹಿನ್ನೆಲೆ**

ಅಪರಿಮಿತವಾದ ಕೈಗಾರಿಕಾ ಚಟುವಟುಕೆ, ಭೋಗವಸ್ತುಗಳ ಉತ್ಪಾದನೆಯಲ್ಲಿ ನಿರತವಾಗಿದ್ದ ಅಮೆರಿಕ ಸಂಯುಕ್ತ ಸಂಸ್ಥಾನವು ಸೃಷ್ಟಿಸುತ್ತಿದ್ದ ಹಲವು ಬಗೆಯ ಮಾಲಿನ್ಯಗಳು ಮತ್ತು ಅವುಗಳ ಭೀಕರ ಪರಿಣಾಮಗಳು 1960ರ ದಶಕದಲ್ಲಿ ಜನರು ಮತ್ತು ವಿಜ್ಞಾನಿಗಳಿಗೆ ಅರಿವಾಗತೊಡಗಿದವು. ರೇಷಲ್ ಕಾರ್ಸನ್ ಎಂಬ ಸಾಗರ ವಿಜ್ಞಾನಿ ಅಮೆರಿಕದ ಕೃಷಿ ಮತ್ತು ಕೈಗಾರಿಕಾ ಚಟುವಟಿಕೆಗಳು ಸುರಿಯುತ್ತಿದ್ದ ವಿಷದ ರಾಸಾಯನಿಕ ಪರಿಣಾಮಗಳನ್ನು ಕುರಿತು ಬರೆದ " ದಿ ಸೈಲೆಂಟ್ ಸ್ಪ್ರಿಂಗ್" ಕೃತಿಯು ಪರಿಸರ ಸಂರಕ್ಷಣೆಯ ಬಗ್ಗೆ ಜನಜಾಗೃತಿಯನ್ನು ಹುಟ್ಟು ಹಾಕಿತು. ಮಾಲಿನ್ಯ ಮತ್ತು ಜನಾರೋಗ್ಯದ ನಡುವಿನ ಸಂಬಂಧಗಳ ಚರ್ಚೆಗಳು ಮುನ್ನೆಲೆಗೆ ಬಂದು ನಂತರ ಇಡೀ ಜೀವ ವ್ಯವಸ್ಥೆಯ ವಿರುದ್ಧ ಆಧುನಿಕ ಉತ್ಪಾದನಾ ಚಟುವಟಿಕೆಗಳು, ಕೃಷಿ, ಕೈಗಾರಿಕಾ ನೀತಿಗಳು ನಿಂತಿರುವ ವಾಸ್ತವಾಂಶಗಳು ಹೆಚ್ಚು ಚರ್ಚೆಗೊಳಗಾದವು. ಈ ಅರಿವು ನಿಧಾನವಾಗಿ ಹಲವು ರಾಜಕೀಯ ನಾಯಕರನ್ನೂ ಪ್ರಭಾವಿಸಿದವು.

ಅಮೆರಿಕದ ವಿಸ್‌ಕಾನ್ಸಿನ್ ಪ್ರಾಂತ್ಯದ ಸೆನೆಟರ್ ಆಗಿದ್ದ ಗೇಲಾರ್ಡ್ ನೆಲ್ಸನ್ ಅವರು ಈ ಆಂದೋಲನದಿಂದ ಸ್ಫೂರ್ತಿಗೊಂಡು ಹಾರ್ವರ್ಡ್ ವಿಶ್ವ ವಿದ್ಯಾಲಯದ ಪದವಿ ವಿದ್ಯಾರ್ಥಿ ಡೆನಿಸ್ ಹೇಸ್ ಜೊತೆ ಸೇರಿ 1970ರ ಏಪ್ರಿಲ್ 22ರಂದು ಮೊದಲ ಭೂಮಿ ದಿನವನ್ನು ಅಮೆರಿಕದಾದ್ಯಂತ ವ್ಯವಸ್ಥೆಗೊಳಿಸಿದರು. ಸುಮಾರು 20 ಲಕ್ಷ ಅಮೆರಿಕನ್ನರು ಪಾಲ್ಗೊಂಡಿದ್ದ ಆಚರಣೆಯಲ್ಲಿ ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಸಿಕೊಡಲಾಯಿತು. ಈ ವಾರ್ಷಿಕಾಚರಣೆಗಳು ಅಮೆರಿಕದ ಆಡಳಿತ ನೀತಿಯ ಮೇಲೆ ಪರಿಣಾಮ ಬೀರಿ "ಶುದ್ಧ ವಾಯು ಕಾಯ್ದೆ", "ಅಳಿವಿನಂಚಿನಲ್ಲಿರುವ ಪ್ರಭೇದಗಳ ಸಂರಕ್ಷಣಾ ಕಾಯ್ದೆ"ಯಂಥ ನೀತಿಗಳು ಜಾರಿಯಾದವು.

ಅಮೆರಿಕಕ್ಕೆ ಸೀಮಿತವಾಗಿದ್ದ ಈ ಆಚರಣೆಯನ್ನು ಹೇಯ್ಸ್ ಅವರು 1990ರಲ್ಲಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು. 1990ರಲ್ಲಿ 141 ರಾಷ್ಟ್ರಗಳಲ್ಲಿ ವಿಶ್ವ ಭೂಮಿ ದಿನವನ್ನು ವ್ಯವಸ್ಥೆಗೊಳಿಸಿದರು. ಅಭೂತಪೂರ್ವ ಯಶಸ್ಸು ಕಂಡ ಈ ಕಾರ್ಯಕ್ರಮಕ್ಕೆ ವರ್ಷ ವರ್ಷವೂ ಅನೇಕ ರಾಷ್ಟ್ರಗಳು ಸೇರಿಕೊಂಡವು. 2016ರಂದು ನಡೆದ ವಿಶ್ವ ಭೂಮಿ ದಿನಾಚರಣೆಯಂದು ಅಮೆರಿಕ, ಬ್ರಿಟನ್, ಚೀನಾ, ಭಾರತವೂ ಸೇರಿದಂತೆ 120 ರಾಷ್ಟ್ರಗಳು ಹವಾಮಾನ ವೈಪರಿತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ತಮ್ಮ ನೀತಿಗಳನ್ನು ರೂಪಿಸಿಕೊಳ್ಳಲು ಪ್ರಸಿದ್ಧ "ಪ್ಯಾರಿಸ್ ಒಡಂಬಡಿಕೆ"ಗೆ ಸಹಿ ಹಾಕಿದವು. ವಿಶ್ವ ಭೂದಿನಾಚರಣೆಯಲ್ಲಿ ಇದೊಂದು ದೊಡ್ಡ ಗೆಲುವು. 2020ರಲ್ಲಿ ಜಗತ್ತಿನ ನೂರು ಕೋಟಿ ಜನರು ವಿಶ್ವ ಭೂಮಿ ದಿನದ ಸುವರ್ಣ ಮಹೋತ್ಸವದಲ್ಲಿ ಪಾಲ್ಗೊಂಡರು. ಇದು ಜಗತ್ತಿನ ಅತ್ಯಂತ ಬೃಹತ್ ಆನ್‌ಲೈನ್ ಜನಸಂಘಟನೆಯ ಸಮಾವೇಶವೆನಿಸಿತ್ತು.

**ವಿಶ್ವ ಭೂಮಿ ದಿನ ಒಂದು ದಿನದ ಆಚರಣೆಯಲ್ಲ. ಅದರ ಬೆಂಬಲಿಗರು ಜಗತ್ತಿನಾದ್ಯಂತ ನಡೆಸುವ ಅನುದಿನದ ಆಚರಣೆ. ಇದರ ಬೆಂಬಲಿಗರು ಅಥವಾ ಕಾರ್ಯಕರ್ತರು ಸುಸ್ಥಿರ ಭೂಮಿಯ ಅಭಿವೃದ್ಧಿಗಾಗಿ ಹಲವು ಮುಖ್ಯ ಕ್ಷೇತ್ರಗಳಲ್ಲಿ ಕಾರ್ಯತತ್ಪರರಾಗುತ್ತಾರೆ.**

**ಭೂಮಿ ದಿನದ ಪ್ರಮುಖ ಕಾರ್ಯಗಳು**

ವಿಶ್ವ ಭೂಮಿ ದಿನ ಒಂದು ದಿನದ ಆಚರಣೆಯಲ್ಲ. ಅದರ ಬೆಂಬಲಿಗರು ಜಗತ್ತಿನಾದ್ಯಂತ ನಡೆಸುವ ಅನುದಿನದ ಆಚರಣೆ. ಇದರ ಬೆಂಬಲಿಗರು ಅಥವಾ ಕಾರ್ಯಕರ್ತರು ಸುಸ್ಥಿರ ಭೂಮಿಯ ಅಭಿವೃದ್ಧಿಗಾಗಿ ಹಲವು ಮುಖ್ಯ ಕ್ಷೇತ್ರಗಳಲ್ಲಿ ಕಾರ್ಯತತ್ಪರರಾಗುತ್ತಾರೆ. ಅವುಗಳ ಸ್ಥೂಲ ನೋಟ ಇಂತಿದೆ.

ಜನಪ್ರತಿನಿಧಿಗಳ ಜೊತೆ ಸಂಪರ್ಕ(ವಕಾಲತ್ತು): ಈ ಸಂಸ್ಥೆಯ ಕಾರ್ಯಕರ್ತರು ಸ್ಥಳೀಯ ಅಥವಾ ರಾಷ್ಟ್ರದ ಪರಿಸರ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳನ್ನು ಸಂಪರ್ಕಿಸಿ ಅವರಿಗೆ ಮಾಹಿತಿ ನೀಡಿ ಅಗತ್ಯ ನೀತಿಗಳ ಜಾರಿಗೆ ಒತ್ತಾಯಿಸುತ್ತಾರೆ.

ಹವಾಮಾನ ಬದಲಾವಣೆ: ಹವಾಮಾನ ಬದಲಾವಣೆಯ ಪರಿಣಾಮಗಳು, ಅದರ ಕಾರಣಗಳು ಮತ್ತು ಅದನ್ನು ತಗ್ಗಿಸುವ ನಿಟ್ಟಿನಲ್ಲಿ ಅನುಸರಿಸಬಹುದಾದ ಮಾರ್ಗೋಪಾಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

ಸಂರಕ್ಷಣೆ ಮತ್ತು ಜೀವಿಗಳು: ಕಾರ್ಯಕರ್ತರು ವಿಶ್ವದ ಜೀವವೈವಿಧ್ಯದ ಸಂರಕ್ಷಣೆಯ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಾರೆ. ಅಳಿವಿನಂಚಿನಲ್ಲಿರುವ ಜೀವಿಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವರು.

ಶಿಕ್ಷಣ: ಭೂಮಿ ದಿನದ ಶಿಕ್ಷಣ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ, ಶಿಕ್ಷಕರಿಗೆ, ಆರೋಗ್ಯಪೂರ್ಣ ಮತ್ತು ಸುಸ್ಥಿರ ಭೂಮಿಯನ್ನು ರೂಪಿಸಲು ಬೇಕಾದ ಸಂಪನ್ಮೂಲ ಮತ್ತು ಪರಿಹಾರಗಳನ್ನು ಒದಗಿಸುತ್ತವೆ.

ಆಹಾರ ಮತ್ತು ಕೃಷಿ ಕ್ಷೇತ್ರದಲ್ಲಿ ಅಪಾಯಕಾರಿ ರಾಸಾಯನಿಕಗಳ ಬಳಕೆ ನಿಯಂತ್ರಿಸುವ ಬಗ್ಗೆ ಮತ್ತು ಸುಸ್ಥಿರ ಕೃಷಿ ಪದ್ಧತಿಗಳು, ನಗರ ತೋಟಗಾರಿಕೆ, ಅರಣ್ಯ ತೋಟಗಾರಿಕೆ ಇತ್ಯಾದಿ ಹಸಿರು ಹೆಚ್ಚಿಸುವ ಕಾರ್ಯಕ್ರಗಳ ಪರ ಅರಿವು ಮೂಡಿಸುವ ಕಾರ್ಯದಲ್ಲಿ ನಿರತವಾಗಿದೆ.

ಹಸಿರು ಕೈಗಾರಿಕೆ, ಹಸಿರು ಶಾಲೆ, ತ್ಯಾಜ್ಯ ವಸ್ತುಗಳ ನಿಯಂತ್ರಣ, ಮರುಬಳಕೆ, ಮುಂತಾದ ಸಂರಕ್ಷಣಾ ಕಾರ್ಯಕ್ರಮಗಳ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಭೂಮಿ ದಿನ ಆಂದೋಲನದ ಬೆಂಬಲಿಗರು ನಿರತರಾಗಿದ್ದಾರೆ.

ಅಮೆರಿಕದಲ್ಲಿ ಒಂದು ದಿನದ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಿದ್ದ "ವಿಶ್ವ ಭೂಮಿ ದಿನ"ವು ಕೇವಲ ನಾಲ್ಕು ದಶಕಗಳಲ್ಲಿ ಎಲ್ಲ ರಾಷ್ಟ್ರಗಳ ಗಡಿಗಳನ್ನು ದಾಟಿ, ಅರಣ್ಯಗಳು, ಮರುಭೂಮಿಗಳು, ಪರ್ವತಗಳು, ನದಿಗಳು, ಸಾಗರಗಳ ಸಂರಕ್ಷಣೆಯನ್ನು ಉದ್ದೇಶಿಸಿದ, ಒಂದು ಘನೋದ್ದೇಶಕ್ಕಾಗಿ ವಿಶ್ವದ ಜನರನ್ನು ಒಗ್ಗೂಡಿಸಿರುವ ಜಗದ್ವ್ಯಾಪಿ ಆಂದೋಲನವಾಗಿ ಬೆಳೆದಿದೆ. ಒಂದು ಕೋಟಿ ಜನರ ವ್ಯಾಪಕ ಜಾಲದ, ಪರಿಸರವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ, ಸಂರಕ್ಷಿಸುವ ಮತ್ತು ಸುಧಾರಿಸುವ ಬೃಹತ್ ಕಾರ್ಯಕ್ರಮವಾಗಿ ರೂಪುಗೊಂಡಿದೆ.



Downloaded From:www.kpscvaani.com





# ಮಕ್ಕಳಿಗೆ ಪರಿಸರ ಕಾಳಜಿ ಕಲಿಸುವ ಗುರು

**ಕುವೆಂಪು ವಿವಿಯಲ್ಲಿನ ವಿಶೇಷ ವನ್ಯಜೀವಿ ಎಂಎಸ್ಸಿ ವಿದ್ಯಾರ್ಥಿಗಳಿಗೆ ಗುರುಗಳೊಬ್ಬರು ಎಲೆ ಮರೆ ಕಾಯಿಯಂತೆ ಪರಿಸರ ಕಾಳಜಿಯನ್ನು ಕಲಿಸುತ್ತಿದ್ದಾರೆ.**

ಚಂದ್ರಮುಖಿ

ಕುವೆಂಪು ವಿಶ್ವವಿದ್ಯಾಲಯದಲ್ಲಿ ವನ್ಯಜೀವಿ ಮತ್ತು ನಿರ್ವಹಣೆಯ ವಿಭಾಗವಿದೆ. ವಿದ್ಯಾರ್ಥಿಗಳಿಗೆ ಎಂಎಸ್ಸಿ ಮತ್ತು ಪಿಎಚ್‌ಡಿ ಕೋರ್ಸ್‌ಗಳನ್ನು ನೀಡುವುದು ಈ ವಿಭಾಗದ ವಿಶೇಷ. ಕೈತುಂಬಾ ಸಂಬಳ ಬರುವ ಎಂಜಿನಿಯರಿಂಗ್ ಮತ್ತಿತರ ಕೋರ್ಸ್‌ಗಳನ್ನು ಬಿಟ್ಟು ವಿದ್ಯಾರ್ಥಿಗಳು ವನ್ಯಜೀವಿ ಮತ್ತು ನಿರ್ವಹಣೆಯಂತಹ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತಾರಾ? ಇಂದಿನ ಈ ಜಮಾನದಲ್ಲಿ ಮಕ್ಕಳಲ್ಲಿ ಅಂತಹ ಆಸಕ್ತಿಯಾದರೂ ಇದೆಯೇ? ಅಂತಹುದೊಂದು ಆತಂಕ ಮತ್ತು ಅನುಮಾನ ವಿಶ್ವವಿದ್ಯಾಲಯಕ್ಕೆ, ಎಲ್ಲಕ್ಕಿಂತ ಮುಖ್ಯವಾಗಿ ಆ ವಿಭಾಗಕ್ಕೆ ಇದ್ದೇ ಇತ್ತು. ಇಂತಹ ಸತ್ವಪೂರ್ಣವಾದ ವಿಷಯದಲ್ಲಿ ಮಕ್ಕಳನ್ನು ಆಸಕ್ತಿ ಕೆರಳಿಸುವಂತೆ ಮಾಡುವುದಾದರೂ ಹೇಗೆ?

ಇಂತಹ ಸಂದರ್ಭದಲ್ಲಿಯೇ ವಿಭಾಗಕ್ಕೆ ಬಂದವರು ಡಾ.ವಿಜಯಕುಮಾರ್. ಮೊದಲಿನಿಂದಲೂ ಕಾಡು–ಮೇಡು, ಪಕ್ಷಿ–ಪ್ರಾಣಿ ಸಂಕುಲದ ಬಗ್ಗೆ ಅಪಾರ ಒಲುಮೆಯನ್ನು ಇಟ್ಟುಕೊಂಡು ವನ್ಯಜೀವಿಗಳ ಛಾಯಾಗ್ರಹಣದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡವರು ವಿಜಯಕುಮಾರ್. ಅವರ ಕನಸು ಮನಸ್ಸಿನಲ್ಲೂ ಇದ್ದ ಯೋಚನೆ ಎಂದರೆ ವನ್ಯಜೀವಿಗಳ ಬಗ್ಗೆ ಮಾತ್ರ. ಇಂತಹ ಒಂದು ವಿಭಾಗವನ್ನು ಜ್ಞಾನಗ್ರಹಣವಾಗಿ ಪರಿವರ್ತಿಸುವ ಕಲೆ ಅವರಿಗೆ ತಿಳಿದಿತ್ತು. ಅದಕ್ಕಾಗಿ ಬಂದ ದಿನದಿಂದಲೇ ವಿಭಾಗಕ್ಕೊಂದು ಹೊಸ ಸ್ಪರ್ಶ ನೀಡುವ ಕೆಲಸದಲ್ಲಿ ಮಗ್ನರಾದರು.

ಇದು ಸುಮಾರು ಹದಿನೇಳು ವರ್ಷಗಳ ಹಿಂದಿನ ಮಾತು. ಅಂದರೆ 2006ರಲ್ಲಿ ವಿಶ್ವವಿದ್ಯಾಲಯದ ವನ್ಯಜೀವಿ ಮತ್ತು ನಿರ್ವಹಣೆಯ ವಿಭಾಗದಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಕೇವಲ ಇಬ್ಬರು. ಈಗ ಇದೇ ವಿಭಾಗದಲ್ಲಿ ಎಪ್ಪತ್ತು ವಿದ್ಯಾರ್ಥಿಗಳು ಎಂಎಸ್ಸಿ ಮಾಡುತ್ತಿದ್ದರೆ ಒಂಭತ್ತು ವಿದ್ಯಾರ್ಥಿಗಳು ಪಿಎಚ್‌ಡಿ



Downloaded From:www.kpscvaani.com




ಅಧ್ಯಯನ ನಡೆಸುತ್ತಿದ್ದಾರೆ. ಇಂತಹುದೊಂದು ಬೆಳವಣಿಗೆಗೆ ವಿಜಯಕುಮಾರ್ ಅವರಿಗೆ ವಿಷಯದ ಮೇಲೆ ಇದ್ದ ಅದಮ್ಯವಾದ ಪ್ರೀತಿ ಮತ್ತು ಆಳವಾದ ಅಧ್ಯಯನದ ಹಿನ್ನೆಲೆ. ಜೊತೆಗೆ ವನ್ಯಜೀವಿ ಮತ್ತು ನಿರ್ವಹಣೆಯನ್ನು ವಿಚಾರ ಪ್ರಚೋದಕವಾಗಿ ಮಾಡಿ ಮುಂದಿನ ತಲೆಮಾರು ಆಸಕ್ತಿಯಿಂದ ಅಧ್ಯಯನ ನಡೆಸುವಂತಾಗಬೇಕು ಎಂಬ ಮಹತ್ವಾಕಾಂಕ್ಷೆ. ಇಂತಹ ಯೋಚನೆಯೊಂದಿಗೆ ಅವರು ಬಿತ್ತಿದ ಬೀಜ ಈಗ ಹುಲುಸಾಗಿ ಫಸಲು ಕೊಡುತ್ತಿದೆ ಎಂಬುದು ಶ್ಲಾಘನಾರ್ಹವಾದ ಸಂಗತಿ.

ವಿಜಯಕುಮಾರ್ ಅವರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕೆಂಜಿಗೆ ಎಂಬ ಪುಟ್ಟಗ್ರಾಮದವರು. ರೈತನ ಮಗ. ಬಾಲ್ಯದಿಂದಲೇ ಅವರ ಸುತ್ತ ಇದ್ದುದು ಕಾಡು–ಮೇಡು, ಪ್ರಕೃತಿ ಸೊಬಗು. ತಾನು ಕಾಲಿಟ್ಟಲ್ಲಿ ಕಾಡು–ಕಣ್ಣೆತ್ತಿ ನೋಡಿದಲ್ಲಿ ಮೇಡು. ಹಾಗಾಗಿ ಅವರ ರಕ್ತ–ಮಾಂಸದಲ್ಲಿ ಸೇರಿಹೋಗಿದ್ದು ನಿಸರ್ಗ. ಪ್ರಕೃತಿ ಅವರ ಕಣ್ಣ ಮುಂದಿನ ಬೆರಗಲ್ಲ, ಹೃದಯದೊಳಗಿನ ಭಾವ. ಹಾಗಾಗಿಯೇ ಅವರಿಗೆ ಆಗಿನಿಂದಲೇ ಪ್ರಕೃತಿ ವಿಜ್ಞಾನದ ಬಗ್ಗೆ ಆಸಕ್ತಿ. ಚಿಕ್ಕವರಿರುವಾಗ ಕಾಡಿಗೆ ಹಸುಗಳನ್ನು ಮೇಯಿಸಲು ಹೋಗುತ್ತಿದ್ದಾಗ ತಮ್ಮ ಕಣ್ಣ ಮುಂದಿನ ಕಾಡಿನಲ್ಲಿ, ಪರಿಸರದಲ್ಲಿ ಮರಗಳನ್ನು ಕಡಿದು ನೆಲಕ್ಕುರುಳಿಸುತ್ತಿದ್ದುದು, ಚಿಟಬಿಲ್ಲು ಹಿಡಕೊಂಡು ಅಮಾಯಕ ಹಕ್ಕಿಗಳನ್ನು ಬೇಟೆಯಾಡುತ್ತಿದ್ದುದು, ಪ್ರಾಣಿಗಳನ್ನು ಹೊಡೆದುರುಳಿಸುತ್ತಿದ್ದುದು ನೋಡಿ ಅಪಾರ ಹಿಂಸೆ ಅನಿಸುತ್ತಿತ್ತು. ಅವುಗಳದ್ದು ಕೂಡ ನಮ್ಮಂತೆ ಜೀವವಲ್ಲವೇ ಎಂದು ಮನಸ್ಸು ಒದ್ದಾಡುತ್ತಿತ್ತು. ನಮ್ಮ ಮುಂದಿನ ತಲೆಮಾರಿಗೆ ಇಂತಹ ವಿಚಾರದಲ್ಲಿ ಸ್ಪಷ್ಟವಾದ ಮನವರಿಕೆ ಮಾಡಬೇಕು ಎಂಬ ಯೋಚನೆ ಅಂದಿನಿಂದಲೂ ವಿಜಯಕುಮಾರ್ ಅವರ ಮನಸ್ಸಿನಲ್ಲಿ



## ವನ್ಯಜೀವಿ ಎಂಎಸ್ಸಿ ಕೋರ್ಸ್ ಅವಕಾಶ

ಕುವೆಂಪು ವಿಶ್ವವಿದ್ಯಾಲಯದ ವನ್ಯಜೀವಿ ಮತ್ತು ನಿರ್ವಹಣೆ ಎಂಎಸ್ಸಿ ಕೋರ್ಸ್ ಎರಡು ವರ್ಷಗಳದ್ದಾಗಿದೆ. ಇದರಲ್ಲಿ ನಾಲ್ಕು ಸೆಮಿಸ್ಟರ್‌ಗಳಿರುತ್ತವೆ. ಯಾವುದೇ ವಿಷಯದ ಮೇಲೆ ಬಿಎಸ್ಸಿ ಪದವಿಯನ್ನು ಪಡೆದ ಅಭ್ಯರ್ಥಿಗಳು ಇದಕ್ಕೆ ಅರ್ಹರು. ಎಂಎಸ್ಸಿ ಬಳಿಕ ಪಿಎಚ್‌ಡಿಗೆ ಅರ್ಜಿಯನ್ನು ಸಲ್ಲಿಸಬಹುದು. ಇದಕ್ಕೆ ಪ್ರತ್ಯೇಕವಾದ ಪ್ರವೇಶ ಪರೀಕ್ಷೆ ಇರುತ್ತದೆ. ಆ ಬಳಿಕ ಗೈಡ್ ನೇಮಕವಾಗುತ್ತದೆ. ಆರು ತಿಂಗಳ ಕಾಲ ಕೋರ್ಸ್ ವರ್ಕ್ ಇರುತ್ತದೆ. ಈಗಿನ ನಿಯಮದ ಪ್ರಕಾರ ಪೂರ್ಣಾವಧಿ ಪಿಎಚ್‌ಡಿ ಕನಿಷ್ಠ ಮೂರು ವರ್ಷ. ಪಾರ್ಟ್‌ಟೈಮ್ ಕೋರ್ಸ್‌ನ ಕನಿಷ್ಠ ಅವಧಿ ನಾಲ್ಕು ವರ್ಷ. ಕೋರ್ಸ್ ಮುಗಿಸಲು ಇರುವ ಗರಿಷ್ಠ ಅವಧಿ ಎಂಟು ವರ್ಷಗಳವರೆಗೂ ಇದೆ.

ಎಂಎಸ್ಸಿ ಮುಗಿಸಿದವರಿಗೆ ಅನೇಕ ಎನ್‌ಜಿಓಗಳು ಅವಕಾಶವನ್ನು ನೀಡುತ್ತಿವೆ. ವೈಲ್ಡ್‌ಲೈಫ್ ಮತ್ತು ನೇಚರ್ ಕೇರ್ ಫೌಂಡೇಶನ್, ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮುಂತಾದ ಸಂಸ್ಥೆಗಳು ಪರಿಸರ ಕಾಳಜಿಗೆ ಸಂಬಂಧಿಸಿದ ಅನೇಕ ಪ್ರಾಜೆಕ್ಟ್‌ಗಳನ್ನು ನಡೆಸುತ್ತಿರುತ್ತವೆ. ಅಲ್ಲಿಗೆ ವಿದ್ಯಾರ್ಥಿಗಳನ್ನು ಯೋಜನಾ ಸಹಾಯಕರಾಗಿ, ಪ್ರಾಜೆಕ್ಟ್ ಫೆಲೋ ಆಗಿ ನೇಮಕ ಮಾಡಿಕೊಳ್ಳುತ್ತಾರೆ. ಜೊತೆಗೆ ಅರಣ್ಯ ಇಲಾಖೆಯಲ್ಲಿಯೂ ಅವಕಾಶಗಳು ಲಭ್ಯ. ಇಲ್ಲಿ ಎಂಎಸ್ಸಿ ಕೋರ್ಸ್ ಮುಗಿಸಿದ ಅನೇಕ ವಿದ್ಯಾರ್ಥಿಗಳು ಆರ್‌ಎಫ್‌ಓ, ಎಸಿಎಫ್‌ಓ ಆಗಿ ನೇಮಕಗೊಂಡಿರುವ ಉದಾಹರಣೆಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ವಿದ್ಯಾರ್ಥಿಗಳು ವಿಶೇಷ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಂಡು ಆಸ್ಟ್ರೇಲಿಯಾ, ಜರ್ಮನಿ, ನ್ಯೂಜಿಲಂಡ್‌ನಂತಹ ದೇಶಗಳಲ್ಲಿಯೂ ಅವಕಾಶಗಳನ್ನು ಗಿಟ್ಟಿಸಿಕೊಂಡಿದ್ದಾರೆ. ಕನಿಷ್ಠ 25000 ರೂ. ಮತ್ತು ಗರಿಷ್ಠ 80000 ರೂ. ತನಕವೂ ವೇತನ ಪಡೆದ ಉದಾಹರಣೆಗಳಿವೆ.



Downloaded From:www.kpscvaani.com

ಕುಂತುಬಿಟ್ಟಿತ್ತು. ಆ ಕಾರಣಕ್ಕೆ ಅವರು ಆಯ್ಕೆ ಮಾಡಿಕೊಂಡಿದ್ದು ಪರಿಸರ ವಿಜ್ಞಾನವನ್ನು.

ಚಿಕ್ಕಮಗಳೂರಿನ ಐಡಿಎಸ್‌ಸಿ ಸರ್ಕಾರಿ ಕಾಲೇಜಿನಲ್ಲಿ ಬಿಎಸ್‌ಸಿ ಮುಗಿಸಿದ ಅವರು ಎಂಎಸ್‌ಸಿ ಮತ್ತು ಪಿಎಚ್‌ಡಿಯನ್ನು ಪೂರ್ಣಗೊಳಿಸಿದರು. ಅದೂ ಕುವೆಂಪು ಯೂನಿವರ್ಸಿಟಿಯ ಪರಿಸರ ವಿಜ್ಞಾನ ವಿಭಾಗದಲ್ಲಿ. ಅಲ್ಲಿಂದ ಮುಂದೆ ಪರಿಸರ ಸಂಬಂಧಿ ವಿಷಯಗಳೇ ಅವರ ಅಧ್ಯಯನದ ಭಾಗವಾಗಿ ಹೋಯಿತು ಎಂದರೆ ಅತಿಶಯೋಕ್ತಿಯ ಮಾತಲ್ಲ. ಕಳೆದ 24 ವರ್ಷಗಳ ಅಧ್ಯಾಪನ ವೃತ್ತಿಯ ಅನುಭವವನ್ನು ಹೊಂದಿರುವ ವಿಜಯಕುಮಾರ್ ಅವರು ನಡೆದು ಬಂದಿರುವ ಹಾದಿಯನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ.

ಅವರು ಸಂಶೋಧನೆಗೆಂದು ಮನಸ್ಸುಕೊಟ್ಟ ಕ್ಷೇತ್ರಗಳೆಂದರೆ ಪರಿಸರ ಮಾಲಿನ್ಯ, ಜೀವವೈವಿಧ್ಯತೆಯ ಸಂರಕ್ಷಣೆ, ಹ್ಯಾಬಿಟ್ಯಾಟ್‌ಎಕಾಲಜಿ ಮತ್ತು ವನ್ಯಜೀವಿ ನಿರ್ವಹಣೆ. ಹೀಗೆ ಅಧ್ಯಯನ ಮಾಡುತ್ತ ಮಾಡುತ್ತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಜರ್ನಲ್‌ಗಳಲ್ಲಿ ಮಂಡಿಸಿದ ಸಂಶೋಧನಾ ಪ್ರಬಂಧಗಳ ಸಂಖ್ಯೆ 85ಕ್ಕೂ ಅಧಿಕ. ಯುಜಿಸಿ, ಕರ್ನಾಟಕ ಜೀವವೈವಿಧ್ಯತೆ ಮಂಡಳಿ ಹಾಗೂ ಕರ್ನಾಟಕ ಸರ್ಕಾರದ ವಿಜಿಎಸ್‌ಟಿ ನಡೆಸಿದ ಮೂರು ಪ್ರಮುಖ ಸಂಶೋಧನಾ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹೆಗ್ಗಳಿಕೆ ಇವರಿಗಿದೆ. ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆಯುತ್ತ ಬಂದಿರುವ ಡಾ. ವಿಜಯಕುಮಾರ್ ಅವರು ಎಂಟು ಪುಸ್ತಕಗಳನ್ನು ಬರೆದಿದ್ದಾರೆ ಕೂಡ. ವನ್ಯಜೀವಿ ಸಂರಕ್ಷಣೆ ಮತ್ತು ನಿರ್ವಹಣೆ ವಿಚಾರದಲ್ಲಿ 15ಕ್ಕೂ ಅಧಿಕ ರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರಗಳನ್ನು ಏರ್ಪಡಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಈಗಾಗಲೇ ಒಂಭತ್ತು ವಿದ್ಯಾರ್ಥಿಗಳು ಪಿಎಚ್‌ಡಿ ಪದವಿಗೆ ಪಾತ್ರರಾಗಿದ್ದಾರೆ ಮತ್ತು ಈಗ ಅಷ್ಟೇ ಸಂಖ್ಯೆಯ ವಿದ್ಯಾರ್ಥಿಗಳು ಪಿಎಚ್‌ಡಿ ಗರಿಯನ್ನು ಧರಿಸುವ ನಿರೀಕ್ಷೆಯಲ್ಲಿದ್ದಾರೆ.

ಇಷ್ಟೆಲ್ಲದರ ನಡುವೆ ವಿಜಯಕುಮಾರ್ ಅವರಿಗೆ ಆಡಳಿತಾತ್ಮಕವಾಗಿಯೂ ಸುದೀರ್ಘ ಅನುಭವವಿದೆ. ಕುವೆಂಪು ವಿವಿಯ ಐಕ್ಯೂಎಸಿಯ ಸಹಾಯಕ ಸಮನ್ವಯಕಾರರಾಗಿ 12 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅದೇ ವಿಭಾಗದಲ್ಲಿ ನಾಲ್ಕು ವರ್ಷಗಳಿಂದ ಉಪನಿರ್ದೇಶಕರಾಗಿದ್ದಾರೆ. ವಿಜ್ಞಾನ ಶಿಕ್ಷಣವನ್ನು ಜನಪ್ರಿಯಗೊಳಿಸುವುದಕ್ಕೆ ಸಂಬಂಧಿಸಿದ ಸಮಿತಿಯ ಸಂಚಾಲಕರಾಗಿದ್ದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಸಂಘಟಿಸುವ ಸಮಿತಿಯ ಸದಸ್ಯರಾಗಿ, ಕುವೆಂಪು ವಿವಿಯ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿಭಾಗದ ಸಂಚಾಲಕರಾಗಿ ಒಂಭತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರು. ಪ್ರಸ್ತುತ ವಿಜಯಕುಮಾರ್ ಅವರು ಕುವೆಂಪು ವಿಶ್ವವಿದ್ಯಾಲಯದ ವನ್ಯಜೀವಿ ಮತ್ತು ನಿರ್ವಹಣೆಯ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನೆ ವಿಭಾಗದ ಮುಖ್ಯಸ್ಥರು.

ಕಳೆದ ಐದು ವರ್ಷಗಳಿಂದ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ಮಂಡಳಿಯ ಅಧ್ಯಕ್ಷರೂ ಆಗಿರುವ ಇವರು ಹನ್ನೊಂದು ವರ್ಷಗಳಿಂದ ಇದೇ ವಿಭಾಗದ ಪರೀಕ್ಷಾ ಮಂಡಳಿಯ ಅಧ್ಯಕ್ಷರೂ ಹೌದು. ಮೈಸೂರು ಮತ್ತು ತುಮಕೂರು ವಿವಿಗೂ ಇವರ ಅನುಭವದ ಲಾಭ ದಕ್ಕುತ್ತಿರುವುದು ವಿಶೇಷ. ಮೈಸೂರು ವಿವಿಯ ಪರಿಸರ ವಿಜ್ಞಾನ ಹಾಗೂ ತುಮಕೂರು ವಿವಿಯ ಪ್ರಾಣಿಶಾಸ್ತ್ರ ವಿಭಾಗದ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಯ ಸದಸ್ಯರು.

ಕರ್ನಾಟಕದಲ್ಲಿ ವನ್ಯಜೀವಿ ಮತ್ತು ನಿರ್ವಹಣೆಗೆಂದು ಪ್ರತ್ಯೇಕ ವಿಭಾಗವಿರುವುದು ಕುವೆಂಪು ವಿಶ್ವವಿದ್ಯಾಲಯದಲ್ಲಿ ಮಾತ್ರ. ಈ ವಿಭಾಗಕ್ಕೆ ಮೊದಲ ಉಪನ್ಯಾಸಕರಾಗಿ ನೇಮಕವಾದವರೇ ವಿಜಯಕುಮಾರ್. ಅಂದಿನಿಂದಲೂ ಆ ವಿಭಾಗಕ್ಕೊಂದು ಮಾನ್ಯತೆ, ಗೌರವದಕ್ಕಿಸುವ ಕೆಲಸದಲ್ಲಿ ಮಗ್ನರಾದರು. ಕರ್ನಾಟಕದ ಯಾವ ವಿಶ್ವವಿದ್ಯಾಲಯದಲ್ಲೂ ಇಂತಹುದೊಂದು ವಿಭಾಗ ಇಲ್ಲದೇ ಇರುವುದರಿಂದ ಮಕ್ಕಳನ್ನು ಸೆಳೆದು ತರುವುದು, ಆಸಕ್ತಿ ಮೂಡುವಂತೆ ಮಾಡುವುದು, ಈ ವಿಷಯದಲ್ಲಿ ಎಂಎಸ್ಸಿ ಮಾಡಿದರೆ ಉದ್ಯೋಗ ಅವಕಾಶವಿದೆ ಎಂಬುದನ್ನು ಮನವರಿಕೆ ಮಾಡಿಸುವುದು ದೊಡ್ಡ ಸವಾಲಾಗಿತ್ತು. ಅಂತಹ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಕೈಗೆತ್ತಿಕೊಂಡ ಅವರು ಅನೇಕ ತಜ್ಞರನ್ನು ಕ್ಯಾಂಪಸ್‌ಗೆ ಕರೆಸಿ ವಿದ್ಯಾರ್ಥಿಗಳಿಗಾಗಿ ಕಾರ್ಯಾಗಾರಗಳನ್ನು, ಕ್ಷೇತ್ರ ಪರಿವೀಕ್ಷಣೆ, ವಿಚಾರಗೋಷ್ಠಿಗಳನ್ನು ನಡೆಸುತ್ತ ಬಂದಿದ್ದಾರೆ. ಇದರಿಂದ ಮಕ್ಕಳಲ್ಲಿ ಆಸಕ್ತಿ ಬೆಳೆಯಲು ಸಾಧ್ಯವಾಯಿತು. ಉದ್ಯೋಗವೂ ಸುಲಭವಾಗಿ ಸಿಗತೊಡಗಿತು. ಕ್ರಮೇಣ ಉಳಿದ ವಿದ್ಯಾರ್ಥಿಗಳೂ ಆಸಕ್ತಿ ಬೆಳೆಸಿಕೊಳ್ಳಲು ಶುರು ಮಾಡಿದರು. ಇಡೀ ವಿಶ್ವವಿದ್ಯಾಲಯ ಭದ್ರಾ ಅರಣ್ಯ ವಲಯದ ನಡುವೆ ಇರುವುದು ಕೂಡ ವಿದ್ಯಾರ್ಥಿಗಳಿಗೆ ಇನ್ನೊಂದು ಪ್ಲಸ್ ಪಾಯಿಂಟ್. ಕ್ಯಾಂಪಸ್‌ನಲ್ಲಿ ಸಾಂಬಾರ್, ಕಡವೆ, ಚಿರತೆ, ಹುಲಿಗಳು, ಹೆಬ್ಬಾವು ಆಗಾಗ ಕಾಣಿಸಿಕೊಳ್ಳುತ್ತಿರುತ್ತವೆ. ಹಕ್ಕಿಗಳ ಪ್ರಪಂಚವೇ ತೆರೆದುಕೊಂಡಿರುತ್ತದೆ.

ಕಾರ್ಯಾಗಾರ, ವಿಚಾರ ಮಂಥನಕ್ಕಾಗಿ ಅನೇಕ ಮಂದಿ ತಜ್ಞರು ಕ್ಯಾಂಪಸ್‌ಗೆ ಭೇಟಿ ನೀಡುತ್ತ ಬಂದಿದ್ದಾರೆ. ಕಪ್ಪೆ, ಹಾವು, ಹುಲಿ, ಆನೆ, ಸರೀಸೃಪಗಳು, ಮರಗಳ ಬಗ್ಗೆ ಅಧ್ಯಯನ ಮಾಡಿದ ತಜ್ಞರನ್ನು ಕರೆಸಿ ಮಕ್ಕಳಲ್ಲಿ ಆಸಕ್ತಿ ಮೂಡುವಂತೆ ಮಾಡುವ ಕಾರ್ಯ ನಿರಂತರವಾಗಿದೆ. ಇವರಲ್ಲಿ ಸಂಜಯ್‌ಗುಬ್ಬಿ, ಕೆ.ವಿ.ಗುರುರಾಜ್, ಗೌರಿಶಂಕರ್ ಮೊದಲಾದವರು ಸೇರಿದ್ದಾರೆ. ಕ್ಯಾಮರಾ ಮತ್ತು ಇತರ ಸಾಧನ ಬಳಸಿಕೊಳ್ಳುವ ಬಗ್ಗೆಯೂ ತಜ್ಞರು ತಿಳಿಸಿಕೊಡುತ್ತಿರುವುದು ವಿಶೇಷ. ಇಲ್ಲಿ ಅಧ್ಯಯನ ಮುಗಿಸಿದ ವಿದ್ಯಾರ್ಥಿಗಳಿಗೆ ಉತ್ತಮ ಉದ್ಯೋಗವಕಾಶಗಳೂ ದೊರೆತಿವೆ.

"ಈ ಭೂಮಿಯಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಯಾರೇ ಆಗಲಿ ಬಲವಂತವಾಗಿ ಅದನ್ನು ಕಸಿದುಕೊಳ್ಳಬಾರದು. ಮನುಷ್ಯ ಸಾಧ್ಯವಾದಷ್ಟು ಮರ-ಗಿಡ, ಪ್ರಾಣಿ-ಪಕ್ಷಿಗಳನ್ನು ರಕ್ಷಣೆ ಮಾಡಬೇಕು. ಆ ಮೂಲಕ ನಮ್ಮ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು ಮಾತ್ರವಲ್ಲದೆ ಮುಂದಿನ ತಲೆಮಾರನ್ನು ಕೂಡ ಸಿದ್ಧಪಡಿಸಬೇಕು ಎಂಬುದು ನನ್ನ ಕಾಳಜಿ. ಅದಕ್ಕಾಗಿ ನನ್ನನ್ನು ಸಮರ್ಪಿಸಿ ಕೊಂಡಿದ್ದೇನೆ" ಎಂದು ಸಂತೃಪ್ತಿಯಿಂದ ನುಡಿಯುತ್ತಾರೆ ಡಾ.ವಿಜಯಕುಮಾರ್.


Downloaded From:www.kpscvaani.com











# ಬಾನಾಡಿಗಳ ಜೀವನಾಡಿ ಸಲ್ಲಾವುದ್ದೀನ್

**ಪಕ್ಷಿ ಪ್ರೇಮಿಯಾಗಿರುವ ಸಲ್ಲಾವುದ್ದೀನ್ ಅವರು ತಮ್ಮ ಮನೆಯಲ್ಲೇ ಪಕ್ಷಿಗಳಿಗೂ ಮನೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟು ಪಕ್ಷಿಗಳೊಂದಿಗೆ ಜೀವನ ನಡೆಸಿದ್ದಾರೆ**

ಈರಣ್ಣ ಬೆಂಗಾಲಿ

ಬಿಸಿಲೂರು ಎಂತಲೇ ಕರೆಯಲ್ಪಡುವ ರಾಯಚೂರಿನಲ್ಲಿ ಕೆಂಡದಂತಹ ಬಿಸಿಲು. ಇಲ್ಲಿ ಬೇಸಿಗೆಗಾಲದಲ್ಲಿ ಜನರಿಗೆ ನೀರು ಸಿಗುವುದು ಕಷ್ಟಕರ. ಅಂತಹುದರಲ್ಲಿ ಪ್ರಾಣಿ, ಪಕ್ಷಿಗಳಿಗೆ ನೀರು ಸಿಗುವುದು ಅತ್ಯಂತ ಕಷ್ಟಕರ. ಹಲವಾರು ಬಾರಿ ದಾಹದಿಂದ ಅನೇಕ ಪ್ರಾಣಿ-ಪಕ್ಷಿಗಳು ಸಾವನ್ನಪ್ಪಿದ್ದು ಉಂಟು. ಇದರಿಂದ ಪರಿಸರ ಅಸಮತೋಲನ ಉಂಟಾಗುತ್ತದೆ. ಇದು ಮನುಕುಲದ ಮೇಲೂ ಇದರ ಅಪರೋಕ್ಷ ದುಷ್ಪರಿಣಾಮ ಬೀರುತ್ತಿದೆ.

ಪರಿಸರದ ಸಮತೋಲನವು ಸಕಲ ಜೀವರಾಶಿಗಳ ಮೇಲೂ ಪರಿಣಾಮವನ್ನುಂಟು ಮಾಡುತ್ತವೆ. ವಿಶೇಷವಾಗಿ ಪರಿಸರ ಸಮತೋಲನದಲ್ಲಿ ಪಕ್ಷಿಗಳು ಸಹ ಸಂಕಷ್ಟವನ್ನು ಅನುಭವಿಸುತ್ತವೆ. ಈ ನಿಟ್ಟಿನಲ್ಲಿ ಅವುಗಳ ಪಾಲನೆ-ಪೋಷಣೆ ರಕ್ಷಣೆ ಅಗತ್ಯವಾಗಿರುತ್ತದೆ. ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನಲ್ಲಿರುವ ಗುತ್ತಿಗೆದಾರ ಸಲಾವುದ್ದೀನ್ ಎಂಬುವವರು ಕಳೆದ ಒಂದು ದಶಕದಿಂದ ಪಕ್ಷಿಗಳ ಸಂರಕ್ಷಣೆಯ ಸೇವೆಯಲ್ಲಿ ತೊಡಗಿದ್ದಾರೆ. ಅಪಾರವಾದ ಪಕ್ಷಿ ಪ್ರೇಮವನ್ನು ಹೊಂದಿ, ಪಕ್ಷಿಪ್ರೇಮಿ ಎಂತಲೇ ಖ್ಯಾತಿಯನ್ನು ಪಡೆದಿದ್ದಾರೆ.

ಈ ಹಿಂದೆ ಸಲ್ಲಾವುದ್ದೀನ್ ಅವರ ಮನೆಯಲ್ಲಿ ಗುಬ್ಬಿ ಗೂಡು ಕಟ್ಟಿತ್ತು, ರಾತ್ರಿ ಬಾಗಿಲು, ಕಿಟಕಿ ಹಾಕಿಕೊಂಡು ಮಲಗಿದಾಗ, ಗುಬ್ಬಿಗಳು ಮನೆ ಹೊರಗೆ ಉಳಿದು, ಕಿಟಕಿಗೆ ಬಂದು ಕುಟುಕು ತಿದ್ದದ್ದನ್ನು ಕಂಡು, ಮನಕರಗಿ, ಪಕ್ಷಿಗಳಿಗಾಗಿಯೇ ಮನೆಯಂಗಳಲ್ಲಿ ಕೃತಕ ಗೂಡುಗಳನ್ನು ನಿರ್ಮಿಸಿ ಮಾನವತೆಯನ್ನು ತೋರಿದರು. ಅಂದಿನಿಂದ ಇಂದಿನವರೆಗೆ ತಮ್ಮ ನಿತ್ಯದ ಕಾಯಕದ ಜೊತೆ ಪಕ್ಷಿಗಳ ಬಗ್ಗೆ ನಿಗಾ ವಹಿಸುತ್ತಿದ್ದಾರೆ.



Downloaded From:www.kpscvaani.com



ಬಾನಾಡಿಗಳ ನಾಡಿಯನ್ನು ಅರಿತಿರುವ ಸಲ್ಲಾವುದ್ದೀನ್ ಅವರ ಮನೆ ಒಂದು ಪಕ್ಷಿಧಾಮದಂತೆ ಕಂಡು ಬರುತ್ತದೆ. ಇಲ್ಲಿ ವಿವಿಧ ಪಕ್ಷಿಗಳ ನೋಡುವುದೇ ಕಣ್ಣಿಗೆ ಒಂದು ಹಬ್ಬ ಹಾಗೂ ಅವುಗಳ ಚಿಲಿಪಿಲಿ, ಕಲವರ ಕಿವಿಗೆ ಇಂಪನ್ನು ನೀಡುತ್ತವೆ. ಪಕ್ಷಿಗಳ ಓಡಾಟ, ಅವುಗಳ ಹಾರಾಟ, ಹೀಗೆ ಪಕ್ಷಿಗಳ ಚಟುವಟಿಕೆಗಳನ್ನು ನೋಡುತಲಿದ್ದರೆ ಮನ ಸಂತಸವಾಗುತ್ತದೆ.

ಅಲ್ಲದೆ ತಮ್ಮ ಮನೆಯಂಗಳದಲ್ಲಿ ಪೈಪು, ಗಡಿಗೆಗಳಿಂದ ಕೃತಕ ಹಕ್ಕಿಗೂಡುಗಳನ್ನು ಮಾಡಿ ವಿವಿಧ ಪಕ್ಷಿಗಳಿಗೆ ಆಶ್ರಯ ನೀಡಿ, ಅವುಗಳಿಗೆ ಬೇಕಾದ ಕಾಳು-ಕಡಿ, ನೀರು ಹಾಕಿ ಪ್ರೀತಿಯಿಂದ ಸಲಹುತ್ತಿದ್ದಾರೆ. ಇಷ್ಟೇ ಅಲ್ಲದೆ ಗಾಯಗೊಂಡ ಪಕ್ಷಿಗಳನ್ನು ನಾಗರೀಕರು ಇವರಿಗೆ ತಂದು ಕೊಟ್ಟಾಗ, ಅವುಗಳಿಗೆ ಔಷಧಿ ನೀಡಿ, ಅವುಗಳನ್ನು ಆರೈಕೆ ಮಾಡಿ, ವಿಶೇಷ ಕಾಳಜಿ ತೋರಿಸಿ ಚೇತರಿಸಿಕೊಳ್ಳುವಂತೆ ಮಾಡಿ, ಹಾರಾಡಲು ಬಿಡುತ್ತಾರೆ. ಸ್ವತಂತ್ರವಾಗಿ ಹಾರಾಡಲು ಬಿಟ್ಟರೂ ಅವು ಇವರ ಮನೆಗೆ ಬರುತ್ತವೆ. ಸಾಕಿ, ಸಲುಹಿದ ಪಕ್ಷಿಗಳು ಸಲಾವುದ್ದೀನ್ ಅವರ ಮೇಲೆ ಪ್ರೀತಿ ತೋರಿಸುತ್ತಿವೆ. ಕಾಗೆ, ಗುಬ್ಬಿ, ಮೈನಾ, ಬೆಳಕ್ಕಿ, ಗರುಡ, ಗೂಬೆ, ಪಿಕಳಾರ ಇನ್ನಿತರ ಹತ್ತು ಹಲವಾರು ಗಾಯಗೊಂಡ ಪಕ್ಷಿಗಳನ್ನು ಮೊದಲಿನಂತೆ ಮಾಡಲು ಸೂಕ್ಷ್ಮವಾಗಿ



ನೋಡಿಕೊಂಡಿದ್ದಾರೆ. ಚೇತರಿಸಿಕೊಂಡ ಕೆಲವು ಪಕ್ಷಿಗಳನ್ನು ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಪಕ್ಷಿಗಳನ್ನು ಸಲುಹುವ ಸಲ್ಲಾವುದ್ದೀನ್ ಅವರ ವಿಶೇಷ, ವಿಭಿನ್ನವಾದ ಮನೆಯನ್ನು ಸುತ್ತಮುತ್ತಲಿನ ಜನರು, ಪಕ್ಷಿಪ್ರೇಮಿಗಳು ಒಳಗೊಂಡಂತೆ ಅನೇಕ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ತಂಡ ತಂಡವಾಗಿ ಬಂದು ನೋಡಿ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಸ್ವತಃ ಸಲ್ಲಾವುದ್ದೀನ್ ಅವರೇ ಶಾಲಾ-ಕಾಲೇಜುಗಳಿಗೆ, ಅನೇಕ ಉಪನ್ಯಾಸ ಕಾರ್ಯಕ್ರಮಗಳಿಗೆ ತೆರಳಿ ಪಕ್ಷಿ ಸಂರಕ್ಷಣೆಯ ಬಗ್ಗೆ ಕಾರ್ಯಕ್ರಮ ನೀಡಿದ್ದಾರೆ. ವಿಶೇಷವಾಗಿ ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರುಣಿಸಲು ಎಲ್ಲಾ ಜನರು ತಮ್ಮ ತಮ್ಮ ಮನೆಯ ಮಾಳಿಗೆಯ ಮೇಲೆ, ಮನೆಯಂಗಳದಲ್ಲಿ ನೀರಿಡಿ ಎಂದು ವಿನಂತಿ ಮಾಡುತ್ತಾರೆ. ಪಕ್ಷಿಗಳಿಗೆ ನೀರುಣಿಸಲು ಇರುವ ವಿಶೇಷ ಬಾಟಲಿಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡಿದ್ದಾರೆ. ವಿದ್ಯಾರ್ಥಿಗಳಿಗೆ, ಜನರಿಗೆ ಈ ವಿಶೇಷ ಬಾಟಲಿಗಳನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಹೇಗೆ ತಯಾರಿಸಬೇಕು ಎಂಬುದನ್ನು ಸಹ ಪ್ರಾತ್ಯಕಿಕೆ ನೀಡಿದ್ದಾರೆ.

ಈ ಹಿಂದೆ ಮನೆಯಲ್ಲಿ ಬಂದು ಗೂಡು ಕಟ್ಟುತ್ತಿದ್ದ, ಮನೆಯಂಗಳದಲ್ಲೇ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಪಕ್ಷಿಗಳು ಇಂದು ಕಣ್ಮರೆಯಾಗುತ್ತಿವೆ. ಗಂಭೀರ ವಿಷಯವೆಂದರೆ ಆಧುನಿಕ ತಂತ್ರಜ್ಞಾನದ ಫಲವಾದ ಮೊಬೈಲ್ ವಿಕಿರಣಗಳಿಂದ ಪಕ್ಷಿಗಳು ಸಾಯುತಲಿದ್ದು, ಅವುಗಳ ಅಳಲು ಕೇಳಲು ಸಲ್ಲಾವುದ್ದೀನ್ ಶ್ರಮಿಸುತ್ತಿರುವುದು ಶ್ಲಾಘನೀಯ. ಪಕ್ಷಿಸಂಕುಲಕ್ಕೂ, ಮನುಕುಲಕ್ಕೂ ಸಂಬಂಧವಿದೆ. ಈ ನಿಟ್ಟಿನಲ್ಲಿ ನಾವು ಪಕ್ಷಿಗಳ ಸಂರಕ್ಷಣೆಯ ಕಾರ್ಯವನ್ನು ಮಾಡಬೇಕಾಗಿದ್ದು, ಅವುಗಳ ಉಳಿವುಗಾಗಿ ಪಕ್ಷಿಪ್ರೇಮಿ ಸಲ್ಲಾವುದ್ದೀನ್ ಅವರಂತೆ ನಾವೆಲ್ಲ ಪಣತೊಡಬೇಕಿದೆ. ■



Downloaded From:www.kpscvaani.com



# ಬಸವಳಿಯದಿರಿ ಈ ಬೇಸಿಗೆಯಲಿ...

**ತಾರಕಕ್ಕೇರುತ್ತಿರುವ ಬಿಸಲ ತಾಪದಿಂದ ದೇಹದ ಆಲಸ್ಯವನ್ನು ಹೇಗೆ ನಿವಾರಿಸಿಕೊಳ್ಳಬಹುದು ಎಂಬುದರ ಮೇಲೆ ಲೇಖಕರು ಬೆಳಕು ಚೆಲ್ಲಿದ್ದಾರೆ.**

ಮಾನಸಿ ಮಂಜುನಾಥ್

ನಮ್ಮ ಸುತ್ತಮುತ್ತಲೂ ಹೊಸ ಚಿಗುರು ಮೊಳೆತು ಬಣ್ಣ ಬಣ್ಣದ ಹೂವುಗಳು ಅರಳಲು ಶುರು ಮಾಡಿತೆಂದರೆ ವಸಂತ ಋತು ಕಾಲಿಟ್ಟಿತು ಎಂದು ಅರ್ಥ. ಹೂವುಗಳು ಅರಳಿದ ಮರಗಳ ಕೆಳಗೆ ಹೀಗೆ ಒಂದು ವಾಕ್ ಹೊರಟರೆ ಘಮ್ಮೆನ್ನುವ ಸುವಾಸನೆ ಮೂಗನ್ನು ಅರಳಿಸುತ್ತದೆ. ಆದರೆ ವಸಂತನ ಮಗ್ಗುಲಲ್ಲೇ ಇರುವುದು ಗ್ರೀಷ್ಮ. ಅಂದರೆ ಬಿಸಿಲು ಗಾಲ.

ತಿಂಗಳುಗಳ ಹಿಂದಷ್ಟೇ ದೇಹಕ್ಕೆ ಬೆಚ್ಚನೆಯ ಬಟ್ಟೆಗಳು ಬೇಕಾಗಿದ್ದವು. ಈಗ ಅಂತಹ ಬಟ್ಟೆ ಧರಿಸಿದರೆ ದೇಹ ಬೆವತು ನೀರಾಗುತ್ತದೆ. ಋತುವಿನೊಂದಿಗೆ ನಮ್ಮ ಬದುಕಿನ ರೀತಿಯೂ ಬದಲಾಗುತ್ತ ಹೋಗುತ್ತದೆ ಎಂಬುದಕ್ಕೆ ಇದು ಸಾಕ್ಷಿ. ಈ ಬಿಸಿಲುಗಾಲದಲ್ಲಿ ಧಗೆ ಎಷ್ಟು ತಾರಕಕ್ಕೇರುತ್ತದೆ ಎಂಬುದನ್ನು ಊಹಿಸಲಾಗದು. ಹಾಗೆ ಧಗೆ, ತಾಪಮಾನ ಅತಿಯಾಯಿತು ಎಂದ ಹಾಗೆ ನಾವು ಇನ್ನಷ್ಟು ಹಗುರಾಗುತ್ತ ಹೋಗಬೇಕು. ನಾವು ಸೇವಿಸುವ ಆಹಾರವೂ ಕೂಡ ಲೈಟ್ ಆಗಬೇಕು. ಎಷ್ಟು ಲೈಟ್ ಆಗಬೇಕು ಎಂಬುದನ್ನು ಗಮನಿಸೋಣ.

ಚಳಿಗಾಲದಲ್ಲಿ ದೇಹ ಅಷ್ಟೇನು ನೀರು ಬೇಡುವುದಿಲ್ಲ. ಆದರೆ ಈಗ? ಎಷ್ಟು ನೀರು ಕುಡಿದರೂ ದೇಹ ಮತ್ತೆ ಮತ್ತೆ ಬೇಕೆನಿಸುತ್ತದೆ. ನೀರಡಿಕೆಯ ಜೊತೆಗೆ ಬಹಳ ಬೇಗ ಹಸಿವಾಗುತ್ತದೆ. ಸುತ್ತಲಿನ ವಾತಾವರಣಕ್ಕೆ ತಕ್ಕಂತೆ ಆರೋಗ್ಯಪೂರ್ಣ ಪಚನಕ್ರಿಯೆಯನ್ನು ಕಾಯ್ದುಕೊಳ್ಳಬೇಕಾದರೆ ದೇಹಕ್ಕೆ ಹೆಚ್ಚು ದ್ರವ ಪದಾರ್ಥ ಸೇರಿಸಬೇಕು. ಹಾಗಂತ ಬರೀ ನೀರೇ ಕುಡಿಯಬೇಕಾಗಿಲ್ಲ. ನಿಮ್ಮ ನಾಲಿಗೆ ರುಚಿಗೆ ತಕ್ಕಂತೆ ಎಳನೀರು, ನಿಂಬೆರಸ, ಹಣ್ಣಿನರಸಗಳನ್ನು ಯಥೇಚ್ಛವಾಗಿ ಕುಡಿಯಬಹುದು. ನಿಮ್ಮ ಬಾಯಿರುಚಿಗೆ ಹೊಂದುವ ಹಾಗೆ. ಆದರೆ ಹಣ್ಣಿನ ರಸವನ್ನು ರೆಫ್ರಿಜರೇಟರ್‌ನಲ್ಲಿ ಇಟ್ಟು, ಅತ್ಯಂತ ತಣ್ಣಗೆ ಮಾಡಿಕೊಂಡು ಕುಡಿಯಬಾರದು. ಹೀಗೆ ಹೆಚ್ಚು ದ್ರವ ಪದಾರ್ಥಗಳನ್ನು ದೇಹಕ್ಕೆ ಸೇರಿಸುವುದರಿಂದ ದೇಹದ ಶಕ್ತಿ ವೃದ್ಧಿಸುತ್ತದೆ. ಜೊತೆಗೆ ತ್ವಚೆ ಕೂಡ ಹೊಳಪು ಕಾಣುತ್ತದೆ.


Downloaded From:www.kpscvaani.com

ಅಧಿಕ ತೂಕ ಹೊಂದಿದವರಿಗಂತೂ ಬಿಸಿಲುಗಾಲ ಎನ್ನುವುದು ದೊಡ್ಡ ಹಿಂಸೆ. ಮೈ ಬೆವರುತ್ತದೆ ಎಂಬ ಕಾರಣಕ್ಕೆ ವ್ಯಾಯಾಮ ಮಾಡುವುದಕ್ಕೂ ಬೇಜಾರು. ಕುಂತಲ್ಲೇ ಕುಂತು ಮೊಬೈಲ್‌ನಲ್ಲಿ ಮನಸ್ಸು ನೆಟ್ಟು ಕಾಲಹರಣ ಮಾಡೋಣ ಅನ್ನಿಸುತ್ತಿರುತ್ತದೆ. ಇಂತಹ ದೇಹಸ್ಥಿತಿ ಇದ್ದವರು ಕೂಡ ಹೆಚ್ಚು ಹೆಚ್ಚು ನೀರು ಕುಡಿಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅದರಿಂದ ದೇಹಕ್ಕೆ ಶಕ್ತಿ ಲಭ್ಯವಾಗುತ್ತದೆ ಮತ್ತು ದಿನನಿತ್ಯದ ಚಟುವಟಿಕೆಗಳಲ್ಲಿ ಲವಲವಿಕೆ ಮೂಡುತ್ತದೆ. ವ್ಯಾಯಾಮ ಮಾಡಲು ಸಾಧ್ಯವೇ ಆಗುತ್ತಿಲ್ಲ ಎಂದರೆ ಚಿಂತೆ ಮಾಡಬೇಕಿಲ್ಲ. ಮೊಬೈಲ್ ಫೋನ್‌ನಲ್ಲಿ ಮಾತನಾಡುವಾಗ ಕೋಣೆಯಲ್ಲಿ, ಮನೆಯ ಹಾಲ್‌ನಲ್ಲಿ, ಹಜಾರದಲ್ಲಿ ಅತ್ತಿಂದಿತ್ತ ಓಡಾಡಿಕೊಂಡೇ ಮಾತನಾಡಿ. ಅದರಿಂದ ನಿಮಗೆ ಗೊತ್ತೆ ಇಲ್ಲದಂತೆ ದೇಹಕ್ಕೆ ಚಟುವಟಿಕೆ ಸಿಗುತ್ತದೆ.

ಇದೇ ಸಂದರ್ಭದಲ್ಲಿ ನಿಮಗೊಂದು ಅಚ್ಚರಿಯ ಸಂಗತಿಯನ್ನು ಹೇಳಿಬಿಡುತ್ತೇನೆ. ಈ ವಿಶ್ವದಲ್ಲಿ ಐದು ಬ್ಲೂಝೋನ್‌ಗಳಿವೆ ಎಂದು ಗುರುತಿಸಲಾಗಿದೆ. ಅವುಗಳೆಂದರೆ ಒಕಿನಾವಾ, ಸಾರ್ಡಿನಿಯಾ, ನಿಕೊಯಾ, ಇಕಾರಿಯಾ ಮತ್ತು ಲೊಂಬಾ ಲಿಂಡಾ. ಇಲ್ಲಿಯ ಜನ ಜಗತ್ತಿನಲ್ಲಿಯೇ ಸುದೀರ್ಘ ಕಾಲ ಬದುಕುತ್ತಾರೆ. ಬಹುತೇಕ ಶತಾಯುಷಿಗಳು. ಇವರ್‍ಯಾರೂ ಅತಿಯಾದ ವ್ಯಾಯಾಮವನ್ನೇನೂ ಮಾಡುವುದಿಲ್ಲ. ತಮ್ಮ ದಿನನಿತ್ಯದ ಎಲ್ಲ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಯಾರನ್ನೂ ಡಿಪೆಂಡ್ ಆಗುವುದಿಲ್ಲ. ತರಕಾರಿ ತರಬೇಕೋ ನಡೆದೇ ಹೋಗುತ್ತಾರೆ. ಗೆಳತಿಯ ಮನೆಗೆ ಹೋಗಬೇಕೋ ವಾಹನವನ್ನು ಅವಲಂಬಿಸುವುದಿಲ್ಲ. ಸಮ್ಮರ್ ಬಂತೆಂದರೆ ಅವರು ಸುಮ್ಮನೇ ಹಾಳುಮೂಳು ಸೇವಿಸುವುದಿಲ್ಲ. ಹೆಚ್ಚು ನೀರಿನ ಅಂಶವನ್ನು ಹೊಂದಿರುವ ತರಕಾರಿ ಮತ್ತು ಹಣ್ಣುಗಳನ್ನು ಸೇವಿಸುತ್ತಾರೆ. ಇವೆಲ್ಲವೂ ಅವರ ಸುದೀರ್ಘಾವಧಿ ಬದುಕುವ ಗುಟ್ಟುಗಳು. ಅವರಿಗೆ ಸೊಂಟದ ಸುತ್ತಳತೆ ಯಾವತ್ತೂ ಸಮಸ್ಯೆಯಾಗಿಲ್ಲವಂತೆ.

ನಮ್ಮಲ್ಲಿಯೂ ಬಿಸಿಲು ಗಾಲ ಬಂತೆಂದರೆ ಸೊಪ್ಪು ತರಕಾರಿಗಳನ್ನೇ ಅಪಾರ ಪ್ರಮಾಣದಲ್ಲಿ ಬಳಸಿ ಎಂಬ ಸಲಹೆ ಸಾಮಾನ್ಯವಾಗಿ ಬರುತ್ತದೆ. ಆದರೆ ಅನುಸರಿಸುವವರು ಕಡಿಮೆ. ಬೇಸಿಗೆಯಲ್ಲಿ ಮುಖ್ಯವಾಗಿ ಸೋರೆಕಾಯಿ, ಪಡವಲಕಾಯಿ, ಸೌತೆಕಾಯಿ, ಕುಂಬಳಕಾಯಿಯಂತಹ ತರಕಾರಿಗಳನ್ನು ಬಳಸಿದರೆ ನಮ್ಮ ದೇಹಕ್ಕೆ ಅಗತ್ಯವಾದ ನೀರಿನ ಪ್ರಮಾಣ ಅದರಿಂದಲೇ ಸಿಗುತ್ತದೆ. ಮೇಲೆ ಪ್ರಸ್ತಾಪಿಸಿದ ತರಕಾರಿಗಳನ್ನು ಅಡುಗೆಗೇ ಬಳಸಬೇಕೆಂದಿಲ್ಲ. ಅವುಗಳ





ರಸವನ್ನು ತೆಗೆದು ಸಲ್ಪ ನಿಂಬೆರಸ ಸೇರಿಸಿ ಕುಡಿಯಬಹುದು. ಆದರೆ ನಮ್ಮ ಮನಸ್ಸು ಯಾವತ್ತೂ ತುಡಿಯುವುದು ಸಕ್ಕರೆಯುಕ್ತವಾದ ಪಾನೀಯದ ಕಡೆಗೆ. ಸಕ್ಕರೆ ಅಂಶವನ್ನು ಹೆಚ್ಚು ಹೆಚ್ಚು ಸೇರಿಸುತ್ತ ಹೋದ ಹಾಗೆ ದೇಹಕ್ಕೆ ವಿಷವನ್ನೇ ತುಂಬಿದ ಹಾಗೆ ಎಂಬುದನ್ನು ಮರೆಯುತ್ತೇವೆ. ಬಿಸಿಲುಗಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಣ್ಣುಗಳು ಬರಲು ಆರಂಭಿಸುತ್ತವೆ. ಮಾವು, ಕಲ್ಲಂಗಡಿ, ಫೈನಾಪಲ್, ಖರಬೂಜದ ಹಣ್ಣುಗಳು ಹೆಚ್ಚು ಸೂಕ್ತ.

ಡಿ–ಜೀವಸತ್ವದ ಕೊರತೆ ಇರುವವರಿಗೆ ಅದನ್ನು ಸುಧಾರಣೆ ಮಾಡಿಕೊಳ್ಳಲು ಬೇಸಿಗೆಗಾಲ ಸ್ವರ್ಗ. ಮಳೆಗಾಲದಲ್ಲಿ ಇಂತಹ ಅವಕಾಶಗಳು ಲಭ್ಯವಾಗುವುದು ಕಡಿಮೆ. ಬೆಳಗಿನ ಎಂಟು ಗಂಟೆಗೂ ಮುನ್ನ ಎಳೆಬಿಸಿಲಿನಲ್ಲಿ ಬಿರಬಿರನೆ ಒಂದು ವಾಕ್ ಹೋಗಿ ಬಂದುಬಿಟ್ಟರೆ ದೇಹಕ್ಕೆ ಬೇಕಾದ ವಿಟಮಿನ್ ಡಿ ಅಂಶ ಸಿಗುತ್ತದೆ. ನಮ್ಮ ಒಟ್ಟಾರೆ ಆರೋಗ್ಯಕ್ಕೆ ಅತ್ಯಗತ್ಯವಾಗಿ ಬೇಕಾದುದು ವಿಟಮಿನ್–ಡಿ. ಇದು ದಣಿವನ್ನು ತಗ್ಗಿಸುತ್ತದೆ, ಒಟ್ಟು ಮೂಡ್‌ಗೆ ಜೀವ ತುಂಬುತ್ತದೆ. ನಮ್ಮ ಮೂಳೆ ಮತ್ತು ಚರ್ಮದ ಆರೋಗ್ಯಕ್ಕಂತೂ ಇದು ಬೇಕೇಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಕ್ಯಾನ್ಸರ್ ಪ್ರತಿಬಂಧಕ ಶಕ್ತಿ ಇದರಲ್ಲಿದೆ. ಈ ಬಿರು ಬೇಸಿಗೆಯಲ್ಲಿಯೂ ವಿಟಮಿನ್–ಡಿ ಅಂಶದ ಕೊರತೆ ಇತ್ತು ಎಂಬುದು ಕಂಡು ಬಂದರೆ ಒಮ್ಮೆ ತಜ್ಞ ವೈದ್ಯರ ಅಥವಾ ಆಹಾರ ತಜ್ಞರ ಮಾರ್ಗದರ್ಶನ ಪಡೆಯುವುದು ಉತ್ತಮ.

ಬೇಸಿಗೆ ಎಂದರೆ ಶುಷ್ಕ ವಾತಾವರಣ. ಬಿಸಿಗಾಳಿ ಸಾಮಾನ್ಯ. ಈ ಗಾಳಿಯ ಜೊತೆ ಧೂಳೂ ಕೂಡ ಸರಾಗವಾಗಿ ನಮ್ಮ ದೇಹವನ್ನು ತುಂಬಿಕೊಳ್ಳುತ್ತದೆ. ಅದು ನಿಮ್ಮ ಮೂಗಿನ ಮೂಲಕ, ಬಾಯಿ, ಕಣ್ಣು,





Downloaded From:www.kpscvaani.com





ಕಿವಿಯ ಮೂಲಕ ದೇಹವನ್ನು ಸೇರಿಕೊಳ್ಳಬಹುದು. ಹಾಗೇ ಚರ್ಮದ ಕಾಂತಿಯನ್ನೂ ಕೆಡಿಸುತ್ತದೆ. ಅದಕ್ಕಿರುವ ಉಪಾಯ, ದೇಹದ ಈ ಭಾಗಗಳನ್ನು ಆಗಾಗ ಸೋಪಿನಿಂದ ಸ್ವಚ್ಛಗೊಳಿಸುವುದು. ಬಿಸಿಲಿನಲ್ಲಿ ಅಡ್ಡಾಡುವಾಗ, ದ್ವಿಚಕ್ರ ವಾಹನಗಳನ್ನು ಓಡಿಸುವಾಗ ಮೂಗು-ಬಾಯಿಗೆ ಧೂಳು ಸೇರದಂತೆ ತೆಳ್ಳನೆಯ ಸ್ಕಾರ್ಫ್, ಬಟ್ಟೆಯಿಂದ ಕವರ್ ಮಾಡಿಕೊಳ್ಳುವುದು ಉತ್ತಮ. ದೇಹವನ್ನು ಸೇರಿಕೊಳ್ಳುವ ಧೂಳು ಮನೆಯೊಳಗೂ ತುಂಬಿಕೊಳ್ಳಬಹುದಲ್ಲ. ಹೌದು, ಹಾಗೆ ತುಂಬಿಕೊಂಡ ಧೂಳು ಮತ್ತೆ ದೇಹವನ್ನು ಸೇರಿಕೊಳ್ಳಲೇನೂ ಕಷ್ಟವಿಲ್ಲ. ಅಡುಗೆ ಮನೆಯ ಸೆಲ್ಫ್, ಪ್ಲಾಟ್‌ಫಾರಂ, ಪಾತ್ರೆಗಳು, ಗ್ಲಾಸ್‌ಗಳ ಮೇಲೆ ಕೂರುವ ಧೂಳನ್ನು ಮೊದಲು ಸ್ವಚ್ಛಗೊಳಿಸುವುದನ್ನು ಮರೆಯಬೇಡಿ. ಮನೆಯಲ್ಲಿ ಪುಟ್ಟ ಮಕ್ಕಳಿದ್ದರಂತೂ ಇವೆಲ್ಲ ಕೆಲಸವನ್ನು ಕಡ್ಡಾಯವಾಗಿ ಮಾಡಲೇ ಬೇಕು.

ಧೂಳಿನಿಂದ ಎಂಥವರ ಆರೋಗ್ಯವಾದರೂ ಏರುಪೇರಾಗುತ್ತದೆ. ಕಫ ಕಟ್ಟುತ್ತದೆ. ಶ್ವಾಸಕೋಶದಲ್ಲಿ ತೊಂದರೆ, ಉಸಿರಾಡಲು ಸಮಸ್ಯೆ ಉಂಟಾಗುತ್ತದೆ. ಯಥೇಚ್ಛ

**ಬೇಸಿಗೆಯಲ್ಲಿ ಮುಖ್ಯವಾಗಿ ಸೋರೆಕಾಯಿ, ಪಡವಲಕಾಯಿ, ಸೌತೆಕಾಯಿ, ಕುಂಬಳಕಾಯಿಯಂತಹ ತರಕಾರಿಗಳನ್ನು ಬಳಸಿದರೆ ನಮ್ಮ ದೇಹಕ್ಕೆ ಅಗತ್ಯವಾದ ನೀರಿನ ಪ್ರಮಾಣ ಅದರಿಂದಲೇ ಸಿಗುತ್ತದೆ. ಮೇಲೆ ಪ್ರಸ್ತಾಪಿಸಿದ ತರಕಾರಿಗಳನ್ನು ಅಡುಗೆಗೇ ಬಳಸಬೇಕೆಂದಿಲ್ಲ. ಅವುಗಳ ರಸವನ್ನು ತೆಗೆದು ಸಲ್ಪ ನಿಂಬೆರಸ ಸೇರಿಸಿ ಕುಡಿಯಬಹುದು.**

ನೀರಿನ ಬಳಕೆ ಮಾಡದೇ ಇದ್ದರೆ, ದೇಹವನ್ನು ತಂಪಾಗಿ ಇಡದೇ ಇದ್ದರೆ ಮಲಬದ್ಧತೆ, ಮೂತ್ರ ವಿಸರ್ಜನೆಯ ವೇಳೆ ಉರಿ ಸಾಮಾನ್ಯವಾಗಿ ಕಾಡಲಿದೆ. ಉಗುರು ಬೆಚ್ಚನೆಯ ನೀರು ಮಲಬದ್ಧತೆ ನಿವಾರಣೆ ಮಾಡೀತು. ಧೂಳಿನಿಂದ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ತಲೆನೋವು ಮತ್ತು ನೆಗಡಿ. ಅದಕ್ಕೆ ಸಾಧ್ಯವಾದಷ್ಟು ಮನೆಮದ್ದು ಮಾಡಿ. ಹೆಚ್ಚು ಮಾತ್ರೆಗಳನ್ನು ನುಂಗಿ ದೇಹವನ್ನು ದಂಡಿಸಿಕೊಳ್ಳದಿರಿ. ಮಕ್ಕಳನ್ನು ಧೂಳಿನಿಂದ ರಕ್ಷಣೆ ಮಾಡುವುದು ಮೊದಲ ಆದ್ಯತೆಯಾಗಲಿ.

ವ್ಯಾಯಾಮ, ಆಹಾರ, ನೀರು, ಧೂಳು ಇವೆಲ್ಲದರ ನಡುವೆ ಈ ವಾತಾವರಣದಲ್ಲಿ ಎಂತಹ ಬಟ್ಟೆಗಳನ್ನು ಧರಿಸಬೇಕು ಎಂಬುದು ಬಹಳ ಮುಖ್ಯ. ತೆಳ್ಳನೆಯ, ಸಡಿಲವಾದ ಹತ್ತಿ ಬಟ್ಟೆಗಳನ್ನೇ ಹೆಚ್ಚು ಬಳಸಿ. ಖಾದಿ ಪ್ರಿಯರಾದರೂ ಹೆಚ್ಚು ರಫ್ ಇಲ್ಲದ ಧಿರಿಸು ಇರಲಿ. ನೀವು ಧರಿಸುವ ಬಟ್ಟೆಯ ಬಣ್ಣವೂ ಮುಖ್ಯವಾಗುತ್ತದೆ. ಹೆಚ್ಚು ಡಾರ್ಕ್ ಅಲ್ಲದ ತಿಳಿ ಹಳದಿ, ತಿಳಿ ಗುಲಾಬಿ, ಅಚ್ಚ ಬಿಳಿ, ತಿಳಿ ಹಸಿರು, ಕ್ರೀಮ್ ಬಣ್ಣದ ಬಟ್ಟೆಗಳು ಉತ್ತಮ. ಸೂರ್ಯ ಶಾಖವನ್ನು ಬಹಳ ಬೇಗ ಹೀರಿಕೊಳ್ಳುವ ಕಪ್ಪು ಬಣ್ಣದ ಡ್ರೆಸ್ ಮಾತ್ರ ಬೇಡವೇ ಬೇಡ.

ಹೊರಗೆ ಸುಡು ಸುಡು ಬಿಸಿಲಿರುತ್ತದಲ್ಲ? ಹಾಗಂತ ಏರ್‌ಕೂಲರ್, ಏಸಿ, ಫ್ಯಾನ್ ಕೆಳಗೆ ಗಂಟೆಗಟ್ಟಳೆ ನಿದ್ರೆಗೆ ಮೊರೆ ಹೋದಿರೋ ಅದು ಆರೋಗ್ಯಕ್ಕೆ ದೊಡ್ಡ ಕೇಡು. ಬಿಸಿಲು ಬರುವುದು ಬೆವರು ಸುರಿಯಲೆಂದೇ. ಬೆವರು ಹರಿದರೆ ದೇಹದ ಟಾಕ್ಸಿಕ್ ಹೊರ ಹೋಗುತ್ತದೆ. ಲವಲವಿಕೆಯಿಂದ ಇರಲು ಸಾಧ್ಯವಾಗುತ್ತದೆ. ಈ ಬಿಸಿಲುಗಾಲವನ್ನು ಖುಷಿಖುಷಿಯಾಗಿ ಆನಂದಿಸಿರಿ.





Downloaded From:www.kpscvaani.com




# ಖಾಕಿ ಮೇಲಿನ ಪ್ರೀತಿಯಿಂದ ಚಾಲಕಿ ಆದ ಅಂಬಿಕಾ

ಸಂಧ್ಯಾ ಸೊರಬ



ಇಂದು ಬದಲಾದ ಕಾಲಘಟ್ಟದಲ್ಲಿ ಮಹಿಳೆಯರ ಸಾಧನೆಯ ಪಟ್ಟಿಯು ಎಲ್ಲಾ ಕ್ಷೇತ್ರದಲ್ಲೂ ಏರುತ್ತಲೇ ಇದೆ. ಹೆಣ್ಣು ಮಕ್ಕಳ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿರುವ ಮಧ್ಯೆಯೂ ಮಹಿಳೆಯರು ಸಾಧನೆ ಮಾಡುತ್ತಲೇ ಇದ್ದಾರೆ. ಈ ಒಲವು ಆಸಕ್ತಿ ಪ್ರೇರಣೆ ಅನ್ನೋದಿದೆಯಲ್ಲ ಅದು ಹಾಗೆನೇ. ಯಾರನ್ನ ಯಾವ ದಿಕ್ಕಿನತ್ತ ಕರೆದೊಯ್ಯುತ್ತದೆಯೋ ಗೊತ್ತಾಗುವುದಿಲ್ಲ.

ಇದು ನಿಜವೂ ಹೌದು. ಇಲ್ಲೊಬ್ಬ ಮಹಿಳೆಗೆ ಖಾಕಿಯೇ ಸ್ಫೂರ್ತಿಯಾಗಿದೆ. ಆ ಖಾಕಿಯ ಒಲವೇ ಅವರನ್ನು "ಚಾಲಕಿ" ಯನ್ನಾಗಿ ಮಾಡಿದೆ. ಅರೆ, ಇದರಲ್ಲೇನು ವಿಶೇಷ? ಅಂತೀರಾ. ಖಂಡಿತ ಇದೆ. ಈ ಚಾಲಕಿ ಸರ್ಕಾರಿ ಕಚೇರಿಯ "ಚಾಲಕಿ" ಅನ್ನೋದು ವಿಶೇಷವೆ. ಈ ಚಾಲಕಿಯ ಯಶೋಗಾಥೆಯನ್ನು ನಿಮಗೆ ಈ ಲೇಖನದ ಮೂಲಕ ಪರಿಚಯಿಸಲಿದ್ದೇನೆ.

ಸೈಕಲ್, ಕಾರು, ಸ್ಕೂಟರ್, ಬೈಕ್ ಆಟೋ ಮುಂತಾದ ಲಘು ವಾಹನಗಳನ್ನು ಹೆಣ್ಣು ಮಕ್ಕಳು ಓಡಿಸುವುದನ್ನು ನಾವೆಲ್ಲಾ ನೋಡಿಯೇ ಇರುತ್ತೇವೆ. ಅದಲ್ಲದೆ ಬಸ್, ಟ್ರ್ಯಾಕ್ಟರ್, ಬುಲ್ಡೋಜರ್, ವಿಮಾನ ಮುಂತಾದ ಭಾರಿ ವಾಹನಗಳನ್ನು ಸಹ ಮಹಿಳೆಯರು ಚಲಾಯಿಸುವುದನ್ನು ನೋಡಿದ್ದೇವೆ ಮತ್ತು ಕೇಳಿದ್ದೇವೆ. ಆದರೆ ಈಕೆ ಸರ್ಕಾರಿ ಕಚೇರಿಯೊಂದರಲ್ಲಿ ಚಾಲಕಿ ಅನ್ನೋದೇ ವಿಶೇಷ. ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಪುರುಷ ಚಾಲಕರೇ ಇರುವುದು ಸಹಜವಾದರೂ ರಾಜ್ಯದ ರಾಜಧಾನಿ ಬೆಂಗಳೂರಿನ "ವಿಶ್ವೇಶ್ವರಯ್ಯ ಟವರ್" ನಲ್ಲಿರೋ "ಅಬಕಾರಿ ಇಲಾಖೆ" ಯಲ್ಲಿ ಈಕೆ ಚಾಲಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಅಂದ್ಹಾಗೆ ಈ ಸರ್ಕಾರಿ ಚಾಲಕಿಯ ಹೆಸರು "ಟಿ.ಹೆಚ್. ಅಂಬಿಕಾ". ಪ್ರೊಬೇಷನರಿ ಪೀರಿಯಡ್ ಅನ್ನು ಮುಗಿಸಿದ ನಂತರ ಅಂಬಿಕಾ ಅವರು ಕಳೆದೆರಡು ವರ್ಷಗಳಿಂದ ಇಲ್ಲಿನ ಅಬಕಾರಿ ಇಲಾಖೆಯಲ್ಲಿ ಅಬಕಾರಿ ಇನ್ಸ್‌ಪೆಕ್ಟರ್ ಆಗಿರುವ ಡಿ. ಗೀತಾ ಅವರ ಜೀಪಿನ ಚಾಲಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.


Downloaded From:www.kpscvaani.com

ಹೀಗೆ ಸರ್ಕಾರಿ ಕಚೇರಿಯಲ್ಲಿ ಚಾಲಕಿಯಾಗಿರುವುದು ಗಮನಕ್ಕೆ ಬಂದಾಗ ಅಂಬಿಕಾ ಅವರನ್ನೇ ಈ ಬಗ್ಗೆ ಮಾತನಾಡಿಸಲಾಯಿತು. ಆಕೆ ಹೇಳಿದ್ದು, ಚಾಲಕಿಯಾಗಲು ನನಗೆ ಖಾಕಿ ಪ್ರೇರಣೆಯಾಯಿತು. ಸಣ್ಣ ವಯಸಿನಿಂದಲೇ ಖಾಕಿ ತೊಡಬೇಕು ಎನ್ನುವುದು ನನ್ನ ಮನಸಿನ ಬಯಕೆಯಾಗಿತ್ತು. ಆದರೆ ಇದಕ್ಕೆ ಹಾದಿ ಕೂಡಿ ಬಂದಿದ್ದು, ಮದುವೆಯ ಬಳಿಕವೇ. ಪೊಲೀಸ್ ಆಗಿ ಖಾಕಿ ಸಮವಸ್ತ್ರ ಧರಿಸಬೇಕು ಎನ್ನುವ ಇವರ ಆಸೆ ಈಡೇರದಿದ್ದರೂ ಈಗ ಅಬಕಾರಿ ಕಚೇರಿಯಲ್ಲಿ ಚಾಲಕಿಯಾಗಿ ಖಾಕಿ ಧರಿಸುತ್ತಿದ್ದಾರೆ.

ಜಾವಗಲ್ ಹತ್ತಿರದ ನೀರುಗುಂಡಿ ತಾಂಡ್ಯದವರಾದ ಅಂಬಿಕಾ ಅವರ ತಂದೆ ಹನುಮ ನಾಯಕ್ ಅವರು ಕೃಷಿಕರು. ತಾಯಿ ಶಾಂತಿ ಬಾಯಿ. ಮೂವರು ಅಕ್ಕಂದಿರು ಮತ್ತು ಒಬ್ಬ ಅಣ್ಣನ ಮುದ್ದಿನ ತಂಗಿ ಅಂಬಿಕಾ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಜಾವಗಲ್‌ನಲ್ಲಿ ಮುಗಿಸಿದ ನಂತರ ಕಡೂರಿನ ವೈ.ಎಂ.ಸಿ. ಕಾಲೇಜಿನಲ್ಲಿ ಪಿಯು ವಿದ್ಯಾಭ್ಯಾಸವನ್ನು ಮುಗಿಸಿದರು. ನಂತರ ಒಳ್ಳೆಯ ಸಂಬಂಧ ಕೂಡಿ ಬಂದ ಕಾರಣ ಮದುವೆಯಾಗಿ ಬೆಂಗಳೂರು ಸೇರಿದರು.

ಅಂಬಿಕಾ ಅವರ ಪತಿ ಲಕ್ಕೇಶ್ ನಾಯಕ್ ಮೈಸೂರು ಸ್ಯಾಂಡಲ್ ಸೋಪಿನ ಫ್ಯಾಕ್ಟರಿಯಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದು, ಮಗಳು " ತನಿಷ್ಕಾ" ಮೂರನೇ ತರಗತಿ ಓದುತ್ತಿದ್ದಾಳೆ. ಈಕೆಯ ವೃತ್ತಿ ಜೀವನಕ್ಕೆ ಅವರ ಪತಿಯೇ ಸ್ಫೂರ್ತಿ. ಪಿಯುಸಿ ವಿದ್ಯಾಭ್ಯಾಸ ಮಾಡಿರುವ ಅಂಬಿಕಾಗೆ ಡ್ರೈವಿಂಗ್ ಅನ್ನು ಬಹಳ ಸುಲಭವಾಗಿ ಹೇಳಿಕೊಟ್ಟಿದ್ದು ಪತಿ ಲಕ್ಕೇಶ್ ನಾಯಕ್. ಮೊದಲಿಗೆ ಡ್ರೈವಿಂಗ್ ಸ್ಕೂಲ್‌ಗೆ ಸೇರಿದ್ದರೂ, ಅಲ್ಲಿ ಸರಿಯಾಗಿ ಕಲಿಯಲು ಆಗದ ಕಾರಣ ನನ್ನ ಪತಿಯೇ ವಾಹನ ಚಾಲನೆ ತರಬೇತಿಯನ್ನು ನೀಡಿದರು ಎಂದು ಹೆಮ್ಮೆಯಿಂದ ಹೇಳುತ್ತಾರೆ ಅಂಬಿಕಾ.



**ಪೊಲೀಸ್ ಆಗಿ ಖಾಕಿ ಸಮವಸ್ತ್ರ ಧರಿಸಬೇಕು ಎನ್ನುವ ಇವರ ಆಸೆ ಈಡೇರದಿದ್ದರೂ ಈಗ ಅಬಕಾರಿ ಕಚೇರಿಯಲ್ಲಿ ಚಾಲಕಿಯಾಗಿ ಖಾಕಿ ಧರಿಸುವಂತಾಗಿದೆ.**

ಡ್ರೈವಿಂಗ್‌ನಲ್ಲಿ ಹೆವಿ ಬ್ಯಾಡ್ಜ್ ಹೊಂದಿರುವ ಈಕೆ ಬಸ್ಸನ್ನು ಕೂಡ ಚಲಾಯಿಸುತ್ತಾರೆ. ತುರ್ತು ಕೆಲಸಗಳಿದ್ದಾಗಲೂ ಕರ್ತವ್ಯನಿರತ ಅಂಬಿಕಾ ಸರಳವಾಗಿಯೇ ನಿರ್ಭೀತಿಯಿಂದ ಜೀಪನ್ನು ಚಲಾಯಿಸುತ್ತಾರೆ. ಇವರ ಚಾಲನೆ ಖುಷಿ ಕೊಡುತ್ತದೆ ಎನ್ನುತ್ತಾರೆ ಅಬಕಾರಿ ಇನ್ಸ್‌ಪೆಕ್ಟರ್ ಡಿ. ಗೀತಾ. ಕೆಲವೊಮ್ಮೆ ಕಚೇರಿ ಕೆಲಸ ಮುಗಿಸುವುದು ತಡವಾದಾಗಲೂ ಕೂಡ ಅಂಬಿಕಾ ಒಂದು ಚೂರು ಬೇಸರಿಸಿಕೊಳ್ಳದೇ ಸುರಕ್ಷಿತವಾಗಿ ನನ್ನನ್ನು ಮನೆ ತಲುಪಿಸಿ ಹೋಗುತ್ತಾರೆ. ಪುರುಷ ಚಾಲಕರಿಗೆ ಸರಿ ಸಮಾನವಾಗಿ ಈಕೆ ವಾಹನ ಚಲಾಯಿಸುತ್ತಾರೆ, ಎಂದು ಪ್ರಶಂಸನೀಯ ಮಾತನಾಡುತ್ತಾರೆ.

ಆರಂಭದಲ್ಲಿ ಸಂಚಾರಿ ದಟ್ಟಣೆ ಜನನಿಬಿಡ ಪ್ರದೇಶಗಳಲ್ಲಿ ಡ್ರೈವಿಂಗ್ ಮಾಡುವುದು ಆ ಕ್ಷಣಕ್ಕೆ ಕಷ್ಟ ಎಂದೆನಿಸಿದ್ದರೂ, ಚಲಾಯಿಸುತ್ತಾ ಚಲಾಯಿಸುತ್ತಾ ಈಗ ಚಾಲನೆ ಸ್ಟೇರಿಂಗ್ ಕೈ ಚನ್ನಾಗಿ ಹಿಡಿದಿದೆ. ಅಲ್ಲದೆ ನನ್ನ ಕೆಲಸ ನನಗೆ ಖುಷಿ ಕೊಡುತ್ತಿದೆ ಎನ್ನುವುದು ಅಂಬಿಕಾ ಅವರ ಮಾತು. ಸದ್ಯ ನಮ್ಮ ಗಮನಕ್ಕೆ ಬಂದ ಸರ್ಕಾರಿ ಕಚೇರಿಯ ಮೊದಲ ಮಹಿಳಾ ಚಾಲಕಿ ಇವರಾಗಿದ್ದಾರೆ. ಒಟ್ಟಿನಲ್ಲಿ ತಳ ಸಮುದಾಯದ ಮಹಿಳೆಯೊಬ್ಬರು ಚಾಲಕಿಯಾಗಿ ಕಾರ್ಯನಿರ್ವಹಿಸುವ ಮೂಲಕ ತಮ್ಮ ಸಮುದಾಯದ ಇತರೆ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ■





Downloaded From:www.kpscvaani.com

# ಉನ್ನತ ಶಿಕ್ಷಣದ ಆಕಾಂಕ್ಷೆಗೆ ನೀರೆರೆವ

# ಮುಕ್ತ ವಿವಿ

ಶುಭಾ

**ಅನಿವಾರ್ಯ ಕಾರಣಗಳಿಂದ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದವರಿಗೆ ದೂರ ಶಿಕ್ಷಣ ಕ್ರಮದಲ್ಲಿ ಉನ್ನತ ಶಿಕ್ಷಣ ಪಡೆಯುವ ಅವಕಾಶವನ್ನು ಮುಕ್ತ ವಿವಿಯು ನೀಡುತ್ತಿದೆ.**

ಉನ್ನತ ಶಿಕ್ಷಣ ಪ್ರತಿಯೊಬ್ಬರ ಹಂಬಲ. ಆದರೆ ಅನೇಕರಿಗೆ ಇದು ಕೈಗೆಟುಕದ ಆಸೆ. ಕೆಲವರಿಗೆ ದುಡಿಮೆ ಮಾಡುತ್ತಲೇ ಉನ್ನತ ಶಿಕ್ಷಣವನ್ನು ಸಾಧ್ಯವಾಗಿಸಿಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಇಂಥವರ ಕನಸುಗಳನ್ನು ಕೈಗೆಟಕುವ ದರದಲ್ಲಿ ನನಸು ಮಾಡುವ ಮಹತ್ವಾಕಾಂಕ್ಷೆಯಿಂದಲೇ ಹುಟ್ಟಿಕೊಂಡಿದ್ದು ಕರ್ನಾಟಕ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾಲಯ (ಕೆಎಸ್‌ಓಯು).

ಈ ವಿಧಾನದಲ್ಲಿ ಅಧಿಕೃತವಾಗಿ ಉನ್ನತ ಶಿಕ್ಷಣವನ್ನು ನೀಡುವ ಕರ್ನಾಟಕದ ಏಕೈಕ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಯನ್ನೂ ಹೊಂದಿದೆ. ಹೀಗೆ ನೀಡುವ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳಿಗೆ ನವ ದೆಹಲಿಯ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯುಜಿಸಿ)ದ ಮಾನ್ಯತೆ ಕೂಡ ಇರುತ್ತದೆ.

ಈ ವಿಶ್ವವಿದ್ಯಾಲಯದಲ್ಲಿರುವ ಇನ್ನೊಂದು ಸದವಕಾಶವೇನೆಂದರೆ ಎರಡು ಕೋರ್ಸ್‌ಗಳನ್ನು ಏಕಕಾಲದಲ್ಲಿ ಓದುವ ಅವಕಾಶವಿರುವುದು. ಅಂದರೆ ಒಂದು ಭೌತಿಕ ಕ್ರಮದಲ್ಲಿ ಮತ್ತು ಇನ್ನೊಂದು ದೂರ ಶಿಕ್ಷಣ ಕ್ರಮದಲ್ಲಿ. ಲ್ಯಾಟರಲ್ ಅಥವಾ ನೇರ ಪ್ರವೇಶ ಆಯ್ಕೆಯನ್ನು ಕೂಡ ನೀಡಲಾಗುತ್ತದೆ. ಅರ್ಹತಾ ಮಾನದಂಡಗಳನ್ನು ಪೂರೈಸುವ 2ನೇ ಮತ್ತು 3ನೇ ವರ್ಷದ ವಿದ್ಯಾರ್ಥಿಗಳಿಗೆ ಇದು ಅನ್ವಯವಾಗುತ್ತದೆ. ಜುಲೈ ಮತ್ತು ಜನವರಿ ಆವೃತ್ತಿಗಳಿಗೆ ಪ್ರವೇಶಾವಕಾಶವಿದ್ದು ಅದನ್ನು ವರ್ಷ ಪೂರ್ತಿ ಇರುವ ಆನ್‌ಲೈನ್ ಮಾರ್ಗದ ಮೂಲಕ ಪಡೆದುಕೊಳ್ಳಬಹುದು ಅಥವಾ ಕೆಎಸ್‌ಓಯು ಕೇಂದ್ರ ಕಚೇರಿ, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳಲ್ಲಿಯೂ ಪಡೆದುಕೊಳ್ಳಬಹುದು. ಭೌತಿಕ ತರಗತಿಗಳು ಮತ್ತು ಪರೀಕ್ಷೆಗಳನ್ನು ನಡೆಸಲೆಂದೇ ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲಾಗಿದೆ. ಎಲ್ಲೆಲ್ಲಿ ಇಂತಹ ಕೇಂದ್ರಗಳಿವೆ ಎಂಬುದನ್ನು ಆನ್‌ಲೈನ್ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಸ್ನಾತಕ (ಯುಜಿ) ಮತ್ತು ಸ್ನಾತಕೋತ್ತರ (ಪಿಜಿ) ಕಾರ್ಯಕ್ರಮಗಳು ಎಂದು ಇಲ್ಲಿನ ಕೋರ್ಸ್‌ಗಳನ್ನು ವಿಭಾಗಿಸಲಾಗಿದೆ. ಬಿಎ, ಬಿಕಾಂ, ಬಿ.ಲಿಬ್, ಐಎಸ್‌ಸಿ, ಬಿಬಿಎ (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್), ಬಿಎಡ್ (ಸಿಇಟಿ ಪರೀಕ್ಷೆ ಮೂಲಕ ಕಾರ್ಯನಿರತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ), ಬಿಎಸ್‌ಸಿ (ಸಿಎಂ, ಪಿಎಂಸಿ, ಸಿಬಿಝಡ್ ಇತ್ಯಾದಿ), ಬಿಎಸ್‌ಸಿ ಹೋಮ್ ಸಾಯನ್ಸ್, ಬಿಎಸ್‌ಸಿ ಮಾಹಿತಿ ತಂತ್ರಜ್ಞಾನ, ಬಿಸಿಎ–ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್ ಕೋರ್ಸ್‌ಗಳು ಸ್ನಾತಕ ವಿಭಾಗದಲ್ಲಿ ಬರುತ್ತವೆ.





Downloaded From:www.kpscvaani.com



**ಐಐಟಿ ಧಾರವಾಡದಲ್ಲಿ ಕೋರ್ಸ್‌ಗಳು**

ಐಐಟಿ ಬಾಂಬೆ ಮಾರ್ಗದರ್ಶನದಲ್ಲಿ ಧಾರವಾಡದಲ್ಲಿ ಸ್ಥಾಪನೆಯಾಗಿರುವ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) 2016ರ ಶೈಕ್ಷಣಿಕ ವರ್ಷದಿಂದ ಕಾರ್ಯಾರಂಭ ಮಾಡಿದೆ. ಅಲ್ಲಿಂದೀಚೆಗೆ ಇಲ್ಲಿ ಮೂರು ಪ್ರಮುಖ ಕೋರ್ಸ್‌ಗಳನ್ನು ನೀಡಲಾಗುತ್ತಿದೆ. ಅವುಗಳೆಂದರೆ ಕಂಪ್ಯೂಟರ್ ಸಾಯನ್ಸ್ ಮತ್ತು ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮತ್ತು ಮೆಕಾನಿಕಲ್ ಎಂಜಿನಿಯರಿಂಗ್.

ಕರ್ನಾಟಕ ಸರ್ಕಾರ ಐಐಟಿ ಧಾರವಾಡಕ್ಕಾಗಿ 470 ಎಕರೆ ಜಾಗವನ್ನು ಮಂಜೂರು ಮಾಡಿದೆ. 2019ರಲ್ಲಿ ಪ್ರಧಾನಮಂತ್ರಿ ಶಾಶ್ವತ ಕ್ಯಾಂಪಸ್‌ಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ. 852 ಕೋಟಿರೂ. ವೆಚ್ಚದಲ್ಲಿ ಶಾಶ್ವತ ಕ್ಯಾಂಪಸ್‌ನ ಮೊದಲ ಹಂತದ ಕಾಮಗಾರಿ ಈಗಾಗಲೇ ಆರಂಭವಾಗಿದೆ. ಅರ್ಧ ತಾತ್ಕಾಲಿಕ ಕಟ್ಟಡದಲ್ಲಿ ಮತ್ತು ಇನ್ನರ್ಧ ಶಾಶ್ವತ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿವೆ. ಸದ್ಯ ಈಗ ಇಲಿ 856 ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿದ್ದಾರೆ.

ನಾಲ್ಕು ವರ್ಷದ ಬಿಟೆಕ್‌ನ ಏಳು ಕಾರ್ಯಕ್ರಮಗಳು, ಐದು ವರ್ಷದ ಬಿಎಸ್-ಎಂಎಸ್‌ನ ಒಂದು ಕಾರ್ಯಕ್ರಮ, ಮೆಕಾನಿಕಲ್ ಎಂಜಿನಿಯರಿಂಗ್‌ನಲ್ಲಿ ಎಂಟೆಕ್, ಎಂಎಸ್ ಮತ್ತು ಪಿಎಚ್‌ಡಿ ಕಾರ್ಯಕ್ರಮಗಳು ಚಾಲ್ತಿಯಲ್ಲಿವೆ. ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು 30 ಕೊಟಿರೂ.ವೆಚ್ಚದಲ್ಲಿ ನಡೆಯುತ್ತಿವೆ.

ಇಷ್ಟು ಮಾತ್ರವಲ್ಲದೆ ಒಂದು ವರ್ಷದ ಪದವಿ ಆಧಾರಿತ ಪಿಜಿ ಸರ್ಟಿಫಿಕೇಟ್ ಕೋರ್ಸ್‌ಗಳು ಕೂಡ ಲಭ್ಯವಿರುತ್ತವೆ. ಇದರಲ್ಲಿ ಇಂಗ್ಲಿಷ್, ಕಮ್ಯುನಿಕೇಶನ್ ಇಂಗ್ಲಿಷ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಕುವೆಂಪು ಸಾಹಿತ್ಯ, ಹಣಕಾಸು ನಿರ್ವಹಣೆ, ಮಾನವ ಸಂಪನ್ಮೂಲ ನಿರ್ವಹಣೆ, ಬಿಸಿನೆಸ್ ಲಾ, ಮಾಹಿತಿ ತಂತ್ರಜ್ಞಾನದಂತಹ ಅನೇಕ ವಿಷಯಗಳು ಇರುತ್ತವೆ. ಕನ್ನಡ ಪತ್ರಿಕೋದ್ಯಮ, ಅರ್ಲಿ ಚೈಲ್ಡ್‌ಕೇರ್ ಆ್ಯಂಡ್ ಎಜುಕೇಶನ್, ಮಾಹಿತಿ ತಂತ್ರಜ್ಞಾನದಂತಹ ವಿಷಯದಲ್ಲಿ ಡಿಪ್ಲೊಮಾ ಕೋರ್ಸ್, ಪಂಚಾಯತ್ ರಾಜ್, ನ್ಯೂಟ್ರಿಷನ್ ಮತ್ತು ಫುಡ್, ಮಾಹಿತಿ ಸಂವಹನ ತಂತ್ರಜ್ಞಾನ ವಿಷಯಗಳಲ್ಲಿ ಆರು ತಿಂಗಳ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕೂಡ ಮಾಡಬಹುದಾಗಿದೆ.

ಸ್ನಾತಕೋತ್ತರ ಕೋರ್ಸ್‌ಗಳಲ್ಲಿಯೂ ಅನೇಕ ವಿಷಯಗಳಿಗೆ ಅವಕಾಶವಿರುತ್ತದೆ. ಎಂ.ಎ. ಕೋರ್ಸ್‌ನಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ತೆಲುಗು, ಉರ್ದು, ಸಂಸ್ಕೃತ, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮುಂತಾದ ವಿಷಯಗಳಿವೆ.

ಪ್ರವೇಶ ಪರೀಕ್ಷೆಯ ಅವಶ್ಯಕತೆ ಇಲ್ಲದ ಎಂಬಿಎ ಕೋರ್ಸ್‌ನಲ್ಲಿ ಫೈನಾನ್ಸ್ ಮಾರ್ಕೆಟಿಂಗ್, ಎಚ್.ಆರ್. ಆಪರೇಷನ್ಸ್, ಟೂರಿಸಂ, ಕಾರ್ಪೋರೇಟ್ ಲಾ ಮತ್ತು ಮಾಹಿತಿ ತಂತ್ರಜ್ಞಾನ ವಿಷಯಗಳಿವೆ. ಎಂಕಾಂನಲ್ಲಿ ಎರಡು ವಿಶೇಷ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಅವುಗಳೆಂದರೆ ಅಕೌಂಟಿಂಗ್ ಮತ್ತು ಫೈನಾನ್ಸ್, ಎಚ್‌ಆರ್‌ಎಂ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಎಚ್‌ಆರ್‌ಎಂ/ಫೈನಾನ್ಸ್.

ಅದೇ ರೀತಿ ಎಂಎಸ್‌ಸಿ ಕೋರ್ಸ್‌ನಲ್ಲಿ ರಾಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತ, ಬಯೋಟೆಕ್ನಾಲಜಿ, ಬಯೋಕೆಮೆಸ್ಟ್ರಿ, ಕ್ಲಿನಿಕಲ್ ನ್ಯೂಟ್ರಿಷನ್ ಮತ್ತು ಡಯಬೆಟಿಕ್ಸ್, ಕಂಪ್ಯೂಟರ್ ಸಾಯನ್ಸ್, ಪರಿಸರ ವಿಜ್ಞಾನ, ಪ್ರಾಣಿಶಾಸ್ತ್ರ ಮುಂತಾದ ವಿಷಯಗಳು ಸೇರಿವೆ.

ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ, ಡಿಫೆನ್ಸ್, ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ವಿಶೇಷ ರಿಯಾಯಿತಿ ನೀಡಲಾಗುತ್ತದೆ. ಕೋವಿಡ್‌ನಿಂದಾಗಿ ಮೃತಪಟ್ಟ ಪೋಷಕರ ಮಕ್ಕಳಿಗೆ, ತೃತೀಯ ಲಿಂಗಿಗಳಿಗೆ, ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಪೂರ್ಣವಿನಾಯ್ತಿ ಕೂಡ ಇರುತ್ತದೆ.

ಬಡತನರೇಖೆಗಿಂತ ಕೆಳಗಿರುವ ಎಷ್ಟೊಂದು ಕುಟುಂಬಗಳಲ್ಲಿ ಮಕ್ಕಳು ದುಡಿಮೆ ಮಾಡುತ್ತಲೇ ಇನ್ನೊಂದು ಕಡೆಯಿಂದ ಉನ್ನತ ಶಿಕ್ಷಣವನ್ನೂ ಪಡೆಯುವ ಆಕಾಂಕ್ಷೆಗಳನ್ನು ಹೊಂದಿರುತ್ತಾರೆ. ಅಂತಹ ಎಷ್ಟೋ ಆಕಾಂಕ್ಷಿಗಳಿಗೆ ಈ ಕೋರ್ಸ್‌ಗಳು ಮುಕ್ತ ಅವಕಾಶವನ್ನು ನೀಡುತ್ತವೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಉನ್ನತ ಶಿಕ್ಷಣ ಎನ್ನುವುದು ಎಲ್ಲರಿಗೂ ಕೈಗೆಟುಕಬೇಕು ಎಂಬ ಕನಸನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ನನಸು ಮಾಡಲು ಹೊರಟಿರುವುದು ಉತ್ತಮ ಬೆಳವಣಿಗೆ.

ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ಮಾಹಿತಿ ಹಾಗೂ ಪ್ರವೇಶಕ್ಕೆ ಮುಕ್ತ ವಿಶ್ವವಿದ್ಯಾಲಯದ ವೆಬ್‌ತಾಣಕ್ಕೆ ಭೇಟಿ ನೀಡಬಹುದು (https://ksoumysuru.ac.in/



Downloaded From:www.kpscvaani.com



# ಸಿಹಿ ದ್ರಾಕ್ಷಿಯ ಕಣಜ ವಿಜಯಪುರ

ಜೆ.ಬಿ. ಸಾಲಕ್ಕಿ

ನಮ್ಮ ರೈತನ ಹೊಲಕ ನಾಕು ಬಗಸಿ ನೀರ ಕೊಡ್ರಿ, ಅವರು ಕ್ಯಾಲಿಫೋರ್ನಿಯಾದಂತಹ ಉತ್ಕೃಷ್ಟ ದ್ರಾಕ್ಷಿ, ದಾಳಿಂಬೆ, ಲಿಂಬಿ ನಿಮಗೆ ಕೊಡ್ತಾರ. ಈ ಮಾತನ್ನು ಶ್ರೀ ಸಿದ್ದೇಶ್ವರ ಶ್ರೀಗಳು ಆರು ದಶಕಗಳಿಂದ ರಾಜಕೀಯ ಧುರೀಣರಿಗೆ ಹೇಳುತ್ತ ಬಂದರು. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಬರದ ಜಿಲ್ಲೆಗೆ ನೀರೊದಗಿಸುವ ಕಾರ್ಯವನ್ನು ಪ್ರಮುಖವಾಗಿ ಕೈಗೆತ್ತಿಕೊಳ್ಳುವಂತೆ ಅವರು ಹೇಳುತ್ತಿದ್ದರು. ಹಾಗಾಗಿ ವಿಜಯಪುರ ರೈತನ ನೀರಿನ ಬವಣೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ ಅನ್ನದಾತನ ಹಸಿವು ತಣ್ಣಗಾದಂತಿದೆ.

ದ್ರಾಕ್ಷಿ, ದಾಳಿಂಬೆ ಬೆಳೆಯಲು ಗರಸು ಮಿಶ್ರಿತ ಅಷ್ಟೇನೂ ಫಲವತ್ತಾದ ಭೂಮಿ ಬೇಕಿಲ್ಲ. ಈ ಎರಡೂ ಬೆಳೆಗೆ ಅಲ್ಪ ಮಟ್ಟಿಗೆ ನೀರು ಮತ್ತು ಬಿಸಿಲಿನ ಒಣ ಹವಾಮಾನ ಬೇಕು. ಅದರಲ್ಲೂ ದ್ರಾಕ್ಷಿಗೆ ಬಿಸಿಲು ಮುಖ್ಯವಾಗಿ ಬೇಕು. ಮಹಾರಾಷ್ಟ್ರದ ಗಡಿ ಭಾಗ ತಿಕೋಟಾ, ಬಾಬಾನಗರ, ಬಿಜ್ಜರಗಿ, ಕನಮಡಿ ಗ್ರಾಮಗಳ ರೈತರನ್ನ ಬಹಳೇ ಆಕರ್ಷಿಸಿದ್ದು ದ್ರಾಕ್ಷಿ. ಎರಡು ದಶಕದ ಹಿಂದೆ ನೀರಿಗಾಗಿ 600-700 ಅಡಿ ಕೊಳವೇ ಭಾವಿ ತೋಡಿಸಿ ಬಂದ ಸ್ವಲ್ಪೇ ನೀರಿನಲ್ಲಿ ದ್ರಾಕ್ಷಿ ಬೆಳೆಯುವುದು ಸಾಮಾನ್ಯವಾಗಿತ್ತು. ಬೇಸಿಗೆಯಲ್ಲಿ ಬೋರ್ ನೀರು ನಿಂತಾಗ, ಟ್ರ್ಯಾಕ್ಟರ್ ಮುಖಾಂತರ ನೀರು ಖರೀದಿಸಿ ದ್ರಾಕ್ಷಿ ಬೆಳೆಯನ್ನು ಸಲುಹಿದ್ದು ಇತಿಹಾಸವಿದೆ.

ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಎಕರೆ ದ್ರಾಕ್ಷಿ ಬೆಳೆ ಇದು, 4 ಲಕ್ಷ ಟನ್ ದ್ರಾಕ್ಷಿ ಹಣ್ಣು ಬೆಳೆಯಲಾಗುತ್ತದೆ. ಹಣ್ಣು ಬೇಗನೆ ಬಾಡಿ ಹೋಗುವ ಕಾರಣದಿಂದ ಅದನ್ನು ನೆರಳಿನಲ್ಲಿ ಒಣಗಿಸಿ ಸ್ವಲ್ಪ ಟ್ರೀಟ್‌ಮೆಂಟ್ ಕೊಟ್ಟು ಮನೂಕ ಮಾಡುವುದು ಸಾಮಾನ್ಯವಾಗಿದೆ. ಒಮ್ಮೆ ನೆಟ್ಟ ದ್ರಾಕ್ಷಿಬೆಳೆ ಪ್ರತಿ ವರ್ಷ ಕಟಾವಿನೊಂದಿಗೆ 14 ರಿಂದ 16 ವರ್ಷ ಬಾಳಲಿದೆ. ಸಾಲಿನಿಂದ ಸಾಲಿಗೆ 10 ಅಡಿ, ಗಿಡದಿಂದ ಗಿಡಕ್ಕೆ 5 ರಿಂದ 6 ಅಡಿ ಅಂತರದಲ್ಲಿ ಹಚ್ಚಿ, ಅದಕ್ಕೆ ಬೇರೆ ಬೇರೆ ಜಾತಿಯ ಥಾಮ್ಸನ್, ಚಮನ್ ಮುಂತಾದವುಗಳಿಂದ ಕಸಿ (grafting) ಮಾಡಿ 8 ಅಡಿಯ ಕಂಬ ಹಾಗೂ 6-8 ಸಾಲಿನ ತಂತಿ ಜಾಳಿಗೆ ಮಾಡಿ ಅದರ ಮೇಲೆ ಬಳ್ಳಿಯನ್ನು ಏರಿಸಲಾಗುವುದು.

ಕಸಿ ಮಾಡಿದ ಎರಡು ವರ್ಷಕ್ಕೆ ಗಿಡ ಬೆಳೆದು ಹಣ್ಣು ನೀಡುವುದು. ಪ್ರತಿ ವರ್ಷ ಅಕ್ಟೋಬರ್ ತಿಂಗಳಲ್ಲಿ ಬೆಳೆದ ಗಿಡದ ಎಲ್ಲ ಟೊಂಗೆಗಳನ್ನು ಕತ್ತರಿಸಿ ಅದರ ಮೇಲೆ ನೀಲಿತುತ್ತೆಯನ್ನು ಹಚ್ಚಲಾಗುವುದು. ಹೀಗೆ ಕಟಾವು ಮಾಡಿದ ಗಿಡಕ್ಕೆ 60-70 ದಿನಕ್ಕೆ ಹೂ, ಹಣ್ಣು ಬಿಡುವ ಪ್ರಕ್ರಿಯೆ ಪ್ರಾರಂಭವಾಗುವುದು. 120 ದಿನಕ್ಕೆ ಕಾಯಿ ನೀರು ತುಂಬಿ ಉತ್ಕೃಷ್ಟ ಬೆಳೆ ಪ್ರಾರಂಭವಾಗುವುದು. ಕಟಾವು ಮಾಡಿದ ದಿನದಿಂದಲೇ ಔಷಧಿ ಸ್ಪ್ರೇ ಅವಶ್ಯ. ಧಾವಣಿ ಮಿಲ್ಡೀವ್ಸ, ಕರ್ಪಾ, ಬುರಿ ರೋಗ ದ್ರಾಕ್ಷಿ ಬೆಳೆಗೆ ಸಾಮಾನ್ಯ. ತಂಪು ಹವೆ ಹಾಗೂ ಮಳೆಯು ದ್ರಾಕ್ಷಿ ಬೆಳೆಯನ್ನು ಹಾನಿ ಮಾಡುತ್ತದೆ. ಅದಕ್ಕಾಗಿ ಪಕ್ಕದ ಬೆಳಗಾವಿ ಜಿಲ್ಲೆಯ ರೈತರು ವಿಜಯಪುರ ಜಿಲ್ಲೆಯಲ್ಲಿ ಬಿಸಿಲು ಹೆಚ್ಚಿರುವುದರಿಂದ ಇಲ್ಲೇ ಮನೂಕ ಮಾಡುವುದು ಸಾಮಾನ್ಯ. ಕಟಾವಿನ 120 ದಿನಗಳ ನಂತರ ಧಾವಣಿಯಿಂದ ಪಾರಾದ ಬೆಳೆಗೆ ಸಕ್ಕರೆ ಅಂಶ ಹಾಗೂ ಹಣ್ಣು ಉದ್ದಾಗಿ ಬೆಳೆಯುವ ವಿಶೇಷ ಔಷಧಿಯ ಸ್ಪ್ರೇ ಅತೀ ಅವಶ್ಯಕ.

ಒಟ್ಟು ಬೆಳೆಯ 150-160 ದಿನಗಳಲ್ಲಿ ಪ್ರತಿ ದಿನವೂ ಒಂದಲ್ಲ ಒಂದು ಔಷಧಿ, ಟಾನಿಕ್ ಬೇಕೇ ಬೇಕು. ಸಾಮಾನ್ಯವಾಗಿ ದ್ರಾಕ್ಷಿ ಬೆಳೆಗಾರರ ಮಾತಿನಲ್ಲಿ "ಮನೆಯಲ್ಲಿ ಯಾರಾದರೂ ಸತ್ತರೂ ಕೂಡಾ ಬೆಳೆಗೆ ಔಷಧಿ ಸ್ಪ್ರೇ ಮಾಡಲೇ ಬೇಕೆಂಬ

**ಸುಮಾರು ಒಂದು ಲಕ್ಷ ಎಕರೆ ದ್ರಾಕ್ಷಿ ಬೆಳೆಯನ್ನು ಬೆಳೆಯಲಾಗುತ್ತಿರುವ ವಿಜಯಪುರ ಜಿಲ್ಲೆಯು ದ್ರಾಕ್ಷಿ ಕಣಜ ಎಂಬ ಖ್ಯಾತಿಗೆ ಪಾತ್ರವಾಗಿದೆ**






Downloaded From:www.kpscvaani.com

ಮಾತಿದೆ" ಅದು ತಪ್ಪಿದರೆ ಅಪಾರ ಹಾನಿಯೇ. ಪ್ರಸಕ್ತದಲ್ಲಿ ಚಿಕ್ಕ ಟ್ರ್ಯಾಕ್ಟರ್‌ಗಳಿಗೆ 200 ಲೀಟರ್ ಟ್ಯಾಂಕ್‌ಗೆ ಬ್ಲೋಅರ್ ಅಳವಡಿಸಿ ಸಾಲಿನಲ್ಲಿ ಟ್ರ್ಯಾಕ್ಟರ್ ಮೂಲಕ ಔಷಧಿ ಸಿಂಪರಣೆ ಮಾಡಿದರೆ ಕೂಲಿ ಖರ್ಚು ತಗ್ಗಲಿದೆ. ಗಿಡಗಳ ಮೇಲೆ ಯಥೇಚ್ಛವಾಗಿ ಬೆಳೆದ ಎಲೆಗಳೇ ಔಷಧಿಯನ್ನು ಹೀರಿಕೊಳ್ಳುತ್ತವೆ. ಹಾಗಾಗಿ ಅದನ್ನು ತಪ್ಪಿಸಲು ಒಂದು ಬೆಳೆಗೆ 2–3 ಸಲ ಕಿಲೀಜ (ಹೆಚ್ಚಿನ ಎಲೆ) ತಗೆಯುವ ಕೆಲಸವನ್ನು ಕೂಲಿಯವರಿಂದ ಮಾಡಿಸಲಾಗುತ್ತದೆ. 135 ದಿನಕ್ಕೆ 18% ಇದ್ದ ಸಕ್ಕರೆ ಪ್ರಮಾಣ ಬಿಸಿಲು ಹೆಚ್ಚಾದಂತೆ 150 ದಿನಕ್ಕೆ ಸಕ್ಕರೆ ಪ್ರಮಾಣ 22% ರಿಂದ 28% ಏರುತ್ತದೆ. ಹಾಗಾಗಿ ಹಿಂದೆ ಕಂಟೇನರ್ ಮೂಲಕ ಪಾಶ್ಚಾತ್ಯ ದೇಶಗಳಿಗೆ ರಫ್ತಾಗುತಿದ್ದ ದ್ರಾಕ್ಷಿ ಇಂದು ರಫ್ತಾಗುತಿಲ್ಲ. ಕಾರಣ ಪಾಶ್ಚಿಮಾತ್ಯರಿಗೆ 18% ಸಕ್ಕರೆಯ ಪ್ರಮಾಣ ಇರಬೇಕು. ಆದರೆ ನಮ್ಮ ಹಣ್ಣಿನಲ್ಲಿ 22%–28% ಇರುವುದರಿಂದ ಹಾಗೂ ಸಾಗಾಣಿಕೆಗೆ ತೊಂದರೆಯಾಗುತ್ತಿರುವುದರಿಂದ ಸಾಕಷ್ಟು ದಿನ ಶೇಖರಿಸಿ ಇಡಲು ಅನುಕೂಲವಾಗುವ ಒಣದ್ರಾಕ್ಷಿ (ಮನೂಕ) ಪ್ರಕ್ರಿಯೆಗೆ ಅನಿವಾರ್ಯವಾಗಿ ರೈತ ಸಮುದಾಯ ವಾಲಬೇಕಾಗಿದೆ.

**ಮನೂಕ ಮಾಡುವ ಪದ್ಧತಿ**

ದ್ರಾಕ್ಷಿಯ ಗಿಡ ಕಟಾವು ಆದ 135–140 ದಿನದೊಳಗೆ ಸಕ್ಕರೆಯ ಪ್ರಮಾಣ 26–28% ಬಂದ ಮೇಲೆ ಹಣ್ಣನ್ನು ಕಟ್ ಮಾಡಿ 150 ಅಡಿ ಉದ್ದ 5 ಅಡಿ ಅಗಲದ ಸುಮಾರು 15 ಅಡಿ ಎತ್ತರದ ಮನೂಕ ಶೆಡ್ ನಿರ್ಮಿಸಿ ಅದರ ಸುತ್ತೆಲ್ಲ ಪ್ಲಾಸ್ಟಿಕ್ ಹೊದಿಕೆ ಮಾಡಿ ಕಾರ್ಬೋರೇಟ್ ದ್ರಾವಣದಲ್ಲಿ ಅದ್ದಿ ಚಿಕ್ಕ ಚಿಕ್ಕ ಜಾಳಿಗೆಯ ಮೇಲೆ ಹಾಕಿ ನೆರಳಿನಲ್ಲಿ ಸುಮಾರು 11 ರಿಂದ 15 ದಿನ ಒಣಗಿಸಲಾಗುವುದು. ಅದರ ಮಧ್ಯೆ ಮತ್ತೆರಡು ಸಲ ಔಷಧಿ ಮತ್ತು ನೀರಿನ ಸಿಂಪರಣೆ ಮಾಡಲಾಗುವುದು. ದ್ರಾಕ್ಷಿ ಸುಮಾರು 15–16 ದಿನದಲ್ಲಿ ಸಂಪೂರ್ಣ ಒಣಗಿದಾಗ ಅದನ್ನು ಗ್ರೇಡಿಂಗ್ ಮಶಿನ್‌ಗೆ ಹಾಕಿದಾಗ ಅವು ನಾಲ್ಕು ವಿವಿಧ ಗ್ರೇಡ್‌ಗಳಾಗಿ ನಂ.1 ಭಾಗ ಸಹಜ ಉಪಯೋಗಕ್ಕಾಗಿ 75–80% ಬೇರ್ಪಡೆಯಾದರೆ, ಚಿಕ್ಕವು ಮತ್ತು ಅತೀ ಚಿಕ್ಕವು ಹಾಗೂ ಕಂದು ಬಣ್ಣದ ಒಣ ದ್ರಾಕ್ಷಿಯನ್ನು ಪ್ರತ್ಯೇಕವಾಗಿ ಬೇರ್ಪಡಿಸಲಾಗುವುದು. ಗ್ರೇಡಿಂಗ್ ಮಶಿನ್‌ನವರೇ 15 kg ಯ ರಟ್ಟಿನಿಂದ



ಮಾಡಿದ ಬಾಕ್ಸಿನಲ್ಲಿ ಉತ್ಕೃಷ್ಟ ದ್ರಾಕ್ಷಿಯನ್ನು ಪ್ಯಾಕ್ ಮಾಡುವರು. ಪ್ರತಿ ಮನೂಕ ಶೆಡ್‌ಗಳಿಂದ 4–6 ಟನ್ ಮನೂಕ ತಯಾರಾಗುತ್ತದೆ. ಆ ಬಾಕ್ಸ್‌ಗಳನ್ನು ಅಠಟಜ ಖಣಠಡಿಚಿರಜ ನಲ್ಲಿ ಬೇಕಾದಷ್ಟು ದಿನ ಶೇಖರಿಸಿಡಬಹುದು.

ಮನೂಕ ಮಾಡುವುದು ಅನಿವಾರ್ಯವಾದ ಕಾರಣ ಪ್ರಸಕ್ತದಲ್ಲಿ ವಿಜಯಪುರ ಜಿಲ್ಲೆಯಲ್ಲಿ ಬಹುಶಃ ಪ್ರತಿ 2–3 ಎಕರೆ ದ್ರಾಕ್ಷಿ ಬೆಳೆಯುವ ರೈತರೂ ಮನೂಕ ಶೆಡ್ ಮಾಡಿಕೊಂಡು ಸ್ವಾವಲಂಬಿಯಾಗಿದ್ದಾರೆ. ಸುಮಾರು 50 ಗ್ರೇಡಿಂಗ್ ಮಶಿನ್, 18 cold storage ಜಿಲ್ಲೆಯಲ್ಲಿವೆ. ಸರಕಾರದ ಆರ್ಥಿಕ ಸಹಾಯವೂ ಇವೆಲ್ಲಕ್ಕಿವೆ. 1.25 ಲಕ್ಷ ಟನ್ ಮನೂಕ (ಒಣದ್ರಾಕ್ಷಿಯ) ದ ಉತ್ಪನ್ನವಾದರೂ ನಮ್ಮ ರಾಜ್ಯದಲ್ಲಿಯೇ ಎಲ್ಲವನ್ನು ಮಾರಾಟ ಮಾಡಲು ಸಾಧ್ಯವಿಲ್ಲದ ಕಾರಣ 85000 ಟನ್‌ನಷ್ಟು ಒಣದ್ರಾಕ್ಷಿಯು ಮಹಾರಾಷ್ಟ್ರದ ತಾಸಗಾಂವ, ಸಾಂಗಲಿ, ಕೋಲ್ಹಾಪುರ ಮಾರುಕಟ್ಟೆಗೆ ಹೋಗುತ್ತದೆ.

ಇತ್ತೀಚೆಗಿನ ಬೆಳವಣಿಗೆಯಲ್ಲಿ ವಿಜಯಪುರ ಜಿಲ್ಲೆಯ ಕಪ್ಪು ದ್ರಾಕ್ಷಿ WINE ಗೆ ಹೆಸರಾಗಿದೆ. ಆ ಬೆಳೆಗೆ ರೋಗದ ಭಯವೂ ಕಡಿಮೆ. ಪಾಶ್ಚಿಮಾತ್ಯರ ಬೇಡಿಕೆ ಖಇಆ ಘಾಖಓಇ ಗೂ ಹೆಚ್ಚಾದ ಕಾರಣ ಕರಿ ದ್ರಾಕ್ಷಿ ಹಾಗೂ 2–3 RED WINE ಕಾರ್ಖಾನೆಗಳೂ ತಲೆ ಎತ್ತಿವೆ.

ಒಟ್ಟಿನಲ್ಲಿ ವಿಜಯಪುರ ಜಿಲ್ಲೆಯ ದ್ರಾಕ್ಷಿ ರೈತನಿಗೆ ಹೊಸ ತಂತ್ರಜ್ಞಾನವು ಹೆಚ್ಚಿನ ಆದಾಯವನ್ನು ತಂದುಕೊಟ್ಟಿದೆ. ಇದು ಸಂತ ಶ್ರೀ ಸಿದ್ದೇಶ್ವರ ಗುರುಗಳ ಅನ್ನದಾತನ ಕನಸಿಗೆ ಬಣ್ಣ ನೀಡುವ ನಿಟ್ಟಿನಲ್ಲಿದೆ ಎಂದರೆ ತಪ್ಪಾಗಲಾರದು. ■



Downloaded From:www.kpscvaani.com



# ಸಿರಿಧಾನ್ಯಗಳಿಗೆ ಈಗ ಶುಕ್ರದೆಸೆ

**ಹವಾಮಾನ ವೈಪರೀತ್ಯ ಎದುರಿಸಿ ಬೆಳೆಯುವ ಸಾಮರ್ಥ್ಯ ಸಿರಿಧಾನ್ಯಗಳಿಗೆ ಇರುವ್ಯದರಿಂದ ಬೇಸಾಯ ಲೋಕದಿಂದ ದೂರವಾಗಿದ್ದ ಸಿರಿಧಾನ್ಯಗಳಿಗೆ ಈಗ ಶುಕ್ರದೆಸೆ ಆರಂಭವಾಗಿದೆ.**

● ಆನಂದತೀರ್ಥ ಪ್ಯಾಟಿ

ಬರೀ ಅನ್ನ, ರೊಟ್ಟಿಗೆ ಸೀಮಿತವಾಗಿದ್ದ ಸಿರಿಧಾನ್ಯಗಳಿಗೀಗ ಬಹುಬಗೆಯ ಅವತಾರ ದಕ್ಕಿದೆ. ಒಂದೊಮ್ಮೆ ಕಿರುಧಾನ್ಯ, ತೃಣಧಾನ್ಯ ಎಂಬ ಮೂದಲಿಕೆಗೆ ಒಳಗಾಗಿದ್ದ ಸಿರಿಧಾನ್ಯಗಳಿಗೆ ಈಗ ಶುಕ್ರದೆಸೆ! ಜಿಲ್ಲಾ, ತಾಲ್ಲೂಕು ಕೇಂದ್ರಗಳೂ ಸೇರಿದಂತೆ ನಗರ ಪಟ್ಟಣಗಳಲ್ಲಿ ಸಿರಿಧಾನ್ಯ ಮೇಳಗಳು ನಡೆಯುತ್ತಿವೆ. ಹಳ್ಳಿಭಾಗದಲ್ಲಿ ಅಪರಿಚಿತವಾಗಿದ್ದ ಬರಗು, ಕೊರಲೆ, ಊದಲು ಪದಗಳು ಈಗ ಮಹಾನಗರಗಳ ಅಡುಗೆ ಮನೆಯೊಳಗೆ ಬರುತ್ತಿವೆ. ಒಂದೂವರೆ ದಶಕದ ಹಿಂದೆ ಕಾಣದಿದ್ದ ಸಿರಿಧಾನ್ಯಗಳು ಈಗ ವ್ಯಾಪಕವಾಗಿವೆ. ಅಕ್ಕಿಯಿಂದ ಮಾತ್ರ ಅನ್ನ ಎಂಬ ಮಾತು ಈಗ ಬದಲಾಗಿದೆ.

ಊಟಕ್ಕೆ ಅಕ್ಕಿ ಕೊಳ್ಳಲು ಶಕ್ತಿಯಿಲ್ಲ ಎಂಬ ಕಾರಣಕ್ಕಾಗಿ ನವಣೆ, ಸಜ್ಜೆ ಬಳಸುತ್ತಿದ್ದುದನ್ನು ನೆನಪಿಸಿಕೊಳ್ಳುವ ಹಿರಿಯ ಪೀಳಿಗೆಯನ್ನು ಈಗಲೂ ನೋಡಬಹುದು. ಅದನ್ನು ಅವರು ಬಹು ಬೇಸರ ಹಾಗೂ ನೋವಿನಿಂದ ಹೇಳಿಕೊಳ್ಳುತ್ತಿದ್ದರು. ಆದರೆ ಈಗ ಪರಿಸ್ಥಿತಿ ಉಲ್ಟಾ. 'ನಾವೀಗ ವಾರದಲ್ಲಿ ನಾಲ್ಕೈದು ದಿನ ನವಣೆ, ಸಾಮೆ ಬಳಸ್ತಾ ಇದೀವಿ ಗೊತ್ತಾ' ಎಂದು ಹೆಮ್ಮೆಯಿಂದ ಹೇಳುವ ದಿನ ಬಂದಿದೆ. ಕಾಯಿಲೆಗಳ ಗೂಡಾದ ದೇಹಕ್ಕೆ ಸಿರಿಧಾನ್ಯಗಳು ಔಷಧಿಯಂತೂ ಹೌದು. ಅತ್ತ ಜನಸಾಮಾನ್ಯರ ಆರೋಗ್ಯಕ್ಕೂ, ಇತ್ತ ರೈತರ ಆದಾಯ ಭದ್ರತೆಗೂ ಹೇಳಿ ಮಾಡಿಸಿದ ಧಾನ್ಯಗಳಿವು.

ನಮ್ಮ ನಾಡಿನ ಭವ್ಯ ಚರಿತ್ರೆಯ ಹಾಗೆಯೇ ಸಿರಿಧಾನ್ಯಗಳ ಇತಿಹಾಸವೂ ಸೊಗಸಾಗಿದೆ. ರೈತ ಸಮುದಾಯದ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಾಗುತ್ತ, ಸ್ಥಳದಿಂದ ಸ್ಥಳಕ್ಕೆ ಹಾಗೂ ಆಯಾ ಪ್ರದೇಶಕ್ಕೆ ಹೊಂದಿಕೊಳ್ಳುತ್ತ, ವಿಕಾಸವಾಗುತ್ತ ಬಂದ ಸಿರಿಧಾನ್ಯಗಳು ಭಾರತೀಯ ಕೃಷಿ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿವೆ. ಪ್ರತಿಯೊಂದು ಸಿರಿಧಾನ್ಯವೂ ನಿರ್ದಿಷ್ಟ ಉದ್ದೇಶದೊಂದಿಗೆ ವಿಕಸನವಾಗುತ್ತ, ಮನುಷ್ಯನ ಶರೀರಕ್ಕೆ ಅಗತ್ಯವಾದ ಹಲವು ಬಗೆಯ


Downloaded From:www.kpscvaani.com



ಪೋಷಕಾಂಶಗಳನ್ನು ಒದಗಿಸಲು ವಿಶಿಷ್ಟವಾಗಿ ರೂಪುಗೊಂಡಿವೆ.

ಅನಾದಿ ಕಾಲದಿಂದಲೂ ಮಾನವ ಸಮುದಾಯದ ಆಹಾರದ ಅವಿಭಾಜ್ಯ ಅಂಗವಾಗಿ ಸಿರಿಧಾನ್ಯಗಳು ಸಾಗಿಬಂದಿವೆ. ಪುರಾತತ್ವ ಇಲಾಖೆಯು ಹರಪ್ಪ ಮತ್ತು ಮಹೆಂಜೊದಾರೊ ಪ್ರದೇಶದಲ್ಲಿ ನಡೆಸಿದ ಉತ್ಖನನದಲ್ಲಿ ಹಲವು ಬಗೆಯ ಸಿರಿಧಾನ್ಯಗಳು ಪತ್ತೆಯಾಗಿವೆ. ನಾಗರಿಕತೆಯ ತೊಟ್ಟಿಲು ಎಂದು ಹೆಸರಾದ ಆಫ್ರಿಕಾ ಮತ್ತು ಮಾಯಾ, ಇಂಕಾ, ಅಜ್ಟೆಕ್ ಸಮುದಾಯಗಳು ತಮ್ಮ ಅಡುಗೆಗೆ ಸಿರಿಧಾನ್ಯ ಬಳಸುತ್ತಿದ್ದುದು ಕಂಡುಬಂದಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಪ್ರಚಾರದಲ್ಲಿರುವ ಸಿರಿಧಾನ್ಯಗಳು ಬೇಸಾಯ ಜಗತ್ತಿಗೆ ಹೊಸದೇನೂ ಅಲ್ಲ. ಗ್ರಾಮೀಣ ಭಾಗದ ಹಿರಿಯರನ್ನು ಮಾತಾಡಿಸಿದರೆ ಸಾಕು, ಈ ಧಾನ್ಯಗಳ ಹತ್ತಾರು ಮುಖಗಳು ಹೊರಬರುತ್ತವೆ.

ಭಾರತದಂಥ ಸಮಶೀತೋಷ್ಣ ವಲಯದ ದೇಶಗಳಲ್ಲಿ ಸಿರಿಧಾನ್ಯಗಳು ಪೌಷ್ಟಿಕ ಆಹಾರಕ್ಕೆ ಹೇಳಿ ಮಾಡಿಸಿದಂಥವು. ಹಳ್ಳಿಯ ಪ್ರತಿ ಮನೆಯಲ್ಲೂ ಸಜ್ಜೆ ರೊಟ್ಟಿ, ಜೋಳದ ಸಂಗಟಿ, ನವಣಕ್ಕಿ ಅನ್ನ ಸಾಮಾನ್ಯ ಅಡುಗೆಯಾಗಿದ್ದವು. 'ಹಬ್ಬದ ಸಂದರ್ಭದಲ್ಲಿ ಮಾತ್ರ ಅಕ್ಕಿ ಅನ್ನ ಮಾಡುತ್ತಿದ್ದೆವು. ಅದನ್ನು ಬಿಟ್ಟರೆ ಯಾರಾದರೂ ಅನಾರೋಗ್ಯಕ್ಕೆ ಈಡಾದರೆ ಅವರಿಗೆ ಮಾತ್ರ ಅಕ್ಕಿ ಅನ್ನ' ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ದೇಶವು ಸ್ವಾತಂತ್ರ್ಯ ಪಡೆದ ಬಳಿಕ ಆಹಾರದ ಉತ್ಪಾದನೆಯತ್ತ ಗಮನ ಹರಿಸಲಾಯಿತು. ಬೇರೆ ದೇಶಗಳತ್ತ ಆಹಾರಕ್ಕಾಗಿ ಕೈಚಾಚುವ ಶೋಚನೀಯ ಸ್ಥಿತಿಯನ್ನು ತಪ್ಪಿಸಲು ಹಸಿರು ಕ್ರಾಂತಿ ಯೋಜನೆಯನ್ನು ರೂಪಿಸಲಾಯಿತು. ಆದರೆ ಆ ಯೋಜನೆಯನ್ನು ವಿಸ್ತಾರಗೊಳಿಸುವ ಭರದಲ್ಲಿ ಕೃಷಿ ವೈವಿಧ್ಯ ತೆರೆಮರೆಗೆ ಸರಿಯಿತು. ಅಧಿಕ ಇಳುವರಿ ಕೊಡುವ ಹೈಬ್ರಿಡ್ ತಳಿಗಳನ್ನು ರೈತರಿಗೆ ಕೊಟ್ಟು, ಅದಕ್ಕೆ ರಾಸಾಯನಿಕ ಗೊಬ್ಬರಗಳನ್ನು ಒದಗಿಸಲಾಯಿತು. ಬೆಳೆಗೆ ರೋಗ-ಕೀಟ ಬಾಧೆಯು ಎದುರಾದಾಗ ಅದನ್ನು ನಿಯಂತ್ರಿಸಲು ಘನಘೋರ ಪೀಡೆನಾಶಕಗಳನ್ನು ಪೂರೈಸಲಾಯಿತು. ಇದರಿಂದಾಗಿ ಆಹಾರ ಸೇವನೆಯು ಶರೀರವನ್ನು ಸದೃಢಗೊಳಿಸುವ ಬದಲಿಗೆ, ರೋಗಗಳ ಗೂಡನ್ನಾಗಿ ಮಾಡುವುದು ಕ್ರಮೇಣ ಬಯಲಿಗೆ ಬಂತು. ಪರಿಸರ ಕಾರ್ಯಕರ್ತರು, ಕೃಷಿಕರ ಸಂಘಟನೆಗಳು ನಿಧಾನವಾಗಿ ಈ ವಿಷವರ್ತುಲವನ್ನು ಬಯಲಿಗೆ ಎಳೆಯಲು ಶುರು ಮಾಡಿದರು. ಆ ನೆಲೆಯಲ್ಲಿ ಸಿರಿಧಾನ್ಯಗಳು, ಕೃಷಿ ಹಾಗೂ ಆರೋಗ್ಯ ಸಮಸ್ಯೆಗೆ ಸಮರ್ಪಕವಾದ ಪರಿಹಾರ ಒದಗಿಸಬಲ್ಲವು ಎಂಬುದನ್ನು ಪ್ರತಿಪಾದಿಸಿದರು.

ಕೇವಲ ಹದಿನೈದು ವರ್ಷಗಳ ಹಿಂದೆ ಅಪರಿಚಿತವಾಗಿದ್ದ ನಾನಾ ಬಗೆಯ ಸಿರಿಧಾನ್ಯಗಳು, ಈಗ ಎಲ್ಲರ ಅಡುಗೆಮನೆಗೆ ಪ್ರವೇಶ ಪಡೆದಿವೆ. ಸಿರಿಧಾನ್ಯಗಳ ವಿಶೇಷತೆ ಇರುವುದು ಅವುಗಳಲ್ಲಿನ ವೈವಿಧ್ಯದಲ್ಲಿ. ಒಂಬತ್ತು ಬಗೆಯ ಸಿರಿಧಾನ್ಯಗಳ ಪೈಕಿ ಸಜ್ಜೆ, ಜೋಳ ಹಾಗೂ ರಾಗಿ ಹೆಚ್ಚು ಬಳಕೆಯಲ್ಲಿವೆ. ನವಣೆ, ಸಾಮೆ ಧಾನ್ಯಗಳು ಉತ್ತರ ಕರ್ನಾಟಕದ ಹಲವೆಡೆ ಗೊತ್ತು. ಅಷ್ಟು ಬಿಟ್ಟರೆ ಹಾರಕ, ಕೊರಲೆ, ಊದಲು, ಬರಗು ಅಪರಿಚಿತ.

ರಸಗೊಬ್ಬರ, ಕೀಟನಾಶಕ ಅಂತೆಲ್ಲ ಒಳಸುರಿ ಬಯಸುವ ಹೈಬ್ರಿಡ್ ತಳಿಗಳಿಗೆ ಹೋಲಿಸಿದರೆ, ಸಿರಿಧಾನ್ಯಗಳ ಬೇಸಾಯ ವೆಚ್ಚ ಏನೇನೂ ಅಲ್ಲ. ಆದರೆ ಹೈಬ್ರಿಡ್ ತಳಿಗಳ ಆಗಮನ ಸಂದರ್ಭದಲ್ಲಿ ಸಿರಿಧಾನ್ಯಗಳು ತೆರೆಮರೆಗೆ ಸರಿಯುತ್ತ ಹೋದವು. ಯಾವುದೇ ಪದಾರ್ಥ ನಮ್ಮೆದುರು ಇದ್ದಾಗ ಅದಕ್ಕೆ ಬೆಲೆ ಇರುವುದಿಲ್ಲ. ಕಳೆದು ಹೋದಾಗಲೇ ಅದರ ಮೌಲ್ಯ ಗೊತ್ತಾಗುತ್ತದೆ ಎಂಬ ಮಾತೊಂದಿದೆ. ಈ ಮಾತು ಸಿರಿಧಾನ್ಯದ ವಿಷಯದಲ್ಲಿ ನಿಜವಾಯಿತು. ತೃಣಧಾನ್ಯ ಎಂದು ಮೂಲೆಗೆ ಸರಿಸಿದ ಆಧುನಿಕ ಕೃಷಿ ವಿಜ್ಞಾನವು ಈಗ ಸಿರಿಧಾನ್ಯಗಳಿಗೆಂದೇ ಪ್ರತ್ಯೇಕ ವಿಭಾಗಗಳನ್ನೂ ವಿಜ್ಞಾನಿಗಳನ್ನೂ ನೇಮಕ ಮಾಡಿಕೊಳ್ಳುತ್ತಿದೆ.

ಪ್ರತಿಯೊಂದು ಸಿರಿಧಾನ್ಯದಲ್ಲಿಯೂ





Downloaded From:www.kpscvaani.com

ಹತ್ತಾರು ಪೋಷಕಾಂಶಗಳಿವೆ. ಆಹಾರ ತಜ್ಞರ ಪ್ರಕಾರ ಸಿರಿಧಾನ್ಯಗಳು ಅಕ್ಕಿ ಮತ್ತು ಗೋಧಿಗಿಂತ ಐದು ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಪ್ರೋಟಿನ್, ವಿಟಮಿನ್ ಹಾಗೂ ಖನಿಜಗಳನ್ನು ಒಳಗೊಂಡಿವೆ. ಸಿರಿಧಾನ್ಯಗಳು ಅಧಿಕ ಅಮಿಲೋಸ್ ಅಂಶವನ್ನು ಹೊಂದಿದ್ದು, ಡಯಟರಿ ಫೈಬರ್‌ಗಳ (ಪೋಷಕ ನಾರು) ಅತ್ಯುತ್ತಮ ಮೂಲಗಳಾಗಿವೆ. ಅವು ಸಕ್ಕರೆಯನ್ನು ನಿಧಾನ ಹಾಗೂ ಕರಾರುವಾಕ್ಕಾಗಿ ಬಿಡುಗಡೆ ಮಾಡುತ್ತವೆ. ಹಲವು ರೋಗಗಳನ್ನು ನಿಯಂತ್ರಿಸುವ ಫಿನೋಲಿಕ್ ಆಸಿಡ್, ಫ್ಲೆವನೋಯ್ಡ್ ಹಾಗೂ ಫೈಟೊ ಅಲೆಕ್ಸಿನ್‌ನಂಥ ಫೈಟೊ ನ್ಯೂಟ್ರಿಯಂಟ್‌ಗಳನ್ನು ಸಿರಿಧಾನ್ಯಗಳು ಹೊಂದಿವೆ. ಅವು ಶಕ್ತಿಶಾಲಿ ಆ್ಯಂಟಿ–ಆಕ್ಸಿಡೆಂಟ್‌ಗಳು. ಕಾರ್ಬೊಹೈಡ್ರೇಟ್ ಮಾತ್ರವಲ್ಲ, ಉತ್ತಮ ಗುಣಮಟ್ಟದ ಕೊಬ್ಬು ಕೂಡ ಪೂರೈಸುತ್ತವೆ. ಮೆಗ್ನಿಷಿಯಂ, ಕಬ್ಬಿಣ, ರಂಜಕ ಹಾಗೂ ಪೊಟಾಷಿಯಂನಂಥ ಖನಿಜಾಂಶಗಳಿಂದ ಸಿರಿಧಾನ್ಯಗಳು ಸಂಪದ್ಭರಿತವಾಗಿವೆ. ಉದಾಹರಣೆಗೆ, ರಾಗಿಯಲ್ಲಿರುವ ಕ್ಯಾಲ್ಸಿಯಂ ಪ್ರಮಾಣವು ಗೋಧಿ ಅಥವಾ ಅಕ್ಕಿಯಲ್ಲಿ ಇರುವುದಕ್ಕಿಂತ ಹತ್ತು ಪಟ್ಟು ಹೆಚ್ಚು.

ಮರೆತು ಹೋದ ಆಹಾರಧಾನ್ಯಗಳು ಮತ್ತೆ ಮುನ್ನೆಲೆಗೆ ಬರುತ್ತಿರುವುದು ಸ್ವಾಗತಾರ್ಹ. ಅವುಗಳ ಪೈಕಿ ಸಿರಿಧಾನ್ಯಗಳ ಪಾಲು ದೊಡ್ಡದು. ಕೃಷಿಕಪರ ಸಂಘಟನೆಗಳು ರೂಪಿಸಿದ ಸಿರಿಧಾನ್ಯ ಚಳವಳಿ ಈಗ ದಿನದಿಂದ ದಿನಕ್ಕೆ ನಾಗಾಲೋಟದಿಂದ ಓಡುತ್ತಿದೆ. ಆರೋಗ್ಯದ ದೃಷ್ಟಿಯಿಂದಲಾದರೂ ಸಿರಿಧಾನ್ಯಗಳಿಗೆ ಮತ್ತೆ ಜೀವ ಬಂದಿದೆ.

### ಮಿಶ್ರ ಬೆಳೆ ವೈವಿಧ್ಯ

ಹಸಿರು ಕ್ರಾಂತಿಯು ಏಕಬೆಳೆ ಪದ್ಧತಿಯನ್ನು ಪ್ರಚುರಪಡಿಸಿತು. ಇದು ಆಹಾರ ಭದ್ರತೆಗೂ ಧಕ್ಕೆ ತರುವಂಥದು. ಆದರೆ ಹಲವು ಬೆಳೆಗಳ ಜತೆಗೆ ಸಿರಿಧಾನ್ಯಗಳನ್ನು ಮಿಶ್ರಬೆಳೆಯಾಗಿ ಬಿತ್ತನೆ ಮಾಡುವ ಅನೇಕ ಪದ್ಧತಿಗಳು (ಉದಾಹರಣೆಗೆ 'ಅಕ್ಕಡಿ') ರೂಢಿಯಲ್ಲಿವೆ. ಇದರಿಂದ ಕುಟುಂಬಕ್ಕೆ ಬೇಕಾದ ಧಾನ್ಯಗಳನ್ನು ಬೆಳೆದುಕೊಳ್ಳಲು ಸಾಧ್ಯ.

ರಾಗಿಯನ್ನು ಸಾಸಿವೆ, ಎಳ್ಳು, ಹುರುಳಿ, ಔಡಲ, ಕಡಲೆ, ತೊಗರಿ, ಜೋಳದ ಜತೆ ಬಿತ್ತುತ್ತಾರೆ. ಕೆಲವು ಕಡೆಗಳಲ್ಲಿ ರಾಗಿಯನ್ನು ನವಣೆ, ಸಜ್ಜೆ ಹಾಗೂ ಸಾಮೆ ಜತೆಯೂ ಬಿತ್ತನೆ ಮಾಡುತ್ತಾರೆ. ರಾಗಿ–ಸಾಸಿವೆ. ಶೇಂಗಾ– ಜೋಳ, ತೊಗರಿ, ಕಡಲೆ, ರಾಗಿ–ಹುರುಳಿ, ರಾಜಗಿರಿ–ಔಡಲ, ಜೋಳ–ಮೆಣಸಿನಕಾಯಿ ಇವು ಪ್ರಚಲಿತದಲ್ಲಿರುವ ಮಿಶ್ರಬೆಳೆ ಪದ್ಧತಿಗಳು. 'ಸಿರಿಧಾನ್ಯಗಳನ್ನು ಬರೀ ಬೆಳೆಯಾಗಿ ನೋಡುವುದು ಸರಿಯಲ್ಲ. ಅವು ಸುಸ್ಥಿರ ಕೃಷಿಯ ಮೂಲ. ಹವಾಮಾನ ವೈಪರೀತ್ಯಕ್ಕೆ ಹೊಂದಿಕೊಂಡು ಬೆಳೆಯುತ್ತವೆ. ಜತೆಗೆ ಪರಿಸರಕ್ಕೂ ಪೂರಕವಾಗಿವೆ' ಎಂದು ಸಿರಿಧಾನ್ಯ ಕೃಷಿಯತ್ತ ರೈತರನ್ನು ಪ್ರೇರೇಪಿಸುತ್ತಿರುವ 'ಸಹಜ ಸಮೃದ್ಧ' ಬಳಗದ ನಿರ್ದೇಶಕ ಜಿ. ಕೃಷ್ಣಪ್ರಸಾದ್ ಹೇಳುತ್ತಾರೆ.

### ಸಿರಿಧಾನ್ಯಗಳ ವಿವರ

ನಮ್ಮ ರಾಜ್ಯದಲ್ಲಿ ಒಂಬತ್ತು ಬಗೆಯ ಸಿರಿಧಾನ್ಯಗಳನ್ನು ಬೆಳೆಯಲಾಗುತ್ತಿದ್ದು, ಒಂದೊಂದು ಧಾನ್ಯದಲ್ಲೂ ಅಗಾಧ ತಳಿ



ವೈವಿಧ್ಯ ಪಡೆದಿದೆ. ಪೀಳಿಗೆಯಿಂದ ಪೀಳಿಗೆಗೆ ರೈತರಿಂದ ಸಾಗಿ ಬಂದಿರುವ ಸಿರಿಧಾನ್ಯಗಳು ವಾತಾವರಣ ಹಾಗೂ ಆಯಾ ಪ್ರದೇಶದ ಮಣ್ಣಿನ ಗುಣಲಕ್ಷಣಗಳಿಗೆ ಹೊಂದಿಕೊಳ್ಳುತ್ತ ಶತಮಾನಗಳಿಂದ ಉಳಿದುಕೊಂಡು ಬಂದಿವೆ. ಅಧಿಕ ಇಳುವರಿಯ ತಳಿಗಳ ಬೆನ್ನಟ್ಟಿ ಹೊರಟ ಪರಿಣಾಮವಾಗಿ ತಳಿ ವೈವಿಧ್ಯ ಕಾಣೆಯಾಗಿದೆ. ಇದನ್ನು ಸಂರಕ್ಷಿಸಿಕೊಳ್ಳುವ ಹೊಣೆಯು ಗ್ರಾಹಕ, ರೈತ ಹಾಗೂ ನಾಗರಿಕ ಸಮಾಜದ ಮೇಲಿದೆ.

### ರಾಗಿ

'ಬಡವರ ಬಂಗಾರ' ಎಂದೇ ಬಣ್ಣಿಸಲ್ಪಡುವ ರಾಗಿಯು ಭಾರತ ಮತ್ತು ಆಫ್ರಿಕಾ ದೇಶಗಳ ಪ್ರಮುಖ ಬೆಳೆಗಳಲ್ಲೊಂದು. ದಾಸವರೇಣ್ಯ ಪುರಂದರ ದಾಸರು ಇದನ್ನು ಹೊಗಳಿದ್ದಾರೆ. ಕನಕದಾಸರು 'ರಾಮಧಾನ್ಯ' ಎಂದು ಬಣ್ಣಿಸಿದ್ದಾರೆ. ಜನಪದರಿಂದ ರಾಗಿಯಷ್ಟು ಪ್ರಶಂಸೆ ಪಡೆದ ಮತ್ತೊಂದು ಧಾನ್ಯ ಇಲ್ಲವೇನೋ?! 'ರಾಗಿ ಮುದ್ದೆ'ಯು ರಾಜ್ಯದ ಅತ್ಯಂತ ಜನಪ್ರಿಯ ಅಡುಗೆಗಳಲ್ಲಿ ಒಂದು.

ಅಧಿಕ ಪ್ರೋಟಿನ್ ಹೊಂದಿರುವ ರಾಗಿ, ಸಮತೋಲಿತ ಪ್ರಮಾಣದಲ್ಲಿ ಅಮಿನೊ ಆಸಿಡ್, ವಿಟಮಿನ್ 'ಎ', 'ಬಿ' ಹಾಗೂ ರಂಜಕವನ್ನು ಒಳಗೊಂಡಿದೆ. ಅತ್ಯಧಿಕ ಪ್ರಮಾಣದಲ್ಲಿರುವ ಪೋಷಕ ನಾರಿನಂಶ ಮಲಬದ್ಧತೆ, ರಕ್ತದೊತ್ತಡ ಹಾಗೂ ಕರುಳಿನ ತೊಂದರೆಯನ್ನು ದೂರ ಮಾಡುತ್ತದೆ. ಕಬ್ಬಿಣ ಹಾಗೂ ಪಾಲಿಫಿನಾಲ್ಸ್ ಹೊಂದಿರುವ ಈ ಧಾನ್ಯ ಮಕ್ಕಳ ಸಿದ್ಧ ಆಹಾರಕ್ಕೆ ಬೇಕಾದ ಅತ್ಯಂತ ಪ್ರಮುಖ ಪದಾರ್ಥ. ರಕ್ತದಲ್ಲಿನ ಗ್ಲುಕೋಸ್ ಮಟ್ಟವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಈ ಸಿರಿಧಾನ್ಯವು





Downloaded From:www.kpscvaani.com



ಮಧುಮೇಹಿಗಳಿಗೆ ಹೇಳಿ ಮಾಡಿಸಿದಂಥದು. ರಾಗಿ ಮುದ್ದೆ ಬರೀ ಆಹಾರ ಮಾತ್ರವಲ್ಲ, ಸಾಂಪ್ರದಾಯಿಕ ಅಡುಗೆ ಸಂಸ್ಕೃತಿಯ ಪ್ರತೀಕ.

**ಜೋಳ**

ಜಗತ್ತಿನ ಒಣಪ್ರದೇಶದ ದಿನನಿತ್ಯದ ಆಹಾರವಾಗಿರುವ ಜೋಳ, ಪ್ರಮುಖ ಸಾಂಪ್ರದಾಯಿಕ ಅಡುಗೆಗೂ ಬಳಕೆಯಾಗುತ್ತದೆ. ಬೇಸಿಗೆಯಲ್ಲಿ ಸಹ ಬೆಳೆಯುವ ಜೋಳ ಕಡಿಮೆ ತಾಪಮಾನಕ್ಕೂ ಸಹಿಷ್ಣುತಾ ಸ್ವಭಾವ ಹೊಂದಿದೆ. ಕೀಟ– ರೋಗ ಬಾಧೆಯನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಜೋಳಕ್ಕಿರುವುದರಿಂದ ಎಂಥದೇ ವ್ಯತಿರಿಕ್ತ ವಾತಾವರಣದಲ್ಲೂ ಬೆಳೆಯುತ್ತದೆ. ಪೊಟಾಷಿಯಂ ಮತ್ತು ರಂಜಕ ಹೇರಳವಾಗಿರುವ ಜೋಳದಲ್ಲಿ ಉತ್ತಮ ಪ್ರಮಾಣದ ಕ್ಯಾಲ್ಸಿಯಂ, ಕಬ್ಬಿಣ ಮತ್ತು ಸೋಡಿಯಂ ಕೂಡ ಇದೆ. ಕಬ್ಬಿಣ ಮತ್ತು ಸತು ಹೇರಳವಾಗಿರುವುದರಿಂದ, ಪೌಷ್ಟಿಕಾಂಶ ಕೊರತೆಯನ್ನು ಸರಿದೂಗಿಸಲು ಜಗತ್ತಿನ ವಿವಿಧ ದೇಶಗಳಲ್ಲಿ ಜೋಳವನ್ನು ಪ್ರಮುಖ ಆಹಾರವನ್ನಾಗಿ ಬಳಸುತ್ತಾರೆ. ಗರ್ಭಿಣಿಯರಿಗೆ ದಿನನಿತ್ಯದ ಊಟದಲ್ಲಿ ಜೋಳವನ್ನು ಸೇರಿಸುವುದರಿಂದ ಖನಿಜಾಂಶ ಮತ್ತು ವಿಟಮಿನ್ ಪೂರಕ ಪ್ರಮಾಣದಲ್ಲಿ ಲಭ್ಯವಾಗುತ್ತವೆ. ಹೃದಯ ಸಂಬಂಧಿ ಸಮಸ್ಯೆಗಳು, ಅತಿಯಾದ ತೂಕ ಹಾಗೂ ಸಂಧಿವಾತ ಕಾಯಿಲೆಗಳಿಗೆ ಜೋಳದ ಆಹಾರ ಉತ್ತಮ ಪರಿಹಾರ ಕೊಡಬಲ್ಲದು.

**ಕೊರಲೆ**

ಕರ್ನಾಟಕದ ಮಧ್ಯಭಾಗ ಹಾಗೂ ರಾಯಲಸೀಮಾದ ಒಣಪ್ರದೇಶದಲ್ಲಿ ಬೆಳೆಯುವ ಕೊರಲೆಯು ಅಪರೂಪದ ಸಿರಿಧಾನ್ಯ. ಯಾವುದೇ ವಾತಾವರಣಕ್ಕೂ ಹೊಂದಿಕೊಂಡು, ಬರನಿರೋಧಕ ಗುಣದೊಂದಿಗೆ ಬೆಳೆಯಬಲ್ಲ ಬೆಳೆ ಇದು. ಕಡಿಮೆ ಫಲವತ್ತಾದ ಮಣ್ಣಿದ್ದರೂ ಬೆಳೆಯುವ ಕೊರಲೆ, ಮರಗಳ ನೆರಳಿನಲ್ಲೂ ಒಳ್ಳೆಯ ಇಳುವರಿ ಕೊಡುತ್ತದೆ. ಉತ್ತಮ ಪ್ರಮಾಣದ ಮೇವು ಒದಗಿಸುವ ಈ ಬೆಳೆ, ಮಣ್ಣಿನ ಸವಕಳಿ ಹಾಗೂ ಕಳೆಯನ್ನು ತಡೆಯಬಲ್ಲದು. ಅಗತ್ಯ ಪೋಷಕಾಂಶಗಳಿಂದ ಸಮೃದ್ಧವಾಗಿರುವ ಕೊರಲೆ, ಗ್ಲುಟೇನ್‌ನಿಂದ ಮುಕ್ತವಾಗಿದೆ. ಇತರ ಯಾವುದೇ ಸಿರಿಧಾನ್ಯಕ್ಕಿಂತ ಹೆಚ್ಚಿಗೆ ಪೋಷಕ ನಾರು ಹೊಂದಿದೆ. ಕೊರಲೆ ಅಕ್ಕಿಯಿಂದ ಮಾಡುವ ರೊಟಿ ಹಾಗೂ ಬಿರಿಯಾನಿ ಬಲು ರುಚಿಕರ. ಕೊರಲೆಯ ಕಡಕ್ ರೊಟ್ಟಿಯನ್ನು ಒಂದು ತಿಂಗಳಿಗಿಂತಲೂ ಹೆಚ್ಚಿನ ಕಾಲ ಸಂಗ್ರಹಿಸಿ ಇಡಬಹುದು.

**ನವಣೆ**

ಮಹಾಕವಿ ಕಾಳಿದಾಸನು ತನ್ನ 'ಶಾಕುಂತಲೆ' ಕೃತಿಯಲ್ಲಿ ಕಣ್ವ ಋಷಿಯು ಶಕುಂತಲೆಯನ್ನು ದುಷ್ಯಂತನ ಆಸ್ಥಾನಕ್ಕೆ ಕಳಿಸುವಾಗ ಆಕೆಯ ಉಡಿಯಲ್ಲಿ ನವಣೆ ಸುರಿಯುವ ಚಿತ್ರಣ ನೀಡಿದ್ದಾನೆ. ಮೂರ್ನಾಲ್ಕು ದಶಕಗಳ ಹಿಂದಿನವರೆಗೂ ನವಣೆ ಅಕ್ಕಿ ಅನ್ನ ನಿತ್ಯದ ಆಹಾರವಾಗಿತ್ತು. ಪೋಷಕಾಂಶಗಳಿಂದ ತುಂಬಿರುವ ನವಣೆಯು ರುಚಿಕರ ಅಡುಗೆಗೆ ಹೇಳಿ ಮಾಡಿಸಿದಂಥದು. ಸುಲಭವಾಗಿ ಜೀರ್ಣವಾಗುವ ಹಾಗೂ ಯಾವುದೇ ಬಗೆಯ ಅಲರ್ಜಿ ಉಂಟು ಮಾಡದ ಈ ಧಾನ್ಯವನ್ನು ಮಕ್ಕಳು ಹಾಗೂ ಗರ್ಭಿಣಿಯರಿಗೆ ಕೊಡಬಹುದು. ಪೋಷಕ ನಾರು, ಪ್ರೋಟಿನ್, ವಿಟಮಿನ್ ಹಾಗೂ ಖನಿಜಾಂಶಗಳಿಂದ ನವಣೆ ಸಮೃದ್ಧವಾಗಿದೆ. ಉದರ ಸಂಬಂಧಿ ಕಾಯಿಲೆಗಳಿಗೆ ರಾಮಬಾಣ ಎನಿಸಿರುವ



Downloaded From:www.kpscvaani.com

ನವಣೆಯು ಬೊಜ್ಜು, ಮಲಬದ್ಧತೆ, ಸಂಧಿವಾತ, ಜ್ವರ, ಉರಿಮೂತ್ರ ಹಾಗೂ ವಾಂತಿ–ಭೇದಿ ಸಮಯದಲ್ಲಿ ಅತ್ಯುತ್ತಮ ಪರಿಹಾರ ಕೊಡುತ್ತದೆ. ರಕ್ತದಲ್ಲಿನ ಸಕ್ಕರೆ ಅಂಶ ಹಾಗೂ ಕೊಲೆಸ್ಟ್ರಾಲ್ ನಿಯಂತ್ರಿಸುವ ಈ ಸಿರಿಧಾನ್ಯವು ಮಧುಮೇಹ ಹಾಗೂ ಅಸಿಡಿಟಿಯಿಂದ ಬಳಲುವವರಿಗೆ ವರದಾನ.

**ಊದಲು**

ಈಜಿಪ್ಟ್‌ನ ವಿಶ್ವವಿಖ್ಯಾತ ಪಿರಮಿಡ್‌ಗಳಲ್ಲಿನ 'ಮಮ್ಮಿ'ಗಳ ಶರೀರವನ್ನು ತಜ್ಞರು ಪರೀಕ್ಷೆಗೆ ಒಳಪಡಿಸಿದಾಗ ಕಾಣಿಸಿದ್ದು ಏನು ಗೊತ್ತೇ? ಊದಲು ಧಾನ್ಯದ ಅವಶೇಷ. ಇದು ಊದಲು ಜನಪ್ರಿಯತೆ ತಿಳಿಸುವ ನಿದರ್ಶನ. ಕೃಷಿಗೆ ಒಳಪಡಿಸಿದ ಮೊದಲ ಸಿರಿಧಾನ್ಯ ಇದು ಎಂದೂ ಹೇಳಲಾಗುತ್ತದೆ. ಪ್ರೋಟಿನ್ ಮತ್ತು ಪೋಷಕ ನಾರಿನಿಂದ ತುಂಬಿರುವ, ಆದರೆ ಕಡಿಮೆ ಶರ್ಕರಪಿಷ್ಟವಿರುವ ಊದಲು ಶತಮಾನಗಳಿಂದಲೂ ಸಾಗಿಬಂದಿದೆ. ಊದಲು ಅಕ್ಕಿಯ ತೌಡು ಬಿ–ಕಾಂಪ್ಲೆಕ್ಸ್ ವಿಟಮಿನ್‌ನ ಅತ್ಯುತ್ತಮ ಆಕರವಾಗಿದೆ. ಇದರಿಂದಾಗಿ ಸುಲಭವಾಗಿ ಜೀರ್ಣವಾಗುವ ಈ ಧಾನ್ಯ, ಒಮ್ಮೆ ಸೇವಿಸಿದರೆ ಶಕ್ತಿಯನ್ನು ಸತತವಾಗಿ ನೀಡುವ ಗುಣಲಕ್ಷಣ ಹೊಂದಿದೆ. ಮಧುಮೇಹ ಹಾಗೂ ಹೃದಯ ಸಂಬಂಧಿ ರೋಗಗಳನ್ನು ನಿಯಂತ್ರಿಸುವ ಸಾಮರ್ಥ್ಯ ಈ ಧಾನ್ಯಕ್ಕೆ ಇದೆ. ಆಧುನಿಕ ಶೈಲಿಯ ಬದುಕಿನಿಂದಾಗಿ ಬರುವ ಜಡತ್ವ ಹಾಗೂ ಇನ್ನಿತರ ರೋಗಗಳಿಗೆ ಊದಲು ಅಕ್ಕಿಯು ನಿಸರ್ಗ ನೀಡಿದ ಕಾಣಿಕೆಯಾಗಿದೆ.

**ಸಾಮೆ**

ಸಾಂಪ್ರದಾಯಿಕ ಬೆಳೆಗಳಲ್ಲಿ ಒಂದಾದ ಸಾಮೆಯನ್ನು ಭಾರತದಾದ್ಯಂತ ಬೆಳೆಯುತ್ತಾರೆ. ವಿವಿಧ ರಾಜ್ಯಗಳಲ್ಲಿ ರೈತರು ಅನುಸರಿಸುವ ಮಿಶ್ರ ಕೃಷಿ ಪದ್ಧತಿಯಲ್ಲಿ ಸಾಮೆಯನ್ನು ಇತರ ಸಿರಿಧಾನ್ಯಗಳು, ಬೇಳೆ ಕಾಳು ಹಾಗೂ ಎಣ್ಣೆಬೀಜಗಳ ಜತೆಗೆ ಸೇರಿಸಿ ಬೆಳೆಯುತ್ತಾರೆ. ಇದನ್ನು ಅಕ್ಕಿಯ ರೂಪದಲ್ಲೇ ಬಳಸಬಹುದಾಗಿದ್ದು, ಅಕ್ಕಿ ಬಳಸಿ ಮಾಡುವ ಅಡುಗೆಗಳನ್ನು ಇದರಿಂದ ಮಾಡಬಹುದು. ಗಾತ್ರದಲ್ಲಿ ಇತರ ಸಿರಿಧಾನ್ಯಗಳಿಗಿಂತ ಸಾಮೆ ಕಾಳು ಸಣ್ಣದಾಗಿದ್ದು ಕಬ್ಬಿಣ ಮತ್ತು ಪೋಷಕ ನಾರಿನಿಂದ ಸಮೃದ್ಧವಾಗಿದೆ. ಸಂಸ್ಕರಿಸಿದ ತಿನಿಸುಗಳು, ಕುರುಕಲು ತಿಂಡಿ, ಬಿಸ್ಕಿಟ್, ಮಕ್ಕಳ ಸಿದ್ಧ ಆಹಾರಗಳ ತಯಾರಿಕೆಯಲ್ಲಿ ಅಧಿಕ ಪ್ರಮಾಣದ ಸಾಮೆಯನ್ನು ಬಳಸಲಾಗುತ್ತದೆ. ಇದು ವೈದ್ಯಕೀಯ ಗುಣಸ್ವಭಾವ ಹೊಂದಿದ್ದು, ಯಕೃತ್ತು ರೋಗ, ಎದೆಯುರಿ, ಅಜೀರ್ಣ, ಋತುಸ್ರಾವ ತೊಂದರೆಗೆ ಪರಿಹಾರ ನೀಡುತ್ತದೆ. ಪುರುಷರಲ್ಲಿ ವೀರ್ಯಾಣುವಿನ ಸಂಖ್ಯೆಯನ್ನು ವೃದ್ಧಿಸುವ ಗುಣವನ್ನು ಹೊಂದಿದೆ. ಅಲ್ಲದೆ ಬೊಜ್ಜು ಮತ್ತು ಸಂಧಿವಾತ ಶಮನಕ್ಕೂ ಸಹಕಾರಿ.

**ಹಾರಕ**

'ಬರಗಾಲದ ಮಿತ್ರ' ಎಂಬ ಹೆಗ್ಗಳಿಕೆ ಹೊಂದಿರುವ ಹಾರಕಕ್ಕೆ ಸುಮಾರು ಮೂರು ಸಾವಿರ ವರ್ಷಗಳ ಇತಿಹಾಸವಿದೆ. ಕಡಿಮೆ ಮಳೆ, ಅಥವಾ ಬಂಜರು ನೆಲದಲ್ಲಿ ಕೂಡ ಬೆಳೆಯುವ ಸಾಮರ್ಥ್ಯ ಇದಕ್ಕಿದೆ. ಅಧಿಕ ಪೋಷಕ ನಾರು ಇದರಲ್ಲಿದೆ. ಅಧಿಕ ಪ್ರೋಟಿನ್ ಹಾಗೂ ಕಡಿಮೆ ಕೊಬ್ಬು ಹಾರಕದಲ್ಲಿದ್ದು, ವಿಟಮಿನ್ 'ಬಿ', ಫೋಲಿಕ್ ಆಸಿಡ್, ಕ್ಯಾಲ್ಸಿಯಂ, ಕಬ್ಬಿಣ, ಪೊಟಾಷಿಯಂ, ಮೆಗ್ನಿಷಿಯಂ ಹಾಗೂ ಸತು ಹೇರಳವಾಗಿವೆ. ಲಿಸಿಥಿನ್ ಹೆಚ್ಚು ಪ್ರಮಾಣದಲ್ಲಿ ಇರುವುದರಿಂದ ಸುಲಭವಾಗಿ ಜೀರ್ಣವಾಗುತ್ತದೆ. ಇದು ನರರೋಗಗಳನ್ನು ವಾಸಿ ಮಾಡುವ ಸಾಮರ್ಥ್ಯ ಹೊಂದಿದೆ. ಹೃದಯ ಸಂಬಂಧಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಅಧಿಕ ರಕ್ತದೊತ್ತಡ ಹಾಗೂ ಕೊಲೆಸ್ಟ್ರಾಲ್ ಮಟ್ಟ ನಿಯಂತ್ರಿಸಲು ಹಾರಕ ಸಹಕಾರಿ. ಹಾರಕ ಅಕ್ಕಿಯಿಂದ ತಯಾರಿಸಿದ ಅನ್ನವು ಶರೀರಕ್ಕೆ ತಂಪು ನೀಡುತ್ತದೆ. ಬೇಸಿಗೆಯಲ್ಲಿ ಇದರ ಸೇವನೆ ಹೆಚ್ಚು ಸೂಕ್ತ.

**ಸಜ್ಜೆ**

ವಿವಿಧ ಬಗೆಯ ಹವಾಗುಣಗಳಲ್ಲಿ ಬೆಳೆಯುವ ಸಜ್ಜೆಯು ಮುಖ್ಯ ಬೆಳೆಗಳಲ್ಲೊಂದು. ಸಾಕಷ್ಟು ಪ್ರಮಾಣದ ಮೇವು, ಉತ್ಕೃಷ್ಟ ಗುಣಮಟ್ಟದ ಕಾಳು ಕೊಡುವ ಈ ಬೆಳೆಯು ಸಮಶೀತೋಷ್ಣ ಪ್ರದೇಶದ ಜನರ ಪ್ರಮುಖ ಆಹಾರ. ಕಡಿಮೆ ಮಳೆ ಹಾಗೂ ಫಲವತ್ತತೆ, ಅಧಿಕ ತಾಪಮಾನ ಇರುವ ಪ್ರದೇಶದಲ್ಲಿ ಬೆಳೆಯುವ ಧಾನ್ಯ ಇದು. ಹೇರಳ ಪ್ರಮಾಣದಲ್ಲಿ ಕೆರೊಟಿನ್ ಒಳಗೊಂಡಿರುವ ಸಜ್ಜೆಯು ದೃಷ್ಟಿ ಸುಧಾರಣೆಗೆ ಸಹಕಾರಿ. ಬೊಜ್ಜು, ಮಧುಮೇಹ, ಮೂಲವ್ಯಾಧಿ, ಅಧಿಕ ರಕ್ತದೊತ್ತಡ ಹಾಗೂ ಉಸಿರಾಟ ತೊಂದರೆಯಿಂದ ಬಳಲುವವರಿಗೆ ಸಜ್ಜೆ ಸೇವನೆ ಒಳ್ಳೆಯದು. ಆರೋಗ್ಯಕ್ಕೆ ಪೂರಕವಾದ ಕ್ಯಾಲ್ಸಿಯಂ, ಮೆಗ್ನಿಷಿಯಂ, ಸತು ಹಾಗೂ ವಿಟಮಿನ್ 'ಎ' ಮತ್ತು 'ಬಿ' ಒಳಗೊಂಡಿರುವ ಸಜ್ಜೆಯು ಇತರ ಸಿರಿಧಾನ್ಯಗಳಿಗಿಂತ ಹೆಚ್ಚು ಶಕ್ತಿ ಕೊಡಬಲ್ಲದು. ಕೊಲೆಸ್ಟ್ರಾಲ್ ಮಟ್ಟ ನಿಯಂತ್ರಿಸಲು ಇದು ಸಹಕಾರಿ. ಸಜ್ಜೆಯ ಕಾಳನ್ನು ತೆನೆಯಿಂದ ಬೇರ್ಪಡಿಸಿ, ಹಿಟ್ಟು ಮಾಡಿ ಬಗೆಬಗೆಯ ರುಚಿಕರ ಅಡುಗೆ ಮಾಡಲಾಗುತ್ತದೆ. ಈ ಪೈಕಿ ಸಜ್ಜೆ ರೊಟ್ಟಿ ಅತ್ಯಂತ ಜನಪ್ರಿಯ ಆಹಾರ. ವಾರಗಟ್ಟಲೇ ಕೆಡದಂತೆ ಇಡಬಹುದು ಎಂಬುದೇ ಇದರ ಹೆಚ್ಚುಗಾರಿಕೆ. ಸಜ್ಜೆಯನ್ನು ನೀರಿನಲ್ಲಿ ನೆನೆಸಿ, ಮೊಳಕೆ ಕಟ್ಟಿ, ಹುರಿದು ಪುಡಿ ಮಾಡಿ ತಯಾರಿಸುವ 'ಮಾದಲಿ' ತಿಂಡಿಯು ಹಬ್ಬದ ತಿನಿಸುಗಳಲ್ಲೊಂದು.

**ಬರಗು**

ಸಂಪೂರ್ಣ ಗ್ಲುಟೇನ್ ರಹಿತವಾಗಿರುವ ಬರಗು, ಸಾಕಷ್ಟು ಪ್ರಮಾಣದ ಶರ್ಕರಪಿಷ್ಟ ಮತ್ತು ಕೊಬ್ಬಿನಾಮ್ಲ ಹೊಂದಿದೆ. ಸಂಬಾರು ಪದಾರ್ಥಗಳಿಗೆ ಹೋಲಿಸಿದರೆ, ಬರಗು ಧಾನ್ಯದಲ್ಲಿ ಅಧಿಕ ಮ್ಯಾಂಗನೀಸ್ ಇದೆ. ಬರಗಿನಲ್ಲಿ ಅಧಿಕ ಪ್ರಮಾಣದ ಪ್ರೋಟಿನ್, ಪೋಷಕ ನಾರು (ಡಯಟರಿ ಫೈಬರ್), ಪಿಷ್ಟ ಹಾಗೂ ಕೊಬ್ಬಿನಾಮ್ಲ ಇವೆ. ಅಧಿಕ ಪ್ರಮಾಣದಲ್ಲಿರುವ ಕ್ಯಾಲ್ಸಿಯಂ, ಶರೀರದ ಮೂಳೆಗಳು ಗಟ್ಟಿಮುಟ್ಟಾಗಿ ಇರುವಂತೆ ನೋಡಿಕೊಳ್ಳುತ್ತದೆ. ಕೊಲೆಸ್ಟ್ರಾಲ್ ಮಟ್ಟವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಈ ಧಾನ್ಯ, ಹೃದಯದ ರೋಗ ಹಾಗೂ ಸ್ತನ ಕ್ಯಾನ್ಸರ್ ಅನ್ನು ದೂರವಿಡುತ್ತದೆ. ಚರ್ಮದ ಹೊಳಪನ್ನು ಹೆಚ್ಚಿಸಿ, ಸಹಜವಾಗಿ ಕಾಂತಿಯನ್ನು ತರುತ್ತದೆ. ಸಂಸ್ಕರಿಸಿದ ಬರಗು ಅಕ್ಕಿಯಿಂದ ಬಗೆಬಗೆಯ ರುಚಿಕರ ಅಡುಗೆ ಮಾಡಬಹುದು. ಊಟ ಮಾಡಿದ ದೀರ್ಘ ಅವಧಿಯ ಬಳಿಕವಷ್ಟೇ ನಿಧಾನವಾಗಿ ಶಕ್ತಿ ಬಿಡುಗಡೆಯಾಗುತ್ತದೆ. ಈ ವಿಶೇಷತೆಯಿಂದಾಗಿಯೇ ಬೆಳಿಗ್ಗೆಯಿಂದ ಸಂಜೆವರೆಗೆ ಕೃಷಿ ಕೆಲಸ ಮಾಡುವ ರೈತರು ಬರಗು ಅಕ್ಕಿ ಅನ್ನವನ್ನು ಹೆಚ್ಚು ಸೇವಿಸುತ್ತಾರೆ.

ಈಗಲೂ ಕಾಲ ಮಿಂಚಿಲ್ಲ. ಈ ಅದ್ಭುತ ಧಾನ್ಯಗಳನ್ನು ಉಳಿಸುವತ್ತ ಕೈಜೋಡಿಸಲು ಸಾಕಷ್ಟು ಸಮಯಾವಕಾಶ ಇದೆ. ಊಟದ ತಟ್ಟೆಗೆ ಮತ್ತೆ ಸಿರಿಧಾನ್ಯಗಳು ಬರುವಂತೆ ಮಾಡಲು ಎಲ್ಲರೂ ಮುಂದಾಗೋಣ. ■



Downloaded From:www.kpscvaani.com



# ಮಕ್ಕಳ ಹಿತ ಕಾಪಾಡುವ ಪೋಕ್ಸೋ ಕಾಯ್ದೆ

> **ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವ ಮೂಲಕ ಸಂತ್ರಸ್ತ ಮಕ್ಕಳ ಹಿತವನ್ನು ಪೋಕ್ಸೋ ಕಾಯ್ದೆಯು ಕಾಪಾಡುತ್ತಿದೆ.**

ಎನ್. ನಾಗರತ್ನಮ್ಮ

**ಈ** ಆಧುನಿಕ ಜೀವನದಲ್ಲಿ ಯಾರೊಬ್ಬರೂ ಸುರಕ್ಷಿತರಲ್ಲ. ಅದರಲ್ಲೂ ಮಕ್ಕಳ ಸುರಕ್ಷತೆಯ ಕುರಿತು ಹೇಳುವುದೇ ಬೇಡ. ದಿನನಿತ್ಯ ಮಕ್ಕಳ ಮೇಲೆ ಒಂದಿಲ್ಲೊಂದು ಲೈಂಗಿಕ ದೌರ್ಜನ್ಯದಂತಹ ಘಟನೆಗಳು ಸಂಭವಿಸುವುದನ್ನು ಮಾಧ್ಯಮಗಳ ಮೂಲಕ ನೋಡುತ್ತಲೇ ಇರುತ್ತೇವೆ. ಮಕ್ಕಳು ಅಪರಿಚಿತ ವ್ಯಕ್ತಿಗಳಿಂದ ಮಾತ್ರ ಅಲ್ಲ, ಮನೆಯೊಳಗಿರುವ ಪರಿಚಿತ ವ್ಯಕ್ತಿಗಳಿಂದಲೂ ದೌರ್ಜನ್ಯಕ್ಕೆ ಒಳಗಾಗುತ್ತಾರೆ.

ಹಾಗಾಗಿ 18 ವರ್ಷದೊಳಗಿನ ಮಕ್ಕಳ ಮೇಲೆ ಪದೇ ಪದೇ ನಡೆಯುವ ಲೈಂಗಿಕ ಶೋಷಣೆ, ಕಿರುಕುಳ, ಮತ್ತು ಲೈಂಗಿಕ ದುರುಪಯೋಗಗಳಂತಹ ಹೀನ ಕೃತ್ಯಗಳನ್ನು ತಡೆಗಟ್ಟಿ, ಮಕ್ಕಳಿಗೆ ರಕ್ಷಣೆ, ಭದ್ರತೆ ಮತ್ತು ನ್ಯಾಯ ಒದಗಿಸುವುದರ ಜೊತೆಗೆ ಅವರ ಆಸಕ್ತಿ ಮತ್ತು ಹಿತ ಕಾಪಾಡುವ ಉದ್ದೇಶದಿಂದ 2012ರಲ್ಲಿ ಪೋಕ್ಸೋ ಕಾಯ್ದೆಯನ್ನು ಭಾರತ ಸರ್ಕಾರವು ಜಾರಿಗೊಳಿಸಿತು.

ಅದೇ ರೀತಿಯಲ್ಲಿ ರಾಜ್ಯದಲ್ಲಿನ ಪ್ರತಿಯೊಂದು ಮಗುವು ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ರೀತಿಯ ಹಿಂಸೆ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ಹೊಂದುವ ಸಲುವಾಗಿ ಎಲ್ಲಾ ಸಾಮಾಜಿಕ ವಲಯಗಳು ವಿಶೇಷವಾಗಿ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ ಭದ್ರತೆ ಮತ್ತು ಸಾಮಾಜಿಕ ನ್ಯಾಯವನ್ನು ಮಕ್ಕಳಿಗೆ ದೊರಕಿಸಿಕೊಡುವ ನಿಟ್ಟಿನಲ್ಲಿ ರಾಜ್ಯದಲ್ಲಿ ಲಿಂಗತ್ವ ನಾಗರಿಕತೆಯೂ ಸೇರಿದಂತೆ ಎಲ್ಲಾ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಭೌಗೋಳಿಕ ಇತ್ಯಾದಿ ತಾರತಮ್ಯಗಳನ್ನು ತೊಡೆದು ಹಾಕಲು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ನ್ನು ಜಾರಿಗೊಳಿಸಲಾಗಿದೆ.

ಮಾರ್ಗಸೂಚಿಯಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪೋಕ್ಸೋ ಕಾಯ್ದೆ–2012 ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರತಿ ಶಾಲೆಯಲ್ಲಿ "ಮಕ್ಕಳ ಸುರಕ್ಷಾ ಸಮಿತಿ" ಯನ್ನು ಶಾಲಾ ಮಟ್ಟದಲ್ಲಿ ರಚಿಸಬೇಕು. ಈ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಕಡ್ಡಾಯವಾಗಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸುತ್ತದೆ. ಸದರಿ ಸಭೆಯಲ್ಲಿ ಮಕ್ಕಳ ರಕ್ಷಣೆ, ಹಕ್ಕುಗಳ ಬಗ್ಗೆ ಚರ್ಚಿಸುವುದರೊಂದಿಗೆ ಅರಿವು ಮೂಡಿಸುವುದು ಹಾಗೂ ಆಪ್ತ ಸಮಾಲೋಚನೆ ಮಾಡಲಾಗುತ್ತದೆ. ಈ ಸಂಬಂಧ ಎಲ್ಲಾ ಶಾಲೆಗಳಲ್ಲಿ ದಾಖಲೆಗಳನ್ನು ಇಡುವುದು. ಮಕ್ಕಳ ಸುರಕ್ಷತೆ ಸಂಬಂಧ ಏನಾದರೂ ಅಡಚಣೆ, ತೊಂದರೆ ಉಂಟಾದಲ್ಲಿ ಸಂಬಂಧಿಸಿದವರಿಗೆ ಹಾಗೂ ಇಲಾಖೆಗಳಿಗೆ ನೆರವು ನೀಡಲಾಗುತ್ತದೆ.

**ಮಕ್ಕಳ ಸಹಾಯವಾಣಿ 1098 :**

ಪ್ರತಿ ಶಾಲೆಯಲ್ಲೂ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಗೋಡೆ ಬರಹದಲ್ಲಿ ಬರೆಸುವ ಜೊತೆಗೆ ಈ ಬಗ್ಗೆ ವ್ಯಾಪಕ ಪ್ರಚಾರ ನಡೆಸಬೇಕು. ಹದಿಹರೆಯದ



Downloaded From:www.kpscvaani.com

ಮಕ್ಕಳು ಮಾನಸಿಕವಾಗಿ ತೊಂದರೆ ಅಥವಾ ಸಮಸ್ಯೆಗೊಳಗಾದಲ್ಲಿ ಮಕ್ಕಳ ನಿರ್ದೇಶನಾಲಯವು ಮಕ್ಕಳಿಗಾಗಿ ಉಚಿತ ಆಪ್ತಸಮಾಲೋಚನಾ ಸೇವೆ ಒದಗಿಸಲು 14499 ಟೋಲ್ ಫ್ರೀ ಸಂಖ್ಯೆಯನ್ನು ಬಿಡುಗಡೆ ಮಾಡಿದೆ. ಈ ಸಂಖ್ಯೆಯ ಬಗ್ಗೆಯೂ ಶಾಲೆಗಳಲ್ಲಿ ಪ್ರಚಾರ ಮಾಡಬೇಕು.

ಶಾಲಾ ಕಾಲೇಜುಗಳಲ್ಲಿ ದೂರು ಮತ್ತು ಸಲಹಾ ಪೆಟ್ಟಿಗೆಯನ್ನು ಮಕ್ಕಳಿಗೆ ನಿಲುಕುವ ಎತ್ತರದಲ್ಲಿ ಅಳವಡಿಸಿ ಬೀಗ ಹಾಕಬೇಕು. ಸಲಹಾ ಪೆಟ್ಟಿಗೆಯನ್ನು ಕನಿಷ್ಠ ವಾರಕ್ಕೊಮ್ಮೆ ಮಕ್ಕಳ ಸುರಕ್ಷತಾ ಸಮಿತಿಯ ಸಮ್ಮುಖದಲ್ಲಿ ತೆರೆದು, ದೂರುಗಳನ್ನು ನಿಯಮಾನುಸಾರ ಇತ್ಯರ್ಥಗೊಳಿಸಲು ಶಾಲಾ ಮಂಡಳಿಯು ಕ್ರಮವಹಿಸಬೇಕು.

ಈ ಕಾಯ್ದೆಯಡಿ ಶಿಕ್ಷೆ ಹೇಗಿರುತ್ತದೆ. ಇದು ಮಕ್ಕಳಿಗೆ ಹೇಗೆ ರಕ್ಷಣೆ ನೀಡುತ್ತದೆ ಎಂಬುದನ್ನು ತಿಳಿಯೋಣ:

ಪೋಕ್ಸೋ ಕಾಯ್ದೆಯು 18 ವರ್ಷದೊಳಗಿನ ಎಲ್ಲಾ ಹೆಣ್ಣು-ಗಂಡು, ತೃತೀಯ ಲಿಂಗೀಯ ಮಕ್ಕಳಿಗೂ ಅನ್ವಯವಾಗುತ್ತದೆ. ಈ ಕಾಯ್ದೆಯು ಮಕ್ಕಳನ್ನು ಕಾನೂನು ಬಾಹಿರ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸುವುದು, ಪ್ರೋತ್ಸಾಹಿಸುವುದು ಅಥವಾ ಒತ್ತಾಯಿಸುವುದು, ವೇಶ್ಯಾವೃತ್ತಿ ಅಥವಾ ಕಾನೂನುಬಾಹಿರ ಲೈಂಗಿಕ ಚಟುವಟಿಕೆಗಳ ಪ್ರಯೋಗಗಳಿಗೆ ಮಕ್ಕಳನ್ನು ಬಳಸಿಕೊಳ್ಳುವುದು ಹಾಗೂ ಅಶ್ಲೀಲ ಚಿತ್ರಣಕ್ಕಾಗಿ ಮತ್ತು ಸಾಮಗ್ರಿಗಳ ತಯಾರಿಯಲ್ಲಿ ಮಕ್ಕಳನ್ನು ಬಳಸಿ ಶೋಷಿಸುವುದನ್ನು ಸಂಪೂರ್ಣವಾಗಿ ತಡೆಗಟ್ಟಲು ಹಾಗೂ ಮಕ್ಕಳ ಖಾಸಗಿತನ ಮತ್ತು ಗೌಪ್ಯತೆಯನ್ನು ನ್ಯಾಯ ಪ್ರಕ್ರಿಯೆಯಲ್ಲಿ ರಕ್ಷಿಸುವುದು ಮತ್ತು ಗೌರವಿಸುವುದು, ಮಕ್ಕಳ ಹಿತದೃಷ್ಟಿಯಿಂದ, ಮಕ್ಕಳ ಸುರಕ್ಷತೆಗಾಗಿ ಕಾನೂನು ಜಾರಿಗೊಳಿಸುವುದು ಈ ಕಾಯ್ದೆಯ ಉದ್ದೇಶವಾಗಿದೆ.

ಇನ್ನು ಲೈಂಗಿಕ ಹಲ್ಲೆ ಕೇವಲ ಹೆಣ್ಣು ಮಕ್ಕಳ ಮೇಲೆ ಮಾತ್ರ ನಡೆಯುತ್ತಿಲ್ಲ. 2007 ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ನಡೆಸಿದ ಅಧ್ಯಯನದಂತೆ, ಲೈಗಿಂಕ ದೌರ್ಜನ್ಯಗಳಿಗೆ ಶೇಕಡ 52.94 ಹುಡುಗರು ಶೇಕಡ 47.6 ಹುಡುಗಿಯರು ಒಳಗಾಗಿದ್ದಾರೆ.

**ಅಪರಾಧಗಳಿಗೆ ಇರುವ ಶಿಕ್ಷೆ:**

ಮಕ್ಕಳ ಮೇಲೆ ಭೇದಕ ಲೈಂಗಿಕ ಹಲ್ಲೆ ಎಸಗುವವರಿಗೆ ಏಳು ವರ್ಷದಿಂದ ಜೀವಾವಧಿ ಕಾರಾಗೃಹ ಶಿಕ್ಷೆ ಹಾಗೂ ದಂಡವನ್ನೂ, ತೀವ್ರ ಬೇಧಕ ಲೈಂಗಿಕ ಹಲ್ಲೆ ಎಸಗುವವರಿಗೆ ಹತ್ತು ವರ್ಷದಿಂದ ಜೀವಾವಧಿವರೆಗೆ ಶಿಕ್ಷೆ ಹಾಗೂ ಗಂಭೀರ ಪ್ರಕರಣಕ್ಕೆ ಗಲ್ಲು ಶಿಕ್ಷೆಯನ್ನು ವಿಧಿಸಬಹುದು. (ಭಾರತೀಯ ದಂಡ ಸಂಹಿತೆಯ ಕಲಂ 375ಕ್ಕೆ 2018 ರಲ್ಲಿ ಆದ ತಿದ್ದುಪಡಿಯಂತೆ 18 ವರ್ಷದೊಳಗಿನ ಮದುವೆಯಾದ ಹೆಂಡತಿಯೊಂದಿಗಿನ ಲೈಂಗಿಕ ಸಂಪರ್ಕವನ್ನು ಭೇದಕ ಲೈಂಗಿಕ ಹಲ್ಲೆ ಎಂದು ಪರಿಗಣಿಸಲಾಗಿದೆ.)

ಲೈಂಗಿಕ ಹಲ್ಲೆ ಎಸಗುವವರಿಗೆ ಮೂರರಿಂದ ಐದು ವರ್ಷಗಳ ಕಾರಾಗೃಹ ಹಾಗೂ ದಂಡ ವಿಧಿಸಬಹುದು. ತೀವ್ರ ಲೈಂಗಿಕ ಹಲ್ಲೆ ಎಸಗುವವರಿಗೆ ಐದು ವರ್ಷದಿಂದ ಏಳು ವರ್ಷಗಳವರೆಗೆ ಕಾರಾಗೃಹ ಹಾಗೂ ದಂಡ ವಿಧಿಸಬಹುದು.

ಲೈಂಗಿಕ ಕಿರುಕುಳ ನೀಡುವವರಿಗೆ ಮೂರು ವರ್ಷಗಳವರೆಗೆ ಕಾರಾಗೃಹ ಹಾಗೂ ದಂಡ ವಿಧಿಸಬಹುದು. ಯಾರಾದರೂ ಮಕ್ಕಳನ್ನು ಕಾಮಪ್ರಚೋದಕ ಲೈಂಗಿಕ ಚಿತ್ರ ತಯಾರಿಕೆಯಲ್ಲಿ ಬಲವಂತವಾಗಿ ಬಳಸಿದವರಿಗೆ ಆಜೀವ ಪರ್ಯಂತ ಕಠಿಣ ಕಾರಾಗೃಹವಾಸ ಮತ್ತು ದಂಡ ವಿಧಿಸಬಹುದಾಗಿದೆ. ಅಪರಾಧಗಳನ್ನು ಮಾಡಲು ಯಾರು ಇನ್ನೊಬ್ಬರಿಗೆ ಬೆಂಬಲ ಅಥವಾ ಕುಮ್ಮಕ್ಕು ನೀಡುತ್ತಾರೋ ಅವರಿಗೂ ಕೂಡ ಆ ಅಪರಾಧಕ್ಕೆ ನೀಡಲಾಗುವ ಶಿಕ್ಷೆಯನ್ನೇ ಕೊಡಲಾಗುತ್ತದೆ.

ಭಾರತೀಯ ದಂಡ ಸಂಹಿತೆಗೆ 2013 ಮತ್ತು 2018 ರಂದು ಮಾಡಲಾದ ತಿದ್ದುಪಡಿ ಅಧ್ಯಾಯ 5 ರ ಸೆಕ್ಷನ್ 24ರ ಪ್ರಕಾರ ಈ ಕಾಯ್ದೆಗೆ ಕೆಲವು ತಿದ್ದುಪಡಿ ತರಲಾಗಿದೆ. ಅದರಂತೆ ಈ ಸೆಕ್ಷನ್ ಅಡಿಯಲ್ಲಿ ಯಾವುದೇ ವ್ಯಕ್ತಿ 16 ವರ್ಷದೊಳಗಿನ ಮಗುವಿನ ಮೇಲೆ ಅತ್ಯಾಚಾರ ನಡೆಸಿದರೆ 20 ವರ್ಷದಿಂದ ಆಜೀವ ಕಠಿಣ ಕಾರಾಗೃಹ ಶಿಕ್ಷೆ, ದಂಡ ಅಥವಾ ಮರಣದಂಡನೆ ವಿಧಿಸಲಾಗುವುದು. ಸಾಮೂಹಿಕ ಅತ್ಯಾಚಾರಕ್ಕೂ ಇದೇ ಶಿಕ್ಷೆಯನ್ನು ವಿಧಿಸಲಾಗುವುದು. ಇನ್ನು ಸಮೂಹಿಕ ಅತ್ಯಾಚಾರ ಪ್ರಕರಣದಲ್ಲೂ ಇದೇ ಶಿಕ್ಷೆಯನ್ನು ವಿಧಿಸಲಾಗುವುದು.

ಯಾವುದೇ ಮಾಧ್ಯಮಗಳು ಮಗುವಿನ ಹೆಸರು, ವಿಳಾಸ, ಭಾವಚಿತ್ರ, ಕೌಟುಂಬಿಕ ವಿವರ, ಶಾಲೆ, ನೆರೆ-ಹೊರೆ ಅಥವಾ ಮಗುವಿನ ಗುರುತನ್ನು ಬಹಿರಂಗಪಡಿಸುವ ಇನ್ನಾವುದೇ ವಿವರಗಳನ್ನು ತಮ್ಮ ವರದಿಯಲ್ಲಿ ಪ್ರಕಟಿಸಿ ಮಗುವಿನ ಗುರುತನ್ನು ಬಹಿರಂಗಗೊಳಿಸುವಂತಿಲ್ಲ. ಹಾಗೇನಾದರು ಮಗುವಿನ ಖಾಸಗಿ ಮಾಹಿತಿಯನ್ನು ಬಹಿರಂಗಗೊಳಿಸಿದರೆ ಅವರು ಪೋಕ್ಸೋ ಕಾಯ್ದೆ ಸೆಕ್ಷನ್ 23(2)ಉಲ್ಲಂಘಿಸಿದಂತ್ತಾಗುತ್ತದೆ. ಉಲ್ಲಂಘನೆ ಕಂಡುಬಂದರೆ ಮಾಧ್ಯಮದವರಿಗೆ ಕನಿಷ್ಠ ಆರು ತಿಂಗಳ ಕಾಲ ಕಾರಾಗೃಹ ಶಿಕ್ಷೆ ವಿಧಿಸಲಾಗುವುದು. ಇದು ಒಂದು ವರ್ಷದವರೆಗೂ ವಿಸ್ತರಿಸಬಹುದು ಅಥವಾ ದಂಡ, ಶಿಕ್ಷೆ ಎರಡನ್ನೂ ವಿಧಿಸಬಹುದು.


ಪೋಕ್ಸೋ ಕಾಯ್ದೆಯಡಿ ಸ್ವತಃ ಮಗು ಸೇರಿದಂತೆ ಯಾರು ಬೇಕಾದರೂ ವಿಶೇಷ ಬಾಲಾಪರಾಧಿ ಪೊಲೀಸ್ ಘಟಕ ಅಥವಾ ಸ್ಥಳೀಯ ಪೊಲೀಸರಲ್ಲಿ ಪ್ರಕರಣವನ್ನು ಸಲ್ಲಿಸಬಹುದು. ಇನ್ನು ಐಪಿಸಿಯ ಸೆಕ್ಷನ್ 354 ಮತ್ತು ಪೋಕ್ಸೋ ಕಾಯಿದೆಯ ಸೆಕ್ಷನ್ 8 ಹೊರತುಪಡಿಸಿ, ಉಳಿದೆಲ್ಲಾ ಸೆಕ್ಷನ್‌ಗಳಲ್ಲಿ ಜಾಮೀನು ಪಡೆಯಲು ಅವಕಾಶವಿರುತ್ತದೆ. ಆದರೆ ಪೋಕ್ಸೋ ಕಾಯ್ದೆಯಡಿ ದಾಖಲಾದ ಎಫ್‌ಐಆರ್ ಅನ್ನು ರಾಜಿ ಆಧಾರದ ಮೇಲೆ ರದ್ದುಗೊಳಿಸಲು ಆಗುವುದಿಲ್ಲ. ಎಫ್‌ಐಆರ್ ರದ್ದುಗೊಳಿಸುವ ಅಧಿಕಾರ ಕೇವಲ ಹೈಕೋರ್ಟ್‌ಗೆ ಮಾತ್ರ ಇರುತ್ತದೆ.

ರಾಜ್ಯದಲ್ಲಿ ಇತ್ತೀಚೆಗೆ ಪೋಕ್ಸೋ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಇತ್ತೀಚೆಗೆ ನ್ಯಾಯಾಂಗ ಅಕಾಡೆಮಿಯಲ್ಲಿ 'ಪೋಕ್ಸೋ' ಕಾಯ್ದೆ-2012 ಕ್ಕೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಸಹ ಹಮ್ಮಿಕೊಂಡಿತ್ತು.

ಲೈಂಗಿಕ ಅಪರಾಧ ಮತ್ತು ದೌರ್ಜನ್ಯಗಳಿಂದ ಮಕ್ಕಳನ್ನು ರಕ್ಷಿಸುವ ಉದ್ದೇಶದಿಂದ ಜಾರಿಗೆ ತರಲಾಗಿರುವ ಈ ಪೋಕ್ಸೋ ಕಾಯ್ದೆಯು ಮಕ್ಕಳ ಹಿತಾಸಕ್ತಿ ಮತ್ತು ಒಳಿತಿನ ರಕ್ಷಣೆಯಲ್ಲಿ ಸಹಾಯಕವಾಗಿದೆ.


Downloaded From:www.kpscvaani.com

# ಪದಬಂಧ-41



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ದತ್ತು ಸ್ವೀಕರಿಸುವಾಗ ಹಾಕಿದ ಸಹಿ (4)
4. ಮನೆತನದವರೆಲ್ಲಾ ನೀಡಿದ ಓಟು (2)
5. ನೆಮ್ಮದಿ ಹೀಗೆ ಬಂದಿದೆ (4)
6. ಆದರದಿಂದ ತಿಳಿಸಿದ ಬೆಲೆ(2)
7. ಹುಕ್ಕೇರಿ ತಾಲೂಕಿನಲ್ಲಿ ಘಟಪ್ರಭಾ ನದಿಗೆ ಕಟ್ಟಿರುವ ರಾಜಾಲಖಮಗೌಡ ಅಣೆಕಟ್ಟನ್ನು ಹೀಗೂ ಕರೆಯುತ್ತಾರೆ (8)
9. ಎಲೆಕ್ಟ್ರಾನ್ ವೋಟಿಂಗ್ ಮಿಷಿನ್ ಅನ್ನು ಕನ್ನಡೀಕರಿಸಿ (8)
12. ರಾಯಭಾರಿಯಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (2)
13. ನಿಂಬೆ ಹಣ್ಣಿನ ಪಾನಕ (4)
15. ಶುನಕದ ಹತ್ತಿರ ಹಾರಿ ಬಂದಿರುವ ಗಿಳಿ (2)
16. ಈತ ದಿಕ್ಕಿಲ್ಲದವನು (4)

## ಮೇಲಿಂದ ಕೆಳಕ್ಕೆ

1. ದನಗಳನ್ನು ಕಾಯುವವನು (4)
2. ಕನ್ನಡಿಗರ ನಾಡು (4)
3. ತಿಂಗಳಿಲ್ಲಿ ಉಲ್ಟಾ ಕಾಣುತ್ತಿದೆ (2)
4. ಮನಸ್ಸಿಗೆ ನಾಟುವುದು (4)
8. ಮುಖ ಇಲ್ಲಿದೆ (3)
9. ವಿನೋದಗಾರನಿವನು (4)
10. ಊರಿನ ಕಾವಲುಗಾರ (4)
11. ಪಕ್ಷದ ಹದಿಮೂರನೆಯ ದಿನ (4)
14. ಸಾಲದ ಮೇಲೆ ಕೊಡುವ ಹೆಚ್ಚಿನ ಹಣ (2)

## ಉತ್ತರ

**ಎಡದಿಂದ ಬಲಕ್ಕೆ**

1. ದತ್ತುಕತ್ತು 4. ಮತ 5. ಸಮಾಧಾನ 6. ದರ 7. ಹಿಡಕಲ್‌ಅಣೆಕಟ್ಟು 9. ವಿದ್ಯುನ್ಮಾನಮತಯಂತ್ರ 12. ತದೂ 13. ಷರಬತ್ತು 15. ಶುಕ 16. ಪರದೇಶಿ

**ಮೇಲಿಂದ ಕೆಳಕ್ಕೆ**

1. ದನಗಾಹಿ 2. ಕರ್ನಾಟಕ 3. ಸಮಾ 4. ಮನದಟ್ಟು 8. ಆನನ 9. ವಿದೂಷಕ 10. ತಳವಾರ 11. ತ್ರಯೋದಶಿ 14. ಬಡ್ಡಿ

### –: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com







ಮಾರ್ಚ್ 10 ರಂದು ಜೆ ಎನ್ ಟಾಟಾ ಆಡಿಟೋರಿಯಂನಲ್ಲಿ ನಗರ ಮತ್ತು ಯುವ ಜನತೆಗೆ ಮತದಾನದ ಮಹತ್ವ ತಿಳಿಸುವ ಸಲುವಾಗಿ ರಾಜ್ಯ ಚುನಾವಣಾ ಆಯೋಗ ಮತ್ತು ಬಿಬಿಎಂಪಿ ಜಂಟಿಯಾಗಿ ಆಯೋಜಿಸಿದ್ದ ವೋಟ್‌ಫೆಸ್ಟ್‌ಗೆ ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಅವರು ಚಾಲನೆ ನೀಡಿದ ಸಂದರ್ಭ. ಈ ಸಂದರ್ಭದಲ್ಲಿ ಆಯೋಗದ ಚುನಾವಣಾ ಆಯುಕ್ತರುಗಳಾದ ಅನೂಪ್ ಚಂದ್ರ ಪಾಂಡೆ, ಅರುಣ್ ಗೋಯೆಲ್ ಸೇರಿದಂತೆ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಅವರು ಉಪಸ್ಥಿತರಿದ್ದಾರೆ.

Downloaded From:www.kpscvaani.com

"VARTHA JANAPADA" Monthly - April 2023
"ವಾರ್ತಾ ಜನಪದ" ಮಾಸಿಕ – ಏಪ್ರಿಲ್ 2023

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com